
ಅರೆಬಾಸೆ ಯಕ್ಷಗಾನ

ವೀರಮಣಿ ಕಾಳಗ



ಮೂಲ

ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ

ಅರೆಬಾಸೆಗೆ

ಡಾ. ಮಾಧವ ಪೆರಾಜೆ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ದಶವರ್ಷ ಸಂಭ್ರಮದ ಪುಸ್ತಕಮಾಲಿಕೆ 2022

ವೀರಮಣಿ ಕಾಳಗ

ಅರೆಬಾಸೆ ಯಕ್ಷಗಾನ

ಮೂಲ

ದಿ. ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ

ಅರೆಬಾಸೆಗೆ

ಡಾ. ಮಾಧವ ಪೆರಾಜೆ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಮಡಿಕೇರಿ

Decennial Year Publication Series 2022

ವೀರಮಣಿ ಕಾಳಗ – ಅರೆಬಾಸೆ ಯಕ್ಷಗಾನ

Veeramani Kaalaga
Yakshagana Prasanga in Arebase by

Dr. Madhava Peraje
Professor, Department of Studies in Dravidian Culture
Kannada University Hampi, Vidyaranya
Mobile: 9448092732

ಸಲಹಾ ಸಮಿತಿ :
ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ
ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
ಶ್ರೀಮತಿ ಸ್ಮಿತಾ ಅಮೃತರಾಜ್
ಡಾ. ವಿಶ್ವನಾಥ ಬದಿಕಾನ
ಶ್ರೀ ಭರತೇಶ ಅಲಸಂಡೆಮಜಲು

ಪ್ರಕಟಣೆ :
ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಪುಸ್ತಕ ದೊರೆಯುವ ಸ್ಥಳ :
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಕಾಫಿಕೃಪ ಬಿಲ್ಡಿಂಗ್, ರಾಜಸೀಟ್ ರಸ್ತೆ, ಮಡಿಕೇರಿ
ದೂ: 08272–223055, ಮೊ : 6362522677
arebaseacademy@gmail.com, www.arebasheacademy.gov.in

ಪ್ರಕಟಣೆಯ ವರ್ಷ : 2022

ಆಕಾರ : ಕ್ರೌನ್ 1/8 ಕಾಗದ : 80 ಜಿಎಸ್‌ಎಂ ಮ್ಯಾಪ್ಲಿತೋ
ಪುಟಗಳು : 104 ಬೆಲೆ : ರೂ. 100
ಪ್ರತಿಗಳು : 200

ಮುಖಪುಟ ವಿನ್ಯಾಸ : **ಕಲ್ಲೂರು ನಾಗೇಶ**
ಪುಟವಿನ್ಯಾಸ ಮತ್ತು ಮುದ್ರಣ
ಆಕೃತಿ ಪ್ರಿಂಟ್ಸ್
ಲೈಟ್‌ಹೌಸ್ ಹಿಲ್ ರಸ್ತೆ, ಮಂಗಳೂರು – 575 001
ದೂ: 0824 2972002

ಅಧ್ಯಕ್ಷರ ಮಾತ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಕಟಣಾ ಯೋಜನೆ ಅಡಿಲಿ ಡಾ. ಮಾಧವ ಪೆರಾಜೆ ಅವರ ಅರೆಬಾಸೆ ಯಕ್ಷಗಾನ ಪ್ರಸಂಗ 'ವೀರಮಣಿ ಕಾಳಗ' ಬರ್ತಾ ಇರ್ದು ಕುಸಿನ ಸಂಗತಿ.

ಅರೆಬಾಸೆಲಿ ಯಕ್ಷಗಾನದ ಪದ್ಯ ಇಲ್ಲೆಂತೇಳುವ ಕಾಲಲಿ ನಾವ್‌ಗೆ ಪದ್ಯ ಬರ್ದ್‌ಕೊಟ್ಟ್ ಅರೆಬಾಸೆಲಿ ಯಕ್ಷಗಾನ ಮತ್ತೆ ತಾಳಮದ್ದಲೆ ಮಾಡಿಕೆ ಅವಕಾಸ ಮಾಡಿಕೊಟ್ಟವು ಭವ್ಯಶ್ರೀ ಕುಲ್ಕುಂದ. ಅರೆಬಾಸೆಲಿ ಯಕ್ಷಗಾನದ ಪದ್ಯನ ಬರೇವು ಬೇರೆ ಯಾರ್ ಒಳ ಅಂತಾ ನಾವು ಹುಡ್‌ಕತ್ತಾ ಇದ್ದೊ. ಈಗ ಆ ಸಾಲಿಗೆ ದೊಡ್ಡ ವಿದ್ವಾಂಸರಾದ ಡಾ. ಮಾಧವ ಪೆರಾಜೆ ಅವರ ಹೆಸ್ರ್ ಸೇರಿಕಂಡದ್ದಕ್ಕೆ ಅರೆಬಾಸಿಗರ್ ತುಂಬಾ ಹೆಮ್ಮೆ ಪಡೊಕು.

ಡಾ. ಮಾಧವ ಪೆರಾಜೆ ಅವು ಹಲಸಿಹಳ್ಳಿ ನರಸಿಂಹಶಾಸ್ತ್ರಿ ಅವರ ವೀರಮಣಿ ಕಾಳಗ ಪ್ರಸಂಗನ ಬಾರಿ ಲಾಯ್ಕ್‌ಲಿ ಅರೆಬಾಸೆಗೆ ಅನುವಾದ ಮಾಡಿ ಉಪಕಾರ ಮಾಡ್ಯೊಳೊ. ಮುಂದಿನ ದಿನಲಿ ಇನ್ನಸ್ಟ್ ಅರೆಬಾಸೆ ಯಕ್ಷಗಾನ ಪದ್ಯಗಳ ಮಾಧವ ಪೆರಾಜೆ ಅವು ಬರಿಯಲಿ ಆಗ ಬಾಸೆಗೆ ಹೆಚ್ಚ್ ಸಕ್ತಿ ಬಂದದೆ. ಈ ಪುಸ್ತಕದ ಕರಡ್ ತಿದ್ದ್‌ವಲ್ಲಿ ಸಹಕಾರ ಕೊಟ್ಟ ಸುಬ್ರಾಯ ಸಂಪಾಜೆ ಹಂಗೆನೇ ಪದ್ಯ ಓದಿ ಮುನ್ನುಡಿನ ಬರ್ದ್ ಕೊಟ್ಟ ಯಕ್ಷಗಾನ ಅರ್ತಗಾರಿಕೆ ಕಳಲಿ ದೊಡ್ಡ ಹೆಸ್ರ್ ಮಾಡ್ದ ಡಾ. ಪ್ರಭಾಕರ ಜೋಶಿ ಅವ್ಕೆ ದನ್ಯವಾದಗ.

2–7–2022 **ಲಕ್ಷ್ಮೀನಾರಾಯಣ ಕಜೆಗದ್ದೆ**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಕಲಾಭಾಷಾಂತರಕ್ಕೊಂದು ನಲ್ಮುಡಿ

ಕನ್ನಡ ಕೋಗಿಲೆಯ ವಿಶಿಷ್ಟ ಸ್ವರಗಳಲ್ಲೊಂದಾದ ಅರೆಭಾಷೆಯ ಈ ಯಕ್ಷಗಾನ ಪ್ರಸಂಗಕ್ಕೆ ನಾಲ್ಕು ಮಾತಿನ ನಲ್ನುಡಿ ಬರೆಯುವ ಅವಕಾಶವು ದೊಡ್ಡ ಗೌರವ. ಅದಕ್ಕಾಗಿ ಅರೆಭಾಷೆ ಅಕಾಡೆಮಿಯ ಅಧ್ಯಕ್ಷ ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ ಅವರಿಗೆ, ಪ್ರಸಂಗಕವಿಗೆ ನನ್ನ ಧನ್ಯವಾದ ಆದ್ಯ ಕರ್ತವ್ಯ.

ಇದರ ಕವಿ, ಮಿತ್ರ ಡಾ. ಮಾಧವ ಪೆರಾಜೆ ಅವರು ವಿದ್ವಾಂಸರು, ಜನಸಂಸ್ಕೃತಿ ತಜ್ಞರು, ಅರೆಭಾಷೆಯನ್ನು ಬಲ್ಲವರು. ಅದರಲ್ಲಿ ಹಿಡಿತ ಉಳ್ಳವರು. ಅವರು ಬರೆದ ಯಕ್ಷಗಾನ ಪ್ರಸಂಗ ಕಾವ್ಯವಾದ 'ಪರಿಪಂಥ' ಒಂದು ಪ್ರತ್ಯೇಕ ರೀತಿಯ ಕೃತಿಯಾಗಿದ್ದು ಪೌರಾಣಿಕ ವಸ್ತುವನ್ನು ಹೇಗೆ ಹೊಸ ನೋಟದಲ್ಲಿ ನೀಡಬಹುದೆಂಬುದಕ್ಕೆ ಒಳ್ಳೆಯ ದೃಷ್ಟಾಂತವಾಗಿದೆ. ಈಗ ಕಲೆಯ ಹೊಸ ಕವಲಿನ ಈ ಹೊಸ ಹೂವಿಗಾಗಿ ಅವರಿಗೆ ವಿಶೇಷ ಪ್ರಶಂಸೆ.

ಅರ್ವಾಚೀನ ಯುಗದ ಶ್ರೇಷ್ಠ ಯಕ್ಷಗಾನ ಕವಿಗಳಲ್ಲಿ ಒಬ್ಬರಾದ ದಿ. ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ (ಸು. 1860–1940?) ಅವರ ಪ್ರಸಂಗ 'ವೀರಮಣಿ ಕಾಳಗ'ವು ಅವರ ಹಲವು ಕೃತಿಗಳಂತೆ, ಪ್ರತ್ಯೇಕವಾದ ಸೊಬಗುಳ್ಳ ರಚನೆ.

ಪದ್ಮಪುರಾಣದಲ್ಲಿರುವ ಕಥೆಯನ್ನು ಆಧರಿಸಿ, ಇತರ ಆಕರಗಳು, ಸ್ವಂತ ಕಲ್ಪನೆಗಳು ಮತ್ತು ರಂಗಾನುಕೂಲವಾದ ಬದಲಾವಣೆಗಳನ್ನು ಅಳವಡಿಸಿಕೊಂಡು ರೂಪಿತವಾದುದು. ಇದರಲ್ಲಿ ಯೋಗಿನಿ ಕುಮುದಿನಿಯ ಕಥೆ ಮತ್ತು ವೀರಮಣಿಯ ಕಥಾನಕ ಸೇರಿವೆ. ಸೀತಾಪಹಾರಕ್ಕೆ ಕಾರಣನಾದ ಮಾರೀಚನ ಮಗಳಾದ ಕುಮುದಿನಿಯು ರಾಮಭಕ್ತೆಯಾಗಿ, ಶತ್ರುಘ್ನನಿಗೆ 'ಶಕ್ತ್ಯಾಯುಧ'ವನ್ನು ನೀಡುವುದು, ಒಂದು ಬಗೆಯ ಪ್ರಾಯಶ್ಚಿತ್ತ ಕಲ್ಪನೆಯ ವಿನ್ಯಾಸ. ವೀರಮಣಿಯ ಕಥಾನಕದಲ್ಲಿ ಶಿವನ ಮಾವನಾದ, ಆತ್ಯಂತಿಕ ಶೈವನಾದ ವೀರಮಣಿಯು ಪ್ರತಿನಿಧಿಸುವ ಶಿವತತ್ವ ಮತ್ತು ಶತ್ರುಘ್ನನ (ರಾಮ)ನ ಪಕ್ಷವು ಪ್ರತಿನಿಧಿಸುವ ಶ್ರೀರಾಮ (ಮೂಲ ರಾಮ) ತತ್ವಗಳ ಸಂಘರ್ಷದಂತೆ ಕಂಡು, ಕೊನೆಗೆ ಶಿವರಾಮತತ್ವರೂಪೀ ಸಮನ್ವಯದಲ್ಲಿ ಮಂಗಲವಾಗುತ್ತದೆ. ವಾದ – ಪ್ರತಿವಾದ – ಸಮನ್ವಯ ಸಿದ್ಧಾಂತದ ಒಂದು ಒಳ್ಳೆಯ ರೂಪವು ಕಥೆಗೆ ಇದ್ದು, ರಂಗಸ್ಥಳಕ್ಕೂ ಸೂಕ್ತವಾಗಿದೆ. ಈ ಪ್ರಸಂಗದ ಸೃಷ್ಟಿಶೀಲ ಅನುವಾದವಾಗಿ ಅರೆಭಾಷೆಯಲ್ಲಿ ಡಾ. ಮಾಧವ ಪೆರಾಜೆ ಅವರು ಬರೆದ ಈ ಕೃತಿಯು ಹಲವು ನೆಲೆಗಳಲ್ಲಿ ವಿಶಿಷ್ಟವಾದುದು.

ಮೂಲತಃ ಕನ್ನಡ, ತೆಲುಗು ಭಾಷೆಗಳಲ್ಲಿ ಅರಳಿದ ಯಕ್ಷಗಾನ ಸಾಹಿತ್ಯವು ಅರ್ವಾಚೀನ ಯುಗದಲ್ಲಿ – ತುಳು, ಕೊಂಕಣಿ, ಹಿಂದಿ, ಮರಾಠಿ, ಮಲಯಾಳಂ, ಬ್ಯಾರಿ, ಇಂಗ್ಲಿಷ್‌ಗಳಲ್ಲೂ ರಚಿತವಾಗಿದೆ. ಕನ್ನಡದ ಉಪಭಾಷೆಗಳಾದ ಹವ್ಯಕ, ಕೋಟಗಳಲ್ಲೂ ಅನುಸೃಜನಗೊಂಡಿದೆ. ಇದೀಗ ಅರೆಭಾಷೆಯಲ್ಲಿ ಡಾ. ಪೆರಾಜೆ, ಭಾಗವತರಾದ ಭವ್ಯಶ್ರೀ ಕುಳ್ಕುಂದ ಇವರಿಂದ ಏಕಕಾಲದಲ್ಲಿ ಏಳು ಶ್ರೇಷ್ಠ ಪಾರಂಪರಿಕ

ಪ್ರಸಂಗಗಳು ಮರುಹುಟ್ಟು ಪಡೆದು ಪ್ರಕಾಶಿತವಾಗುತ್ತಿರುವುದು ಅರೆಭಾಷೆಗೂ, ಅಕಾಡೆಮಿಗೂ ಭಾಷಾಭೂಷಣ ಸಂದರ್ಭ.

ಇಲ್ಲಿ ಭಾಷೆ ಮತ್ತು 'ಕಲಾ ಭಾಷಾಂತರ' ಕುರಿತು ಕೆಲವು ಮಾತು ಹೇಳುವುದು ಅನುಚಿತವಾಗಲಾರದು. ಜಗತ್ತಿನಾದ್ಯಂತ 'ಕಿರು' ಭಾಷೆಗಳು 'ಉಪಭಾಷೆ'ಗಳಿಗೆ ಸಂಬಂಧಿಸಿ ಒಂದು ಬಗೆಯ ದ್ವಿಮುಖ ಚಲನೆಯನ್ನು ಕಾಣಬಹುದು. ಒಂದೆಡೆ ಬೇರೆ ಬೇರೆ ಕಾರಣಗಳಿಂದ – (ಆರ್ಥಿಕ, ರಾಜಕೀಯ, ತಂತ್ರಜ್ಞಾನೀಯ) ಚಿಕ್ಕ, ಉಪಭಾಷೆಗಳ ಉಳಿವು ದೊಡ್ಡ ಪ್ರಶ್ನೆಯಾಗಿದೆ. ಇನ್ನೊಂದೆಡೆ – ಸ್ವಭಾಷಾಭಿಮಾನ ವೃದ್ಧಿ, ಉಪಭಾಷೆಗಳಿಗೆ ಸರಕಾರಿ ಉತ್ತೇಜನ, ಆ ಭಾಷೆಗಳಲ್ಲಿ ವಿವಿಧ ಕೃತಿಗಳ ಉದಯ ಹೀಗೆ ಕ್ರಿಯಾತ್ಮಕ – ಸಂಶಿಕ್ಷಣಾತ್ಮಕ ಉಪಕ್ರಮಗಳು ದೊಡ್ಡ ಪ್ರಮಾಣದಲ್ಲಿ ನಡೆದಿವೆ. (ನನ್ನ ಮನೆಮಾತಾದ ಚಿತ್ಪಾವನೀ ಮರಾಠಿಯು ಸುಮಾರು ಹತ್ತು ಸಾವಿರ ಜನರಾಡುವ ಒಂದು ಭಾಷೆ. ಪ್ರಾಕೃತ ನಿಧಿ – ಇದರಲ್ಲೂ ಈ ಬಗೆಯ ಕೆಲಸ ಆಗುತ್ತಿದೆ). ರಾಜ್ಯ, ರಾಷ್ಟ್ರ, ವಿಶ್ವ ಮಟ್ಟದ ಧೋರಣಾತ್ಮಕ ನಿರ್ಧಾರ ಮತ್ತು ಕಾರ್ಯಗಳಲ್ಲಿ ಇದು ಘೋಷಿತ ನೀತಿ ಮತ್ತು ಕಾರ್ಯಕ್ರಮವಾಗಿದೆ. ಅಳಿವಿನ ಭೀತಿಯಲ್ಲಿ ಉಳಿವೆಂಬುದು ಸಂಸ್ಕೃತಿಯ ಸಿರಿ, ಅಂದ ಚಂದ, ವೈವಿಧ್ಯಗಳ ಅಭೀಪ್ಸೆ ಮತ್ತು ಸತ್ಕಾರ್ಯವಾಗಿದೆ. ಅದರಲ್ಲಿ ಒಂದು ಕೊಡುಗೆ – ಪ್ರಸಂಗದ ಪ್ರಕಟಣೆ.

ಇಲ್ಲಿ ಒಂದು ಕಲಾ–ಸಾಹಿತ್ಯಕ ಪ್ರಶ್ನೆಯನ್ನು ನಾವು ಪರಿಶೀಲಿಸಬೇಕು. ಪಾರಂಪರಿಕ ಕಲೆಗಳ (ಯಕ್ಷಗಾನ, ಭರತನಾಟ್ಯ, ಕೂಚಿಪ್ಪುಡಿ ಇತ್ಯಾದಿ)ಗಳ ಪದ, ಪದ್ಯ, ಪ್ರದರ್ಶನಾಧಾರವಾಗಿ ಬಳಸುವ ಸಾಹಿತ್ಯ (ಪದ, ಪದ್ಯ, ಶ್ಲೋಕ, ವಚನ ಇತ್ಯಾದಿ)ವು ಶಿಷ್ಟವಾಗಿರಬೇಕೆಂಬುದು ನಿರೀಕ್ಷೆ.

ನಾಟ್ಯಧರ್ಮಿ ವ್ಯವಸ್ಥೆಗೂ, ಶಿಷ್ಟ (ಅರ್ಥಾತ್ ಗಂಭೀರ) ಸಾಹಿತ್ಯಕ್ಕೂ ನೇರ ಸಂಬಂಧ. 'ಉಪಭಾಷೆ'ಗಳ ಆಡುಭಾಷೆ ಮಾತ್ರವೇ ಆಗಿ, ಇತರ 'ಮುಖ್ಯ' ಭಾಷೆಗಳ ಮಧ್ಯೆ ಇರುವ ನುಡಿಗಳಲ್ಲಿ ಆ ಪಾರಂಪರಿಕ ಕಲೆಗಳನ್ನು ತರುವಾಗ ಅದು – ಹಗುರ, Slang, ಲೋಕಧರ್ಮಿ, ಗ್ರಾಮ್ಯ ಎನಿಸಿ, ಬಿರುಕು ಉಂಟಾಗುವುದಿಲ್ಲವೆ? ಎಂದು. ಸ್ವಲ್ಪ ಮಟ್ಟಿಗೆ ಈ ಅಭಿಪ್ರಾಯವು ನಿಜ. ಗೌರವಯುತ ಪರಿಶೀಲನೆಗೆ ಅರ್ಹ. ತುಳು ಭಾಷೆಯಲ್ಲಿ ಯಕ್ಷಗಾನ ಕಾವ್ಯ ಮತ್ತು ರಂಗಪ್ರಯೋಗಗಳು ಉದಿಸಿ ವಿಸ್ತರಿಸಿದಾಗ ಈ ಪ್ರಶ್ನೆ ಬಂದಿತ್ತು. ಶೈಲಿ, ಗುಣಮಟ್ಟಗಳಲ್ಲಿ ಸಮಸ್ಯೆ ಉಂಟಾದುದು ನಿಜ.

ಇಲ್ಲಿ ಕಾಣುವ, ಪಂಥಾಹ್ವಾನ ಎಂದರೆ, ಆಡುಮಾತಿನ, ಉಪಭಾಷೆಯ ಅಂದವನ್ನೂ ಉಳಿಸಿಕೊಂಡು ಅದು ಶೈಲೀಕೃತ (stylised), ರಮ್ಯಾದ್ಭುತ ಕಲಾಪ್ರಕಾರಕ್ಕೂ ಹೊಂದುವಂತೆ ಬಳಸುವುದು ಹೇಗೆ? ಎಂದು. ಇದು ಕಾಲಕ್ರಮದಲ್ಲಿ ಪರಿಹಾರ ಕಾಣಬೇಕಾದ ವಿಷಯ.

ಇದಕ್ಕೆ ಅರೆಭಾಷೆ ಮತ್ತು ಅಂತಹ ನುಡಿಗಳು, ತಮ್ಮದಾದ ಒಂದು ಶಿಷ್ಟ ಭಾಷೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇದು "ಭಾಷೆಯೊಳಗೊಂದು ಭಾಷೆಯ ಸೃಷ್ಟಿ"ಯ ಪ್ರಶ್ನೆ. ಕಲಾಭಾಷೆ ಯನ್ನು ರೂಪಿಸುವ ವಿಚಾರ. ಇರಲಿ. ಭಾಷೆಯ ಚರಿತ್ರೆಯ ಗತಿ ವಿಚಿತ್ರವಷ್ಟೆ?

ಡಾ. ಮಾಧವ ಪೆರಾಜೆ ಅವರ ಈ ಪ್ರಸಂಗವು ನಿರ್ವಹಣೆಯಲ್ಲಿ ಸಲೀಸಾಗಿ ರೂಪಿತವಿದೆ. ಅರೆಭಾಷೆಯ ಬಳಕೆಯ ಕೆಲವು ದೃಷ್ಟಾಂತಗಳನ್ನು ಇಲ್ಲಿ ನೋಡಬಹುದು.

'ಜೆನಗಳ ಮಕ್ಕಂತ ತಿಳಿಯೋಕು'... 'ಉತ್ತರ ಬಾಪರ ಕೊಂದು ಕಳಿಯೊಕು', 'ಹೀಂಗೆನೆ ಒಂದೊಳೆ ನೋಡಿ

ಹೋಕ್ಯಂತ ನಿನ್ನ ಹಾಂಗೇನ್ ಜಂಬರ ಇಲ್ಲೆ'...

'ಮೋರೆ ನೋಡಿರೆ ಸಾಕು ಕರಳಕಂಡದೆ...'

'ಕೇಳೋಕು ಸಂಸಾರ ಕುಟ್ಟೀ ಹಿಡ್ದ ಬೆದ್‌ರ್ ಒಳಗೆ ಗೋಳೀ'

'ಉಗ್ಗಪ್ಪ ನೀವ್ ಕೇಳಿ ಮೊಯಿಂಸ ನಾನಾಗಿ...'

'ಸರ್ತ ನಿಲ್ಲದೆ ಒಕ್ಲ್ ರಾಜೆರ್...'

'ಅರ್ಪೆಲೆಣ್ಣೆ ತೆಗೆವೊ ಪೊಯ್ಯೆ ಹಿಂಡಿ...'

ಕೆಲ್ಸ ಕೆದ್ಗನೆ ಹೋತ್ – ಪಾಪನೆ ಬಾತ್....

ತರ್ಸಿ ಕುದ್ರೆನ ಪೊರ್ಲು ಮಾಡಿದೋ..

ಸತ್ಯದೃಷ್ಟಿ ಕಾಂಬಸ್ಟ್ ನಾ ಹೇಳ್ನೇ...

ಪುಷ್ಕ ನಿನ್ನ ಉಸ್ಕುಡಮ್ಮು ತಕ್ಷಣನೆ ತೆಗಿ ಛೆ ಬಲಯ

ಕುಸಿಯಿಲಿ ಕುಞ್ಞಣ

ಜೋಡಿಹಕ್ಕಿಗ ಕುದ್ದು ಹಾಕುವೆ ಕೂಕ್ಲ್

ಕುದ್ರೆಕಾಂಬಕೆ ಇಲ್ಲೆಂತ.. ಬೆದ್ರ್ ಪುಂಡೆಲೆಗೆಲ್ಲ..

ಕವಣೆ ಹಣ್ಣ ತಿಂಬ ಕುರೆಗೆ...

ದವಡೆ ಗಚ್ಚೆ ಇರ್ದ್ದೊ ನೋಡುಯ ।

ಗೊತ್ತುಟು.. ಗೂಡೆನ ಹುಚ್ಚ್ ಹತ್ತಿತ್ ದಶರಥಗೆ ।

ಪಳಪಳ ಹೊಳೆವ ಕಡ್ತಲೆ ಹಿಡ್ದವ

ಬಾರಿ ಪೊರ್ಲುನ ರಾಮಮೂರ್ತಿ...

ಹೀಗೆ ಹಲವೆಡೆ ನೋಡಬಹುದು. ಲೇಖಕರು ತಮ್ಮ ಅರಿಕೆಯಲ್ಲಿ ಹೇಳಿರುವಂತೆ ಅವರಿಗೆ ಬಾಲ್ಯದಲ್ಲಿ ಅರೆಭಾಷೆಯ ಅರಿವು ಕನ್ನಡವನ್ನು ಕಲಿಯಲು ತುಂಬ ಸಹಾಯಕವಾಯಿತು. ಹಿಂದೊಮ್ಮೆ – ಅರೆಭಾಷೆಯಲ್ಲಿ ಪ್ರಸಂಗರಚನೆಗೂ ಅವರು ಯೋಜನೆ ಹಾಕಿದ್ದರೂ, ಕೈಗೂಡಿರಲಿಲ್ಲ. ಈಗ ಈ ಮೂಲಕ ಅವರ ಬಹುಕಾಲದ ಸಂಕಲ್ಪ ಮತ್ತು ತನಗೆ ಬಾಲ್ಯದ

ಪೋಷಣೆಗಾಗಿ ಭಾಷೆಗೆ ಕೃತಜ್ಞತೆ ಸಲ್ಲಿಸುವ ಸಂದರ್ಭ ಅವರಿಗೆ ಸುಯೋಗವಾಗಿ ಒದಗಿದೆ.

ಸ್ತುತಿ ಮತ್ತು ಮಂಗಲಗಳಲ್ಲಿ ಮಹಾನ್ ವಾಗ್ಗೇಯಕಾರ ತ್ಯಾಗರಾಜ ಸ್ವಾಮಿಗಳ ಪದ್ಯಗಳನ್ನು ಅಳವಡಿಸಿರುವುದು ವಿಶಿಷ್ಟವಾಗಿದೆ. ಅದಕ್ಕೆ ಅವರು ವಿವರಣೆ ನೀಡಿದ್ದಾರೆ.

ಗೌಡ ಜನಾಂಗದ ಭಾಷೆಯಾಗಿ, ಈ ಪ್ರದೇಶದ ಹಲವು ಜನರ ಸಹಭಾಷೆಯಾಗಿ ಉಲಿಸುತ್ತಿರುವ ಅರೆಭಾಷೆಯಲ್ಲಿ ಈ ಪ್ರಯೋಗದ ಹಂತವು ಕುತೂಹಲಕಾರಿಯಾಗಿದೆ.

ಕವಿ ಮಾಧವರಿಗೆ, ಅಧ್ಯಕ್ಷ ಲಕ್ಷ್ಮೀನಾರಾಯಣ ಕಜೆಗದ್ದೆಯವರಿಗೆ, ಅಕಾಡೆಮಿ ಬಳಗಕ್ಕೆ ಅಭಿನಂದನೆಗಳು.

ಶುಭಮಸ್ತು

ಗುರುಪೂರ್ಣಿಮೆ **ಡಾ. ಎಂ. ಪ್ರಭಾಕರ ಜೋಶಿ**
13–7–2022 'ಹರಿಭಕ್ತಿ', ಮಂಗಳೂರು

ಅರಿಕೆ

ಇದು ನನ್ನ ಎರಡನೆಯ ಯಕ್ಷಗಾನ ಪ್ರಸಂಗ ಕೃತಿಯಾಗಿದೆ. 27 ವರ್ಷಗಳ ಹಿಂದೆ (1995) ನಾನು ಪರಿಪಂಥ ಎನ್ನುವ ಯಕ್ಷಗಾನ ಪ್ರಸಂಗವನ್ನು ಬರೆದಿದ್ದೆನು. ಆಗ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಉದ್ಯೋಗಿಯಾಗಿ ಸೇರಿದುದರಿಂದ ಸಹಜವಾಗಿಯೇ ನನಗೆ ಕರಾವಳಿ ಭಾಗದ ಯಕ್ಷಗಾನ ಪರಿಸರದೊಂದಿಗೆ ಸಂಬಂಧ ಕಡಿಮೆಯಾಗಿತ್ತು. ಇದರಿಂದ ಆ ಪ್ರಸಂಗ ಹೆಚ್ಚು ಪ್ರಚಲಿತವಾಗಲಿಲ್ಲ ಮಾತ್ರವಲ್ಲದೇ ಪ್ರದರ್ಶನವಾಗಲೂ ಇಲ್ಲ. ಇದರಿಂದ ನಾನು ಯಕ್ಷಗಾನ ಪ್ರಸಂಗವನ್ನು ಬರೆಯುವ ಆಸಕ್ತಿಯನ್ನೇ ಕಳೆದುಕೊಂಡೆನು. ಈ ಮಧ್ಯೆ ಎರಡು ವರ್ಷಗಳ ಹಿಂದೆ ಶ್ರೀ ಸಂಪಾಜೆ ದೇವಿಪ್ರಸಾದ್ ಅವರು (ಈಗ ದಿವಂಗತರು) ಒಂದು ದಿನ ಸುಳ್ಯದಲ್ಲಿ ಸಿಕ್ಕಿ 1834ರಲ್ಲಿ ಬ್ರಿಟೀಷರ ವಿರುದ್ಧ ಸುಳ್ಯದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಕುರಿತು ಅರೆಭಾಷೆಯಲ್ಲಿ ಒಂದು ಯಕ್ಷಗಾನ ಪ್ರಸಂಗ ಬರೆಯಬಹುದೇ ಎಂದು ಕೇಳಿದರು. ಅದಕ್ಕೆ ನಾನು ಒಪ್ಪಿಕೊಂಡಿದ್ದೂ ಅಯಿತು. ನನ್ನ ಕಾರ್ಯಕ್ಷೇತ್ರವಾದ ಹಂಪಿಗೆ ಬಂದು ಈ ಕುರಿತು ಪ್ರಸಂಗ ರಚನೆ ಮಾಡಲು ಪ್ರಯತ್ನಿಸಿದೆ. ಅದರೆ ಏಕೋ ಕೈ ಕುದುರಲೇ ಇಲ್ಲ. ಆ ಯಕ್ಷಗಾನ ಪ್ರಸಂಗ ಬರವಣಿಗೆ ಅರ್ಧದಲ್ಲಿಯೇ ನಿಂತು ಹೊಯಿತು.

ಆದರೆ ಅರೆಭಾಷೆಯಲ್ಲಿ ಬೇರೊಂದು ಯಕ್ಷಗಾನ ಪ್ರಸಂಗವನ್ನು ಬರೆಯಬಹುದಲ್ಲ ಎಂದು ಯೋಚನೆ

ಮಾಡಿದೆ. ಇದಕ್ಕೆ ಮುಖ್ಯವಾಗಿ ಅರೆಭಾಷೆ ಅಕಾಡೆಮಿ ಈಗ ಅಧಿಕೃತವಾಗಿ ಸ್ಥಾಪನೆಯಾಗಿರುವುದು ಮತ್ತು ಹೆಚ್ಚು ಕ್ರಿಯಾಶೀಲವಾಗಿರುವುದೂ ಕಾರಣವಾಗಿದೆ. ಅಷ್ಟು ಮಾತ್ರವಲ್ಲದೇ ನಮ್ಮ ಊರಾದ ಪೆರಾಜೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅರೆಭಾಷಿಕರಿರುವುದರಿಂದ ನನಗೆ ಆ ಭಾಷೆಯ ಪರಿಚಯವೂ ಇರುವುದೂ ಇನ್ನೊಂದು ಕಾರಣವಾಗಿದೆ. ಮೂಲತಃ ತುಳು ಮಾತೃಭಾಷಿಕನಾಗಿರುವ ನನಗೆ ಬಾಲ್ಯದಲ್ಲಿ ಶಾಲೆಯಲ್ಲಿ ಕನ್ನಡ ಕಲಿಯುವುದು ಕಷ್ಟವೆನಿಸುತ್ತಿತ್ತು. ಆಗ ಅರೆಭಾಷೆ ಮಾತಾಡುವ ನನ್ನ ಸಹಪಾಠಿಗಳಲ್ಲಿ ಕೆಲವರು (ಈಗ ನೆನಪಿರುವಂತೆ ಹೊದ್ದೆಟ್ಟಿ ಕುಶಾಲಪ್ಪ, ಕೋಡಿ ಶ್ರೀನಿವಾಸ, ಹೊದ್ದೆಟ್ಟಿ ವಿಶ್ವನಾಥ ಮೊದಲಾದವರು) "ನೀ ನಂಮ ಬಾಸೆ ಕಲಿಯಾ, ಅಮೇಲೆ ನಿಂಗೆ ಕನ್ನಡ ಸುಲಬ ಆದು" ಎಂದು ಸಲಹೆ ನೀಡಿದರು. ಬೇರೆ ದಾರಿ ಇಲ್ಲದೆ ಅವರ ಸಲಹೆಯನ್ನು ಒಪ್ಪಿಕೊಂಡು ಕಷ್ಟಪಟ್ಟು ಅರೆಭಾಷೆಯನ್ನು ನಾನು ಕಲಿತೆ. ಮುಂದೆ ಹೆಚ್ಚುಕಡಿಮೆ ಒಂದೇ ತಿಂಗಳಲ್ಲಿ "ಇವಂಗೆ ನಮ್ಮ ಬಾಸೆ ಲಾಯ್ಕ್ ಬಂದದೆ" ಎಂದು ಅವರು ಖುಷಿ ಪಟ್ಟರು. ಇದರಿಂದಾಗಿ ನಾನು ಅರೆಭಾಷೆ ಮತ್ತು ಕನ್ನಡ ಭಾಷೆಗಳೆರಡನ್ನೂ ಕಲಿತೆನು. ಹೀಗೆ ಅರೆಭಾಷೆಯ ಮೂಲಕವೇ ನಾನು ಶಾಲೆ ಕಲಿತುದರಿಂದ ಈ ಭಾಷೆಯನ್ನು ಕುರಿತು ಸಹಜವಾಗಿಯೇ ಪ್ರೀತಿ ಮತ್ತು ಗೌರವ ಇದೆ.

ಈ ಪ್ರಸಂಗವನ್ನು ಓದುವ ಓದುಗರ ದೃಷ್ಟಿಯಿಂದ ಅರೆಭಾಷೆಯ ಕುರಿತು ಕೆಲವು ಪರಿಚಯಾತ್ಮಕ ಮಾತುಗಳನ್ನು ಇಲ್ಲಿ ಹೇಳಬೇಕೆನಿಸುತ್ತದೆ. ಕನ್ನಡದ ಮೊದಲ ಶಾಸ್ತ್ರ ಗ್ರಂಥವಾದ ಕವಿರಾಜಮಾರ್ಗದಲ್ಲಿಯೇ (ಕ್ರಿ.ಶ. 1850) ಕನ್ನಡಂಗಳ್ ಪಲವು ಎನ್ನುವ ಮಾತು ಬರುತ್ತದೆ. ಹಾಗಾದುದರಿಂದ

ಕರ್ನಾಟಕದಲ್ಲಿ ಹಲವು ಕನ್ನಡಗಳಿವೆ ಎನ್ನುವ ಪರಿಕಲ್ಪನೆ 9ನೇ ಶತಮಾನದಲ್ಲಿಯೇ ಇತ್ತು ಎನ್ನುವುದರಲ್ಲಿ ಅನುಮಾನವೇನೂ ಇಲ್ಲ. ಇಂದು ನಾವು ಇವುಗಳನ್ನು ಕನ್ನಡದ ಉಪಭಾಷೆಗಳೆಂದು ಹೇಳುತ್ತೇವೆಯಾಗಿ, ಪ್ರತ್ಯೇಕವಾದ ಪ್ರಮಾಣ ಭಾಷೆಯನ್ನು ಅಂದರೆ ಬರವಣಿಗೆಯ ಕನ್ನಡ ಭಾಷೆಯನ್ನು ನಾವು ರೂಢಿಸಿಕೊಂಡಿದ್ದೇವೆ. ಇದನ್ನೇ ನಮ್ಮ ಪ್ರಾಚೀನ ಕವಿಗಳು ಮಾರ್ಗ ಪದ್ಧತಿ ಎಂದು ಹೇಳಿರುವುದಾಗಿದೆ. ಅರೆಕನ್ನಡವು ಹಲವು ಕನ್ನಡಗಳಲ್ಲಿ ಒಂದು ಭಾಷೆಯಾಗಿದ್ದು ಅದು ದೇಸಿ ಅಥವಾ ಕನ್ನಡದ ಪ್ರಾಕೃತ ರೂಪವಾಗಿದೆ. ಇಂತಹ ಪ್ರಾಕೃತ ರೂಪವನ್ನೇ ಒಂದು ಹಂತದಲ್ಲಿ ಮುಂದಿನ ಕವಿಗಳು ಅಚ್ಚಗನ್ನಡ ಎಂದು ಹೇಳಿರುವುದಾಗಿದೆ. ಇದು ಸಾಹಿತ್ಯ ವಲಯದಲ್ಲಿ ತುಂಬಾ ಗಂಭೀರವಾದ ಚರ್ಚೆಯಾದುದರಿಂದ ಅದನ್ನು ಇಲ್ಲಿ ಬೆಳಸುವ ಅಗತ್ಯವಿಲ್ಲವೆನಿಸುತ್ತದೆ. ಬಹುಮಟ್ಟಿಗೆ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇರುವ ಗೌಡ ಸಮುದಾಯದವರು ಈ ಭಾಷೆಯನ್ನು ಮಾತಾಡುತ್ತಾರೆ. ಡಾ. ಕೆ. ಕುಶಲಪ್ಪಗೌಡ ಅವರು 1970ರಲ್ಲಿ ಗೌಡಕನ್ನಡದ ಕುರಿತು ಮೊದಲ ಬಾರಿಗೆ ಇಂಗ್ಲಿಷ್‌ನಲ್ಲಿ ಒಂದು ಪುಸ್ತಕವನ್ನು ಬರೆದಿದ್ದು ಅದರಲ್ಲಿ ಅವರು ಅರೆಭಾಷೆಯನ್ನು ಪ್ರತ್ಯೇಕ ಭಾಷೆ ಎಂದೇ ಗುರುತಿಸುತ್ತಾರಲ್ಲದೇ ಅದಕ್ಕೆ ಗೌಡಕನ್ನಡ ಎಂದೇ ಹೆಸರಿಸಿದ್ದಾರೆ.

ಈ ವಾದಗಳೇನೇ ಇರಲಿ, ಕರ್ನಾಟಕದಲ್ಲಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಈಗ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದೆ. ಅರೆಭಾಷೆಯಲ್ಲಿ ಸುಮಾರು 50 ವರ್ಷಗಳ ಹಿಂದೆಯೇ ಸಾಹಿತ್ಯ ಚಟುವಟಿಕೆಗಳು ನಡೆದಿದ್ದವು ಎನುವುದರಲ್ಲಿ ಅನುಮಾನವೇನೂ ಇಲ್ಲ. ಅದರೆ ಅಕಾಡೆಮಿಯ

ಸ್ಥಾಪನೆಯಾದ ಬಳಿಕ ಅರೆಭಾಷೆಯಲ್ಲಿ ಹೆಚ್ಚಿನ ಸಾಹಿತ್ಯ ಕೃಷಿ ನಡೆಯುತ್ತಿದೆ ಎನ್ನುವುದೂ ಗಮನಾರ್ಹವಾಗಿದೆ. ಈ ಪ್ರಸಂಗ ರಚನೆ ಕೂಡ ಅಂತಹ ಒಂದು ಚಟುವಟಿಕೆಯ ಭಾಗವೇ ಅಗಿದೆ ಎಂದು ಹೇಳಬಯಸುತ್ತೇನೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಇಂದು ಎಲ್ಲರ ಕನ್ನಡ ಎನ್ನುವ ಪರಿಕಲ್ಪನೆಯೊಂದು ಅಲ್ಲಲ್ಲಿ ಕೇಳಿಬರುತ್ತಿದೆ. ಡಾ. ಡಿ.ಎನ್. ಶಂಕರ ಭಟ್ಟ ಮತ್ತು ಅವರ ಹಿಂಬಾಲಕರು ಇಂಥದೊಂದ್ದು ವಾದವನ್ನು ಮುಂದಿಟ್ಟುಕೊಂಡು ಬರಹಗಾರರನ್ನು ಅಡ್ಡದಾರಿಗೆಳೆಯುತ್ತಿದ್ದಾರೆ. ಅವರ ಪ್ರಕಾರ ಕನ್ನಡದಲ್ಲಿ ಪ್ರಮಾಣ ಭಾಷೆಯೊಂದರ ಅಗತ್ಯವಿಲ್ಲವಂತೆ. ನಾವು ಹೇಗೆ ಮಾತಾಡುತ್ತೇವೆಯೋ ಹಾಗೆಯೇ ಬರೆಯಬೇಕೆಂಬುದು ಅವರ ಮುಖ್ಯ ವಾದವಾಗಿದೆ. ಇಂತಹ ವಾದಗಳ ಕುರಿತು ನಾನು ಅಲ್ಲಲ್ಲಿ ವಿಮರ್ಶಾತ್ಮಕವಾಗಿ ಬರೆಯುತ್ತಲೇ ಬಂದಿದ್ದೇನೆ. ಮಾತಾಡಿದ ಹಾಗೆ ಬರೆದರೆ ಅಂತಿಮವಾಗಿ ಏನಾಗುತ್ತದೆ ಎನ್ನುವುದಕ್ಕೆ ಈ ಪ್ರಸಂಗ ಒಂದು ಉದಾಹರಣೆಯಾಗುತ್ತದೆ. ಅಂದರೆ ಆಗ ಕನ್ನಡ ಎಲ್ಲರ ಭಾಷೆಯಾಗುವುದರ ಬದಲು ಒಂದು ಪ್ರದೇಶದ, ಸಮುದಾಯದ ಭಾಷೆಯಷ್ಟೇ ಅಗುತ್ತದೆ. ಆ ದೃಷ್ಟಿಯಿಂದ ಎಲ್ಲರಿಗೂ ಅರ್ಥವಾಗುವ ಪ್ರಮಾಣ ಭಾಷೆಯೊಂದರ ಬಅಗತ್ಯವೂ ಇದೆ ಎನ್ನುವುದು ಇಂತಹ ಪ್ರಯೋಗಗಳಿಂದ ಸ್ಪಷ್ಟವಾಗಬಹುದು ಎಂದು ನಾನು ತಿಳಿಯುತ್ತೇನೆ.

ಆಗಲೇ ಹೇಳಿದ ಹಾಗೆ ಹಲವು ಕನ್ನಡಗಳಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ಬೃಹತ್ ನಿಘಂಟು ಸಂಪುಟಗಳಲ್ಲಿ ಸೇರದಿರುವ ಆನೇಕ ಪದಗಳು ಮತ್ತು ವಾಗ್ರೂಢಿಗಳು ಈ ಪ್ರಸಂಗದಲ್ಲಿ ಕಂಡುಬರುತ್ತವೆ. ಹಾಗಾದುದರಿಂದ ಕನ್ನಡದಲ್ಲಿ

ಹೊಸ ಹೊಸ ಪ್ರಯೋಗಗಳು ಅದಂತೆಲ್ಲ ಕನ್ನಡದ ಪದಕೋಶವೂ ಬೆಳೆಯಬೇಕಾಗುತ್ತದೆ. ಕನ್ನಡ ನಿಘಂಟು ರಚನೆಯು ಈ ದಾರಿಯಲ್ಲಿ ಸಾಗುವುದಕ್ಕೆ ಈಗ ಹೊಸ ದಿಕ್ಸೂಚಿಯೊಂದು ಇಂತಹ ಪ್ರಸಂಗ ರಚನೆಯಿಂದ ದೊರೆತಿದೆ ಎನ್ನುವುದೂ ಸ್ಪಷ್ಟವಾಗುತ್ತದೆ. ಹಾಗಾದುದರಿಂದ ಕನ್ನಡದಲ್ಲಿ ಯಕ್ಷಗಾನ ಪ್ರಸಂಗಗಳ ರಚನೆ ಎಂದರೆ ಕೇವಲ ಭಾಷೆ ಮತ್ತು ಸಂಸ್ಕೃತಿಯ ಚರ್ಚೆಯಷ್ಟೇ ಅಗದೇ ನಿಘಂಟು ರಚನೆಯಂತಹ ಶಾಸ್ತ್ರ ಕೃತಿಗಳ ಕುರಿತ ಹೊಸತೊಂದು ಚರ್ಚೆಯೂ ಅಗುತ್ತದೆ ಎಂದು ತಿಳಿಯಬೇಕಾಗುತ್ತದೆ.

ಇನ್ನು ಈ ಪ್ರಸಂಗ ರಚನೆಯ ಹಿನ್ನೆಲೆಯನ್ನು ಅಗಲೇ ಹೇಳಿದ್ದೇನೆ. ಸುಳ್ಯದಲ್ಲಿ ರೈತಾಪಿ ವರ್ಗದವರು ಬ್ರಿಟೀಷರ ವಿರುದ್ಧ ಹೋರಾಡಿದ ಕಥೆಯನ್ನು ಬರೆಯತೊಡಗಿದುದೇ ಈ ಪ್ರಸಂಗದ ಬರವಣಿಗೆಗೂ ಕಾರಣವಾಗಿದೆ. ನಾನು ಪೆರಾಜೆಯಿಂದ ದೂರದ ಹಂಪಿಗೆ ಬಂದುದರಿಂದ ಅರೆಭಾಷೆಯ ಬಳಕೆಯಿಂದ ಇದೀಗ ಬಹುಮಟ್ಟಿಗೆ ದೂರವಾಗಿದ್ದೇನೆ. ಹಾಗಾದುದರಿಂದ ಭಾಷೆಯ ಮೇಲೆ ಮತ್ತೊಮ್ಮೆ ಹಿಡಿತ ಸಾಧಿಸುವ ದೃಷ್ಟಿಯಿಂದ ಈ ಪ್ರಸಂಗವನ್ನು ನಾನು ಬರೆಯಬೇಕಾಯಿತೆನಿಸುತ್ತದೆ. ಈ ಪ್ರಸಂಗವನ್ನು ಬರೆದು ಈಗಾಗಲೇ ಒಂದು ವರ್ಷಕ್ಕಿಂತಲೂ ಹೆಚ್ಚು ದಿನಗಳು ಕಳೆದಿವೆ. 2021ರ ಕೋರೊನಾದ ಸಮಯದಲ್ಲಿ (09–06–2021 ರಿಂದ 13–8–2021) ಮನೆಯಲ್ಲಿಯೇ ಇದ್ದಾಗ ಬರೆದ ಪ್ರಸಂಗವಿದು. ಹೆಚ್ಚುಕಡಿಮೆ ಎರಡು ತಿಂಗಳಲ್ಲಿ ಈ ಪ್ರಸಂಗದ ರಚನೆ ಪೂರ್ಣವಾಯಿತು.

ಕನ್ನಡದಲ್ಲಿ ಹಲಸಿನಮಕ್ಕಿ ನರಸಿಂಹಶಾಸ್ತ್ರೀಗಳು ಬರೆದಿರುವ ವೀರಮಣಿ ಕಾಳಗ (19ನೇ ಶತಮಾನ) ಎನ್ನುವ ಯಕ್ಷಗಾನ ಪ್ರಸಂಗವು ಜನಪ್ರಿಯವಾಗಿದೆ. ಯಕ್ಷಗಾನದ ಪರಿಚಯವಿರುವ

ಯಾರಿಗೆ ಅಗಲಿ ಅದರ ಕುರಿತು ವಿಶೇಷವಾಗಿ ಪರಿಚಯ ಮಾಡುವ ಅಗತ್ಯವಿಲ್ಲ. ನಾನು ಬರೆದಿರುವ ಈ ಪ್ರಸಂಗಕ್ಕೆ ಅದು ಮೂಲ ಆಕರವಾಗಿದೆ.

ಕಥಾಸಾರ

ರಾವಣನ ಸಂಹಾರ ಮಾಡಿದ ಮೇಲೆ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನು ಸೀತಾ ಸಮೇತನಾಗಿ ತಮ್ಮಂದಿರೊಡಗೂಡಿ ರಾಜ್ಯಭಾರ ಮಾಡುತ್ತಿದ್ದನು. ಒಂದು ದಿನ ಅಗಸ್ತ್ಯಮುನಿಯು ಶಿಷ್ಯರ ಸಮೇತ ಒಡ್ಡೋಲಗಕ್ಕೆ ಬರುತ್ತಾನೆ. ಶಾಸ್ತ್ರಾನುಸಾರ ಅತಿಥಿ ಸತ್ಕಾರವಾದ ಮೇಲೆ ಕುಂಭ ಸಂಭವನಿಗೆ ಏಕೋ ಶ್ರೀರಾಮನ ಮುಖದಲ್ಲಿ ಗೆಲುವು ಕಾಣದಿರುವುದು ಗೊತ್ತಾಗುತ್ತದೆ. ಇದರ ಕಾರಣವನ್ನು ಕೇಳಿದಾಗ ಮನುಷ್ಯನಾಗಿ ಜನಿಸಿದ ಮೇಲೆ ಮಾನವನಿಗೆ ತನ್ನದೇ ಆದ ಸಮಸ್ಯೆ ಇದೆ ಎಂದು ಶ್ರೀರಾಮನು ಹೇಳುತ್ತಾನೆ. ಮಾತಿನ ನಡುವೆ ಅಗಸ್ತ್ಯರು ರಾವಣ ಕುಂಭಕರ್ಣರ ಮೂಲವನ್ನು ಹೇಳುತ್ತಾರೆ. ಇದರಿಂದ ಮೂಲತಃ ಬ್ರಾಹ್ಮಣ ವಂಶಸ್ಥರಾದ ರಾವಣ ಕುಂಭಕರ್ಣರನ್ನು ಕೊಂದುದರಿಂದ ತನಗೆ ಬ್ರಹ್ಮಹತ್ಯೆಯ ಪಾಪವೂ ಸೇರಿತೆಂದು ಶ್ರೀರಾಮನು ಇನ್ನಷ್ಟು ದುಃಖಿತನಾಗುತ್ತಾನೆ. ಅಗಸ್ತ್ಯನು ಅಶ್ವಮೇಧಯಾಗ ಮಾಡಿದರೆ ಈ ಪಾಪ ಪರಿಹಾರವಾಗುವುದು ಎಂದು ಹೇಳಿದನು. ಆಗ ತಮ್ಮನಾದ ಶತ್ರುಘ್ನನನ್ನು ಕುದುರೆಯೊಂದಿಗೆ ಸೇನೆಸಮೇತ ಕಳುಹಿಸಿ ಶ್ರೀರಾಮನು ಯಾಗದೀಕ್ಷಿತನಾಗುತ್ತಾನೆ. ಕುದುರೆಯ ಬೆಂಗಾವಲಿಗೆ ಹೊರಟ ಶತ್ರುಘ್ನನ ಸೈನ್ಯವು ಅನೇಕ ವೀರಾಧಿವೀರರನ್ನು ಸೋಲಿಸಿ ಕಪ್ಪವನ್ನು ಪಡೆದು ಮುಂದೆ ಜ್ಯೋತಿರ್ಮೇಧ ನಗರಕ್ಕೆ ಪ್ರವೇಶಿಸುತ್ತದೆ. ಆ ರಾಜ್ಯದ ಮಹಾರಾಜನಾದ

ವೀರಮಣಿಯು ಶಿವಭಕ್ತನಾಗಿದ್ದನು. ವೀರಮಣಿಯ ಮಕ್ಕಳಾದ ರುಕ್ಮಾಂಗ ಮತ್ತು ಶುಭಾಂಗರು ಶ್ರೀರಾಮನ ಅಶ್ವಮೇಧದ ಕುದುರೆಯನ್ನು ಕಟ್ಟುತ್ತಾರೆ. ಮುಂದೆ ನಡೆದ ಘನಘೋರ ಯುದ್ಧದಲ್ಲಿ ಸ್ವತಃ ವೀರಮಣಿಯ ಆಳಿಯನಾದ ಶಿವನೇ ಯುದ್ಧರಂಗಕ್ಕೆ ಬಂದು, ಶತ್ರುಘ್ನನೇ ಮೊದಲಾಗಿ ಶ್ರೀರಾಮನ ಸೈನ್ಯವನ್ನು ನಾಶಮಾಡುತ್ತಾನೆ. ಆಗ ವೀರಮಣಿಯ ಸೈನ್ಯಕ್ಕೆ ಎದುರಾಗಿ ರಾಮನ ಭಕ್ತನಾದ ಹನುಮಂತನು ಶಿವನೊಂದಿಗೆ ಹೊರಾಟಕ್ಕೆ ನಿಲ್ಲುತ್ತಾನೆ. ಶಿವ ಮತ್ತು ಹನುಮಂತರ ನಡುವೆ ಘನಘೋರಯುದ್ಧ ನಡೆಯುತ್ತಿರಲು ಶ್ರೀರಾಮನು ಪ್ರತ್ಯಕ್ಷನಾಗಿ ಹರಿಹರರಲ್ಲಿ ಭೇದವಿಲ್ಲ ಎನ್ನುವ ಸಂದೇಶವನ್ನು ಸಾರುತ್ತಾನೆ. ಹೀಗೆ ಎಲ್ಲವೂ ಸುಖಾಂತ್ಯವಾಗುತ್ತದೆ.

ಅರೆಕನ್ನಡದಲ್ಲಿರುವ ವೀರಮಣಿ ಕಾಳಗದಲ್ಲಿಯೂ ಇದೇ ಕಥೆಯನ್ನು ಹೇಳಲಾಗಿದೆ. ಆದರೆ ಇದು ಹಲಸಿನಮಕ್ಕಿ ನರಸಿಂಹ ಶಾಸ್ತ್ರೀಯವರ ಯಕ್ಷಗಾನ ಪ್ರಸಂಗದ ನೇರ ಅನುವಾದವಲ್ಲ. ಕೆಲವು ತಾಂತ್ರಿಕ ಕಾರಣಗಳಿಂದಷ್ಟೇ ಇದನ್ನು ಅನುವಾದವೆಂದು ಹೇಳಬಹುದು. ಅದರ ಹೊರತು ಭಾಷೆ, ನುಡಿಗಟ್ಟು, ದೇಶಿ ಎಲ್ಲವೂ ಹೊಸತಾಗಿದೆ.

ಯಕ್ಷಗಾನವು ಒಂದು ಪಾರಂಪರಿಕವಾದ ಸಾಹಿತ್ಯ ಪ್ರಕಾರವಾಗಿದೆ. ಅದು ಪ್ರಾಚೀನ ಕನ್ನಡ ಸಾಹಿತ್ಯದ ಮುಂದುವರಿದ ಭಾಗವೇ ಆಗಿದೆ. ಹಾಗಾದುದರಿಂದ ಪ್ರಾಚೀನ ಸಾಹಿತ್ಯದಲ್ಲಿ ಅಸಕ್ತರಾದ ಕರಾವಳಿ ಬರಹಗಾರರೆಲ್ಲರೂ ಯಕ್ಷಗಾನ ಸಾಹಿತ್ಯದ ಕುರಿತು ಆಸಕ್ತರಾಗಿರುತ್ತಾರೆ. ಸಹಜವಾಗಿ ಆ ಭಾಗದವನಾದ ನನಗೆ ಯಕ್ಷಗಾನ ಕಲೆ ಮತ್ತು ಯಕ್ಷಗಾನ ಪ್ರಸಂಗಗಳ ಕುರಿತು ವಿಶೇಷ ಆಸಕ್ತಿ ಇದೆ. ಅದರಲ್ಲಿಯೂ ಈಗ ನನಗೆ ನೆನಪಿರುವ ಹಾಗೆ ವೀರಮಣಿ ಕಾಳಗವು

ಬಾಲ್ಯದಿಂದಲೂ ನನಗೆ ಆಸಕ್ತಿ ಕೆರಳಿಸಿದ ಪ್ರಸಂಗವಾಗಿದೆ. ನನ್ನ ಬಾಲ್ಯದ ದಿನಗಳಲ್ಲಿ ಆ ಪ್ರಸಂಗದ ಎಲ್ಲ ಪದ್ಯಗಳೂ ನನಗೆ ಬಾಯಿಪಾಠ ಬರುತ್ತಿದ್ದವು. ಹಾಗಾದುದರಿಂದ ಸಹಜವಾಗಿ ಅರೆಕನ್ನಡದಲ್ಲಿ ಅದನ್ನು ರಚನೆ ಮಾಡಲು ನನಗೆ ಸುಲಭವಾಯಿತು. ಈ ಪ್ರಸಂಗದಲ್ಲಿ ಯಕ್ಷಗಾನ ಪ್ರಸಂಗಕ್ಕಿರುವ ಶಾಸ್ತ್ರೀಯ ಚೌಕಟ್ಟುಗಳೆಲ್ಲವನ್ನೂ ಅಳವಡಿಸಲಾಗಿದೆ. ಮುಖ್ಯವಾಗಿ ಪ್ರಸಂಗದ ಆರಂಭದಲ್ಲಿ ದೇವತಾಸ್ತುತಿ ಮತ್ತು ಕೊನೆಯಲ್ಲಿ ಮಂಗಳ ಪದ್ಯಗಳಿರಬೇಕಾದುದು ಯಕ್ಷಗಾನದಲ್ಲಿ ಸಹಜವೇ ಅಗಿದೆ. ಅದನ್ನು ಇಲ್ಲಿ ಪಾಲಿಸಲಾಗಿದೆ.

ನಾನು ಹಂಪಿಯಲ್ಲಿ ಬಹುಕಾಲ ನೆಲೆಸಿರುವುದರಿಂದ ತೆಲುಗುಭಾಷೆ ಮತ್ತು ಸಂಸ್ಕೃತಿಗಳ ಪರಿಚಯವೂ ತಕ್ಕಮಟ್ಟಿಗೆ ಆಗಿದೆ. ಶ್ರೀತ್ಯಾಗರಾಜರ ಕೀರ್ತನೆಗಳನ್ನು ಆಲಿಸುವುದು ಇಲ್ಲವೇ ಅವರ ಸಾಹಿತ್ಯವನ್ನು ಓದುವುದು ಇತ್ತೀಚಿನ ನನ್ನ ಆಸಕ್ತಿಗಳಲ್ಲೊಂದಾಗಿದೆ. ಇದರ ಪರಿಣಾಮವಾಗಿ ಈಗಾಗಲೇ ನಾನು ಶ್ರೀತ್ಯಾಗರಾಜರ 100ಕ್ಕೂ ಹೆಚ್ಚು ಕೀರ್ತನೆಗಳನ್ನು ಅದರ ಸಹಜ ಸೌಂದರ್ಯದೊಂದಿಗೆ ಕನ್ನಡಕ್ಕೆ ಅನುವಾದ ಮಾಡಿದ್ದೇನೆ. ಕನ್ನಡದಲ್ಲಿ ಶ್ರೀತ್ಯಾಗರಾಜರ ಕೀರ್ತನೆಗಳು ಗದ್ಯ ರೂಪದಲ್ಲಿ ಅನುವಾದಗೊಂಡಿವೆಯೇ ಹೊರತು ಅದರ ಮೂಲ ಗೇಯ ರೂಪದಲ್ಲಿ ಅಲ್ಲ. ನಾನು ಅವರ ಸಾಹಿತ್ಯವನ್ನು ತಾಳಬದ್ಧ ಮತ್ತು ಛಂದೋಬದ್ಧವಾಗಿ ಕನ್ನಡದಲ್ಲಿ ಅನುವಾದಿಸಿದ್ದೇನೆ. ತೆಲುಗಿನಿಂದ ಕನ್ನಡಕ್ಕೆ ಅನುವಾದ ಮಾಡಿದ ಶ್ರೀತ್ಯಾಗರಾಜರ ಅಂತಹ ನಾಲ್ಕು ಕೀರ್ತನೆಗಳು ಈ ಪ್ರಸಂಗದಲ್ಲಿ ಸೇರಿವೆ. ಮೊದಲನೆಯ ಎರಡು ಪದ್ಯಗಳು ಆರಂಭದಲ್ಲಿಯೂ ಇನ್ನೊಂದು ಪದ್ಯವು (ಇವರಾರೊ ನಿನವಿನಾ....,) ಹನುಮಂತನಿಗೆ ಶ್ರೀರಾಮನು ಪ್ರತ್ಯಕ್ಷವಾಗುವ

ಸಂದರ್ಭದಲ್ಲಿಯೂ, ಒಂದು ಮಂಗಳ ಪದ್ಯವು ಪ್ರಸಂಗದ ಕೊನೆಯಲ್ಲಿಯೂ ಸೇರ್ಪಡೆಯಾಗಿದೆ. ಈ ಕೀರ್ತನೆಗಳ ಜೊತೆಯಲ್ಲಿ ತ್ಯಾಗರಾಜ ಎನ್ನುವ ಅಂಕಿತವಿರುವುದರಿಂದ ಸಹಜವಾಗಿಯೇ ಅದು ತ್ಯಾಗರಾಜರ ಕೀರ್ತನೆ ಎನ್ನುವುದನ್ನು ಸಹೃದಯರು ಗಮನಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಶ್ರೀರಾಮನು ತ್ಯಾಗರಾಜರ ಆರಾಧ್ಯ ದೈವವಾದುದರಿಂದಲೂ ಸ್ತುತಿ ಪದ್ಯಗಳಿಗೆ ಒಂದು ಪಾವಿತ್ರ್ಯತೆ ಬರಲೆಂಬುದರಿಂದಲೂ ಮತ್ತು ತ್ಯಾಗರಾಜರ ಬಗೆಗೆ ನನಗೆ ಅಪಾರ ಗೌರವ ಇರುವುದರಿಂದಲೂ ಅವರ ಕೀರ್ತನೆಗಳನ್ನು ಇಲ್ಲಿ ಸೇರಿಸಲಾಗಿದೆ.

ಇನ್ನು ಈ ಪ್ರಸಂಗದ ಬರವಣಿಗೆಯ ಶೈಲಿಯನ್ನು ಕುರಿತು ಕೆಲವೊಂದು ವಿಷಯಗಳನ್ನು ಪ್ರಸ್ತಾಪಿಸಬಹುದು. ಈಗಾಗಲೇ ಹೇಳಿದಂತೆ ಇಲ್ಲಿರುವುದು ಆಡುಮಾತಿನ ಶೈಲಿಯಾಗಿದೆ. ಆದುದದರಿಂದ ಸಹಜವಾಗಿಯೇ ಮಹಾಪ್ರಾಣ ಹಾಗೂ ಷ, ಶ ಮೊದಲಾದ ಅಕ್ಷರಗಳ ಬಳಕೆ ಇಲ್ಲಿ ಅಪರೂಪ. ಆದರೆ ಶ್ರೀರಾಮ, ಹನುಮಂತ, ಶಿವನೇ ಮೊದಲಾದ ಪಾತ್ರಗಳಿಗೆ ಸಂಬಂಧಿಸಿದ ಸನ್ನಿವೇಶಗಳಲ್ಲಿ ಕೆಲವೊಮ್ಮೆ ಈ ಮಹಾಪ್ರಾಣ ಮತ್ತು ಷ, ಶ ಅಕ್ಷರಗಳು ಬಂದಿವೆ. ಇದಕ್ಕೆ ಕೆಲವೊಂದು ಸೂಕ್ಷ್ಮವಾದ ಕಾರಣಗಳಿವೆ. ವಾಲ್ಮೀಕಿ ರಾಮಾಯಣದಲ್ಲಿ ಶ್ರೀರಾಮನು ಮೊದಲ ಬಾರಿಗೆ ಕಿಷ್ಕಿಂಧೆಯಲ್ಲಿ ಹನುಮಂತನನ್ನು ಕಂಡಾಗ 'ಈತ ಎಷ್ಟೊಂದು ವ್ಯಾಕರಣ ಬದ್ಧವಾಗಿ ಸಂಸ್ಕೃತವನ್ನು ಮಾತಾಡುತ್ತಾನೆ' ಎಂದು ತಮ್ಮನಿಗೆ ಹೇಳುತ್ತಾನೆ. ಅಂದರೆ ಹನುಮಂತನ ಮಾತು ವ್ಯಾಕರಣ ಬದ್ಧವಾದುದು ಎನ್ನುವುದು ಸ್ಪಷ್ಟವಾಗುತ್ತದೆ. ಆದುದರಿಂದ ಹನುಮಂತನ ಮಾತಿನಲ್ಲಿ (ದ್ವೇಷ, ಭಾಷೆ ಇತ್ಯಾದಿ) ವ್ಯಾಕರಣ ಬದ್ಧವಾದ ರೂಪಗಳನ್ನೇ ಪ್ರಯೋಗಿಸಲಾಗಿದೆ. ಇದು ಎಷ್ಟರ ಮಟ್ಟಿಗೆ ಸರಿ ಅಥವಾ ಅಲ್ಲ

ಎನ್ನುದನ್ನು ಓದುಗರೇ ಹೇಳಬೇಕು.

ಕೃತಜ್ಞತೆಗಳು

ಇನ್ನು ಈ ಪ್ರಸಂಗ ರಚನೆಯ ಸಂದರ್ಭದಲ್ಲಿ ನನಗೆ ಅನೇಕರು ನೆರವಾಗಿದ್ದಾರೆ ಅವರನ್ನು ಇಲ್ಲಿ ನೆನೆಸಿಕೊಳ್ಳುವುದು ನನ್ನ ಕರ್ತವ್ಯವಾಗಿದೆ. ಮುಖ್ಯವಾಗಿ ಈಗಾಗಲೇ ಹೇಳಿರುವಂತೆ ಸಂಪಾಜೆ ಶ್ರೀ ಎನ್.ಎಸ್. ದೇವಿಪ್ರಸಾದ್ ಅವರು ಪರೋಕ್ಷವಾಗಿ ಈ ಪ್ರಸಂಗ ರಚನೆಗೆ ಕಾರಣಕರ್ತರಾಗಿದ್ದಾರೆ. ಹಾಗೆಯೇ ಈ ಪ್ರಸಂಗ ರಚನೆ ಮುಗಿದ ಮೇಲೆ ಇದನ್ನು ಪ್ರಕಟಿಸಲು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಲಕ್ಷ್ಮೀನಾರಾಯಣ ಕಜೆಗಜ್ಜೆ ಅವರು ಮತ್ತು ಅಕಾಡೆಮಿಯ ಇತರ ಸದಸ್ಯರ ಪ್ರೋತ್ಸಾಹ ಮತ್ತು ಸಹಕಾರಗಳಿಲ್ಲದಿದ್ದರೆ ಈ ಕೃತಿ ಇಂದು ಪ್ರಕಾಟವಾಗುತ್ತಿರಲಿಲ್ಲ.

ನನ್ನ ಗೆಳೆಯರೂ ಯಕ್ಷಗಾನದ ಪ್ರಸಿದ್ಧ ಭಾಗವತರೂ ಅದ ಶ್ರೀ ಸುಬ್ರಾಯ ಸಂಪಾಜೆ ಅವರು ಮೊದಲ ಓದುಗರಾಗಿ ಈ ಪ್ರಸಂಗದ ಕುರಿತು ಪ್ರೋತ್ಸಾಹದಾಯಕ ಮಾತು ಗಳನ್ನಾಡಿರುವುದಷ್ಟೇ ಅಲ್ಲದೇ ಈ ಕೃತಿಯನ್ನು ಪ್ರಕಟಿಸುವ ಕುರಿತು ಅಕಾಡೆಮಿಗೆ ಮೌಲ್ಯಮಾಪನ ವರದಿಯನ್ನೂ ನೀಡಿರುತ್ತಾರೆ. ನಿಡುಗಾಲದ ಸ್ನೇಹಿತರಾದ ಅವರ ಮೌಲಿಕ ಅಭಿಪ್ರಾಯಗಳು ಈ ಪ್ರಸಂಗಕ್ಕೆ ಒಂದು ತೂಕವನ್ನು ತಂದಿವೆ.

ಕನ್ನಡದ ಹಿರಿಯ ವಿದ್ವಾಂಸರೂ, ಯಕ್ಷಗಾನ ಕಲಾವಿದರೂ, ಅರ್ಥದಾರಿಗಳೂ ಆದ ಶ್ರೀ ಪ್ರಭಾಕರ ಜೋಶಿ ಅವರು ಬಿಡುವಿಲ್ಲದ ಕೆಲಸಗಳ ನಡುವೆಯೂ ನಮ್ಮ ಕೋರಿಕೆಯನ್ನು ಮನ್ನಿಸಿ ಈ ಪ್ರಸಂಗಕ್ಕೆ ಬೆಲೆಯುಳ್ಳ ಮುನ್ನುಡಿಯ ಮಾತುಗಳನ್ನು ಬರೆದಿರುತ್ತಾರೆ. ಅವರ ಈ ಮುನ್ನುಡಿಯು ಈ ಕೃತಿಗೆ ಹೆಚ್ಚಿನ

ಮೌಲ್ಯವನ್ನು ತಂದಿದೆ ಎಂದು ಭಾವಿಸುತ್ತೇನೆ.

ಈಗ ಹಂಪಿಯಲ್ಲಿ ವಾಸವಾಗಿರುವ ನನಗೆ ಅರೆಭಾಷೆಯ ಪರಿಸರ ದೂರವಾಗಿರುವುದರಿಂದ ತಕ್ಷಣಕ್ಕೆ ಅರೆಭಾಷೆಯ ಪದಗಳು ನೆನಪಾಗದೇ ಪ್ರಸಂಗ ರಚನೆಗೆ ತೊಡಕಾಗುತ್ತಿತ್ತು. ಆಗ ಡಾ.ಅನುರಾಧಾ ಕುರುಂಜಿ ಮತ್ತು ಚಂದ್ರಶೇಖರ ಬಿಳಿನೆಲೆಯವರು ನನಗೆ ಪದಬಳಕೆ ಮತ್ತು ನುಡಿಗಟ್ಟುಗಳನ್ನು ತಿಳಿಸಿಕೊಡುವುದರ ಮೂಲಕ ಈ ಪ್ರಸಂಗ ರಚನೆಯು ಸಕಾಲದಲ್ಲಿ ಮುಗಿಯುವುದಕ್ಕೆ ಸಹಕರಿಸಿದ್ದಾರೆ.

ಈ ಪ್ರಸಂಗವನ್ನು ಮುದ್ರಣಕ್ಕೆ ಅಳವಡಿಸುವುದು ತುಂಬ ಕಷ್ಟಕರವಾಗಿದೆ. ಆದರೂ ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯಾದ ಡಾ. ಪವಿತ್ರ ರೆಡ್ಡಿಯವರು ಇದನ್ನು ಅಂದವಾಗಿ ಮತ್ತು ಶೀಘ್ರವಾಗಿ ಡಿ.ಟಿ.ಪಿಗೆ ಅಳವಡಿಸಿದ್ದಾರೆ. ಅಕೃತಿ ಪ್ರಕಾಶನದ ಕಲ್ಲೂರು ನಾಗೇಶ್ ಮತ್ತು ಅವರ ಸಿಬ್ಬಂಧಿ ವರ್ಗದವರು ಅಂದವಾಗಿ ಮುದ್ರಿಸಿರುತ್ತಾರೆ. ನನ್ನ ವಿದ್ಯಾರ್ಥಿಯಾದ ಮಂಜಪ್ಪ.ಸಿ. ಅವರು ಕೊನೇ ಹಂತದ ಡಿ.ಟಿ.ಪಿ. ಮುದ್ರಣದಲ್ಲಿ ಸಹಕರಿಸಿರುತ್ತಾರೆ.

ನನ್ನ ಮಡದಿಯಾದ ಶ್ರೀಮತಿ ಪುಟ್ಟಮ್ಮ ಮತ್ತು ನನ್ನ ಮಗ ಪಂಪ ಎಂದಿನಂತೆ ನನ್ನ ಬರಹಗಳಿಗೆ ಪ್ರೋತ್ಸಾಹ ನೀಡಿದ್ದಾರೆ. ಶ್ರೀಮತಿ ಪುಟ್ಟಮ್ಮ ಈ ಪ್ರಸಂಗದ ಪ್ರೂಫ್ ತಿದ್ದುವುದರಲ್ಲಿಯೂ ಸಹಕರಿಸಿದ್ದಾರೆ.

ಹೀಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ವಿದ್ಯಾರಣ್ಯ **ಡಾ. ಮಾಧವ ಪೆರಾಜೆ**
23.07.2022

ವೀರಮಣಿ ಕಾಳಗ

ರಾಗ ಸಾಮ ಛಾಪುತಾಳ

ಹಟತೊಟ್ಟು ಬಕುತಿ ಬರಿಸಲು ಯತ್ನವ ಮಾಡೆಲೊ
ಮಟಮಾಯ ಭವವನು ಮನಸಲಿ ಎಣಿಸದೆ
ವಟಪತ್ರಶಯನನ ಪಾದಯುಗವನಿಂದು ॥ ಅ.ಪ ॥

ವಿದ್ಯಾಗರ್ವವು ಏಕೆ ನೀನ
ವಿದ್ಯಾವಶದೊಳಿರಬೇಕೆ?
ಖದ್ಯೋತಾನ್ವಯ ತಿಲಕನ ಪುರಸೇರ್ವ
ಬುದ್ಧಿಯಾಶೆಗೆ ತೋಚದೇಕೆ ಓ ಮನಸೇ ॥ ೧ ॥

ರಾಮನಾಮವ ಹೇಳ ನಾಣೇ ಮಾಡ
ಲಾಗದೆ ಹೇಳಲೆ ಬಾಯ್ಗೆ ಹುಣ್ಣೇ
ಭಾಮೆಯರು ಗೆರೆದಾಟದಿಹರೆಂಬ ಹಮ್ಮೇ
ಪಾಮರ ಮೈಯ ನಚ್ಚದಿರು ನೀರಗುಳ್ಳೆ ॥ ೨ ॥

ಭೋಗಭಾಗ್ಯಗಳಿರಲು ನಿಜ
ಭಾಗವತರನು ನೀ ಪೊಂದು
ತ್ಯಾಗರಾಜ ವರದನ ನಿನ್ನೊಳಗ
ಮೋಘದಿ ಧ್ಯಾನಿಸು ಭವರೋಗದೊಳಗೆ ॥ ೩ ॥

ರಾಗ ಮಧ್ಯಮಾವತಿ ಝಂಪೆತಾಳ

ನನ್ನನ್ನು ನಿಂದಿಪರು ನರರು ಶ್ರೀರಾಮ ॥ ಪ ॥
ವೇದಸನ್ನುತ ಭವವ ಬೇರೆ ಮಾಡಿದೆನೆನುತ ॥ ಅ.ಪ ॥

ಪಂಚಶರಜನಕ ಪ್ರಪಂಚದಲಿಹ ಸುಖವದು
ಮಂಜುವಲೆ ಎನುತಂತರಂಗದಲಿ ನೆನಸಿ
ಹಂಚಿಕೊಳುವ ಧನವಾರ್ಜಿಸುತೆನೆಗೆ ಸರಿಯಾ
ರೆಂದು ಸಲೆಗತಿಯು ಇಲ್ಲೆನುತ ನುಡಿದಿಹೆನೇ ॥ ೧ ॥

ದಿನವು ನಿತ್ಯೋತ್ಸವಗಳಿಗೆ ಆಸೆ ಮಾಡಿಹೆನೇ
ಮನಸಲಿ ಮನೆಯೊಂದೆನುತಿರುತಿಹೆನಲ್ಲವೇ
ಅನುದಿನವೊಬ್ಬರೇಳಿಗೆ ನೋಡಿ ತಾಳಲಾರ
ದೆನುತೆರಡು ಮಾಡುವೆನೆನುತ ನುಡಿದಿಹೆನೇ ॥ ೨ ॥

ಪ್ರಾಣವೇನಹುದು ಮಾನವೇ ಮೇಲೆನುತ
ತಾನು ಶ್ರೀರಾಮ ಪರಮಾನಂದ ಜಲಧೀ
ಶ್ರೀನಾಥ ಕುಲದೊಳಗಿಲ್ಲದಿಹ ದಾರಿಯ ತುಳಿದು
ಗೇಣುದ್ದವುದರಕೋಸುಗ ನರರ ಹೊಗಳಿದೆನೇ ॥ ೩ ॥

ಆಜಾನುಬಾಹುಯುಗ ಶ್ರೀಜಾನಕೀ ಪತಿ ಪ
ಯೋಜಾಕ್ಷ ಶ್ರೀತ್ಯಾಗರಾಜನುತ ಚರಣ
ಈ ಜಗದಲೀ ನಿನ್ನ ಪೂಜಿಸುತ್ತಿಹರ ನ
ವ್ಯಾಜ್ಯದಲಿ ಸಲಹು ಸುರರಾಜ ನಿನ್ನವನ ॥ ೪ ॥

ರಾಗ ಕೇದಾರಗೌಳ ಅಷ್ಟತಾಳ

ಸಾಕೇತ ಪಟ್ಟಣ ಆಳುವ ರಘುರಾಮ ।
ಸಾಕುತ ಜೆನಗಳೆಲ್ಲ ।
ಜೋಕೆಲಿ ಪಟ್ಟದ ಮಣೆಮೇಲೆ ಕುದ್ರ್ಯೊತ್ ॥
ಬೇಕಾದವರ ಸೇರ್ಸ್‌ತ ॥ ೧ ॥

ಸಾಮಂತ ರಾಜರ ಕರ್‌ಸಿ ಮಾತಾಡ್ಸಿ ॥
ಕಾಣಿಕೆಗಳ ತೆಕ್ಕ್‌ಂಡ್ದ್ ।
ಬೂಮಿ ಮಗನ ಗಂಡ ಗವುರವ ಬಾವಂಗೆ ।
ರಾಮದೇವರ್ ಕುದ್ದೊಳೊ ॥ ೨ ॥

ಲಕ್ಷುಮಣ ಭರತ ಶತ್ರುಘ್ನನೆ ಮೊದಲಾಗಿ ।
ಚಿಕ್ಕ ತಮ್ಮಂದ್ರ ನೋಡಿ ॥
ಉಕ್ಕೂವ ಪಿರಿತಿಲಿ ನೆಗೆಯಿಂದ ಶ್ರೀರಾಮ ।
ಮಕ್ಕಳ ನೋಡಿ ಹೇಳ್ದೋ ॥ ೩ ॥

ಸೂರ್ಯವಂಶದ ರಾಜರ್ ಆಳಿದ ಪಟ್ಟದ ।
ಕಾರ್‌ಬಾರ್‌ನ ಮಾಡಿ ನಾವು ॥
ಬಾರಿ ಕೀರ್ತಿನ ತಂದ್ ಪೀಳಿಗೆ ಗವುರವ।
ಪಾರಂಪರೆನ ಮೆರ್ಸೂಕು ॥ ೪ ॥

ಜೆನಗಳೆ ಮಕ್ಕಂತ ತಿಳಿಯೋಕು ತೀರ್ವೆ ತೆ ।
ಕ್ಕೊಣುಕು ಅದರಲಿ ಒಂದಂಸ ॥
ಮನುಸ್ಮೃತಿ ಹೇಳ್ಯುಟ್ಟು ಇದರ ಮೀರಿಕೆ ಬೊತ್ತ್ ।
ನೆನ್‌ಸಿ ನಡ್ಯೊಕು ದರ್ಮನ ॥ ೫ ॥

ಉರ್ತ್ತಬಾವರ ಕೊಂದುಕಳಿಯೊಕು ರಾಜರ್ ।
ಸರ್ತ್ತನಡ್ನೊಕು ದರ್ಮನ ॥
ವರ್ಸವರ್ಸನು ಆಗ ಮಳೆಬಾದು ದುರಾಚಾರ ।
ಬರ್‌ಗಾಲ ಓಡಿಹೋದು ॥ ೬ ॥

ಭಾಮಿನಿ

ಬಟ್ಟ್‌ಗಳೇ ರಾಜರ್‌ಗೆ ದೇವ್ರ್ರಗ ।
ಕಟ್ಟ್‌ಕಟ್ಟಳೆ ಮೀರದಂಗೆನೆ ।
ಕೊಟ್ಟ್ ಗವುರವ ನೋಡಿಕೊಂಬೊಕು ಪೂಜೆ ಮಾಡೋಕು ॥
ಕೆಟ್ಟ್ ಹೋಗದ ರೀತಿ ನಡಿಯೊಕು ।
ಕುಟ್ಟ್ ಹೋದುನೆ ಹೀಂಗೆ ಮಾಡದೆ
ಬುಟ್ಟ್‌ಬುಟ್ಟರೆ ಅಂತ ಹೇಳ್ದವೆ ರಾಮ ದೇವ್ರಾಗ ॥ ೧ ॥

ವಾರ್ದಿಕ

ಹೀಂಗೆ ಇರ್‌ಕನ ರಾಮದೇವರ ಕಾಂಬಕ್ಯಂತ
ನೇ ಗಡ್ಡಬುಟ್ಟ್‌ಕ್ಯೆಂಡ್ ಅಗಸ್ತ್ಯರ್ ಶಾಲೆ ಮ
ಕ್ಕಂಗ ಕೂಡಿ ಬಂದೊಳು ಬಾಕೆ ಬುಡೊಕೋಂತ ದೂತ
ಬಂದ್ ಕೈಮುಗ್ದ್‌ನಿಂತ್ ॥
ಓಂಗಿಕನ ಬಾರಿಕುಸಿಯಾತ್‌ಬಲ ನಾ ಬನ್ನೆ
ಹೇಂಗೆ ಹೇಳುದು ನನ್ನ ಪುಣ್ಯಾಂತ ಬಾಗ್ಲ್‌ಗೆ
ಸಂಗಾತ ತಮ್ಮಂದ್ರ ಕೂಡಿ ಬಂದ್ ರಿಸಿಗೆ ಕೈಮುಗ್ದ್ ಕರ್ಕ್ಯಂಡ್
ಬಂದ್ ಕುದ್ರಿಸಿ ॥ ೧ ॥

ರಾಗ ಸಾಂಗತ್ಯ ರೂಪಕ ತಾಳ

ಕಾಲ್‌ನ ಕಯ್ಯಲಿ ತೊಳ್ದ್ ಕುಡಿಯಕೆ ಕೊಟ್ಟ್ ।
ಕಾಲ್‌ನ ಹಿಡ್ದ್ ಕೈಮುಗ್ದ್ ॥
ಮೇಲೆ ಕುದ್ರಿಸಿ ಕೇಳ್ದೊ ಬಂದದ್ ಅಪ್ರೂಪ ।
ಹೇಳೊಕು ಕಜ್ಜ ಏನ್‌ಂತ ॥ ೧ ॥

ಹೀಂಗೆನೆ ಬಂದೊಳೆ ನೋಡಿ ಹೋಕ್ಯಂತ ನಿನ್ನ
ಹಾಂಗೇನ್ ಜಂಬರ ಇಲ್ಲ್ೕ ॥
ಬಂಗ ಕಡದೆ ನಿನ್ನ ಮೋರೆನ ನೋಡ್ಕನ
ಸಂಗತಿ ಏನ್‌ಂತ ಹೇಳ್ ॥ ೨ ॥

ಮೋರೆ ನೋಡಿರೆ ಸಾಕ್ ಕರ್‌ಳ ಕಂಡದೆ ಗಡ
ಬೇರೇನ್ ಹೇಳ್ದ್ ನಾ ನಿಂಗ್ ॥
ಬಾರಿ ಬೇಜರ ನಿನ್ನ ಮೊನ್ಸಿಗೆ ಬಂದುಟ್ಟು
ನೀರಜಾಕ್ಷನೆ ಹೇಳ್ ನಂಗ್ ॥ ೩ ॥

ಮೊನ್‌ಸಿನಲಿದ್ದರ ಹೊರಗೆ ತೋರ್ಸದೆ ಮತ್ತೆ
ಕೊಣ್ಣ್‌ಕೋ‌ಂತ ಇರುವೋ ಜಾಣರ್ಗ ॥
ನನ್ಗೆ ನೀ ಹೇಳೀಯ ಎತೆ್‌ನಾಂತ ಕೇಳ್ಕನ ॥
ಮನ್ಗಳ ಮಹಿಮ ಹೇಳ್ತಾಗ ॥ ೪ ॥

ರಾಗ ಕಾಂಭೋಜಿ ಝಂಪತಾಳ

ಬಟ್ರೆ ನೀವ್ ದಯಮಾಡಿ ಕೇಳೋಕು ಸಂಸಾರ ।
ಕುಟ್ಟ್ೕ ಹಿಡ್ದ ಬೆದ್‌ರ್ ಒಳಗೆ ಗೋಳ್ೕ ॥
ಕೆಟ್ಟ್ ಹೋದರ ನಾ ಏನ್‌ಂತ ಹೇಳ್ದುಗಡ ।
ಒಟ್ಟ್ ಕೆಡ್‌ಗ್‌ತ್ ಕಾರ್ಯ ನಸ್ಟನೇ ಆತ್ ॥ ೧ ॥

ಕುಂಭಸಂಭವ ಕೇಳ್ದ್ ನೆಗಾಡ್ತಲೇ ಹೇಳ್ತಾಗ
ಕುಂಭಕರ್ಣನವನಣ್ಣ ರಾವಣಗಂದೇ ॥
ಕುಂಬ್ದಕಡ್ದವ್ ನೀ ಜೆನಕೆ ಎತೆ ಅಲ್ಲದೆನ್
ನಂಬುದೆಂತರ ಎತೆ ನಿಂಗೇಂತ ರಾಮ ॥ ೨ ॥

ಉಗ್ಗಪ್ಪ ನೀವ್ ಕೇಳಿ ಮೊಯಿಂಸ ನಾನಾಗಿ
ಬೊಗ್ಗಿ ನಡಿಯೊಕು ಕೊರತೆ ನಂಗೇನು ಉಟ್ಟು ॥
ಸುಗ್ಗಿ ಏಣೆಲ್ ಅಂತ ಜನರ ನೋಡೊಕು ನಾವು
ಬೊಗ್ಗಿದರೆ ಗುದ್ದು ಬಿದ್ದದ್ ಗೊತ್ತು ನೀವ್ಗ ॥ ೩ ॥

ರಾಗ ಬೇಗಡೆ ಆದಿತಾಳ

ಗೊತ್ತು ನಂಗೆ ರಾಮ ನೀ ಹೇಳ್ದ್ ।
ನರಮೊಯಿಂಸ ರಾಜ್ಯದ ।
ಗುತ್ತು ಬಾರಿಕೆ ನಿಂಗ್ ಸೇರ್ದ್ದ್ ॥
ಗತ್ತ್ ಬುಟ್ಟೊಳೊ ಕಪ್ಪ ಕೊಟ್ಟೊವ್ ।
ಸರ್ತನಿಲ್ಲದೆ ಒಕ್ಲ್ ರಾಜರ್
ಸತ್ತ್‌ಹೋತ್ ಕುಬೇರ ನಿನಮುಂದೆ ।
ಎತ್ತ ನೋಡ್ದರು ನಿಂಗೆ ಸರಿಯಾರ್ ॥ ೧ ॥

ಮಾರಿಯಾದರ್ ಹಲ್ಲ್ ಕಿತ್‌ಬುಡುವೋ ।
ಬ್ರಹ್ಮರಕ್ಕಸ ರಣಪಿಶಾಚಿ ।
ನೀರ್ಸ್ ಕುಡ್ಸುವೊ ನಿನ್ನ ದಂಡ್‌ನವು ।
ಬಾರಿ ಪಂಡಿತರೊಳು ನಿನ ಸಬೇಲಿ ।
ಯಾರಿಗೇಳಿಯ ನಂಗೆ ಗೊತ್ತಿಲ್ಲೇನೋ ॥ ೨ ॥

ಮುರ್ದು ಸಿಂಹನ ಜಾಡೆ ತರುವೊ ಗಡ ।
ನೀರ್ ಮುಳ್ಗಿಮೀನ್ನ ।
ಸುರ್ವನೋಡಿ ಹೆಜ್ಜೆ ಹಿಡಿವೊ ಗಡ ॥
ಅರ್ವೆಲೆಣ್ಣೆ ತೆಗೆವೊ ಪೊಯ್ಯೆ ಹಿಂಡಿ ।
ಇರ್ವೊ ತಮ್ಮಂದ್ರ್ ನಿಂಗೇನ್ ।
ಬುಡು ಸರ್ವ ಬ್ರಹ್ಮಾಂಡನ ಗೆಲ್ದವ್ ನೇ
ಪುರೋಹಿತರೆ ವಶಿಷ್ಟರಲ್ಲೇನ್ ॥ ೩ ॥

ಹೊಡ್ದ್‌ಬಡ್ದ್ ಲೋಕನೆಲ್ಲನೂ ।
ಗೆಲ್ದಂತ ಮಾರಿನ । ಬುರ್ಡೆ
ಹೊಡ್ದ್ ರಾವಣನ ಕೊಂದಿಯಾ ॥
ಕಡ್ಡೆ ನೀ ರಕ್ಕಸರ ಬೇರ್‌ನ ।
ಮೊಯಿಂಸಂಗೆ ಮೋಕ್ಷಕೆ ।
ಕಡ್ದ್‌ದಾರಿನ ಮಾಡಿ ಕೊಟ್ಟಿಯಾ।
ಕುರ್ಡರಿಗೆ ದಾರಿ ಹೇಳ್ದೇಯ ॥ ೪ ॥

ಭಾಮಿನಿ

ದೇವ್ರು ನರಮೊಂಯಿಸರ್ ಯಕ್ಸರ್ ।
ಹಾಂವು ಗಂದರ್ವರ್ ರಿಸಿಗ ರಕ್ಕಸ ।
ಜೀವಿಗಳೆದೆಸ್ಟೋ ಅವರವರ ಕರ್ಮ ಪಲದಾಂಗೆ ॥
ಸಾವು ಬಂದದೆ ಅಲ್ಲದಿದ್ದರೆ ।
ನಾವ್ಗೆ ಕೊಲ್ಲಿಕೆ ಬೊತ್ತ್ ಉಗ್ಗಪ
ನೀವು ಹೇಳ್ದಂಗೇನ್ ನನ್ನೊಳಗಿಲ್ಲೆ ಯಾಮಾಯೇ ॥ ೧ ॥

ರಾಗ ಮಧುಮಾಧವಿ ತ್ರಿವುಡೆ ತಾಳ

ಯಾಕೆ ನೀ ಹೀಂಗೆಲ್ಲ ಹೇಳ್ದೀಯಾ ।
ರಕ್ಕಸರ ಕೊಂದೊಳೊನೊ ಉಳಿದವು ॥
ಮಕ್ಕಳಾಟನೊ ಉರ್ತಬಾವರ ।
ಕೊಂದು ಮುಗ್ಸೊದು ರಾಮನೇ ॥ ೧ ॥

ಹೇಳಿ ಉಗ್ಗಪ ಯಾರ್ ರಾವಣ ।
ಹಾಳ್ ಕುಂಭಕರ್ಣಯಾರವ್ಂ
ಬೋಳರಿಬ್ಬರ್ ಹೇಂಗೆ ಹುಟ್ಟಿದೊ ।
ಏನ್ ಕಾರಣ ಹೇಳೊಕು ॥ ೨ ॥

ನಿಂಗೆ ಗೊತ್ಲೆನೊ ಲಾಯ್ಕ್ ಆತ್‌ಬಲ
ನಂಗೆ ಗೊತ್ತೊಟೊ ಇಲ್ಲೆ ಅಂತನೊ
ಹೇಂಗ್ ಆದರು ಸೂರ್ಯ ವಂಸದವಂಗೆ ಈ ನಡೆ ಸಂದದೆ ॥೩॥

ಆತ್ ನಂಗೆನೆ ಎಲ್ಲ ಗೊತ್ತುಟು ।
ಮಾತ್‌ಎಂತಕೆ ಎಲ್ಲ ಹೇಳಿನೇ
ಸಾತ್ ಕೊಟ್ಟರೆ ಸಾಕ್ ಮಾರಯ ।
ಕಥೆನ ಹೇಳುವೆ ಕೇಳ್‌ಯ ॥ ೪ ॥

ವಾರ್ಧಿಕ

ಇಸಯಕೇಳ್ಕನ ತಲೆಗೆ ಮರನೆ ಬಿದ್ದಾಂಗಾದ್ ।
ಕುಸಲ್ ಮಾಡಿಕೆ ಹೋಗಿ ಗಾಸಿ ಆತ್ ಕೇಳ್‌ಯ ಕತೆ
ನ ಸನಕ ಸನಂದನರ್ ಒಂದು ದಿನ ವೈಕುಂಠದೊಳ್ಕಿರನ
ವಿಷ್ಣುನೇಕಾಂಬಕ್ಯೆಂತ ॥

ಇಸಯ ಹೇಳ್ಕನ ಬಂದ್ ಜಯವಿಜಯ ದೂತರ್‌ಗೆ ।
ಮಿಸ್‌ಕಾಡದಂಗೆ ತಡೆದವ್ರ ಬಾಗ್ಲಲಲಿ ಹೋ ।
ಕೆ ಸುಲಬಕೆ ಬುಡ ದಿರ್ಕನ ಕೋಪದಲಿ ಶಾಪನ ಕೊಟ್ಟೊ
ರಕ್ಕಸರಾಗಿ ಹುಟ್ಟೊಕುಂತ ॥ ೧ ॥

ತಲೆಕೆಟ್ಟ್ ಹೋತವ್ಕೆ ಶಾಪಕೊಟ್ಟಾಕನ
ಗಳಗಳನೆ ಮರ್‌ಟ್‌ಕ್ಯೆಂಡೊ್ ಓಡಿಹೋಗಿ ವಿಷ್ಣು ಹ ।
ಕ್ಕಲೆ ನಿಂತ್ ಬೇಡಿಕ್ಯೆಂಡ್ ದೇವ್ರೆ ನಿಮ್ಮಬುಟ್ಟ್ ಹೋದು
ಹೇಂಗ್ಯೇಂತ ಕೇಳಿ ॥
ನಳಿನಾಕ್ಷ ನೋಡ್ಯಾಗ ಮೂರು ಜನ್ಮದ ಮೇಲೆ ।
ತಳಕೆ ಬಾವಾಂಗೆ ಮಾಡಿನೆ ಹೋಗಿ ಬನ್ನೀಂತ ।
ಕಳಿಸಿಕೊಟ್ಟೊತ್ ಹಿರಣ್ಯಾಕ್ಷ ಹಿರಣ್ಯಕಶಿಪುಗಳಾದೊ ಕೊಂದೆ
ನರಸಿಂಹನಾಗಿ ॥ ೨ ॥

ಬ್ರಹ್ಮಂಗೆ ಮಗಪೌಲಸ್ತ್ಯಮುನಿ ಅವನ ಮಗ ।
ಮೈಯ್ಮೆನ ವಿಶ್ರವಸು ಮಂದಾಕಿನೀ ಕೈಕ ।
ಸೆಮ್ಮಂಗೆ ಮೊದುವೆಯಾದೊ ಮಂದಾಕಿನಿಯ ಮಗ ದುಡ್ಡಿಂಗೆ
ದೊಡ್ಡಪ ಕುಬೇರ ॥
ಅಮ್ಮಣ್ಣೀ ಕೈಕಸೆಗೆ ಮಕ್ಕಂಗಳಾದೊ ಹಿಂ ।
ದೊಮ್ಮೆ ಶಾಪನ ಪಡ್ದ ಜಯವಿಜಯ ದೂತರ್ಗ ।
ಸಮ್ಮಾರ ಮಾಡ್ದೆ ರಾವಣ ಕುಂಭಕರ್ಣರ ನೀಂತ ಹೇಳ್ಕನದ್ಕೆ॥೩॥

ರಾಗ ಮಧ್ಯಮಾವತಿ ಏಕತಾಳ

ರಾಮದೇವರ್ ಹೇಳ್ದೊ । ಕೆಲ್ಸ ಕೆಡ್ಗಿನೆ ಹೋತ್ ।
ಭೂಮಿ ಮಗನಿಗೆಂತ । ಪಾಪನೆ ಬಾತ್ ॥ ೧ ॥

ಬ್ರಮ್ಮ ಹತ್ಯೆನೆ ಆತ್ । ಹಾರರ ಕೊಂದೆ ನಾ
ಬ್ರಮ್ಮ ಇದ್ಕ್ಯೆಂತನೆ । ನನ್ನ ಹುಟ್ಟಿಸಿತೋ ॥ ೨ ॥

ಜೀವಾಲಿ ಇರ್ಕನ । ಬ್ಯೆಯ್ಕಂಬೊ ಜೆನ ನನ್ನ
ಸಾವಾಗಿ ಹೋದಾರ್ । ನರ್ಕ ತಪ್ಪದ್ ನಂಗೆ ॥ ೩ ॥

ಎಂತರ ಮಾಡ್ದುಂತ । ಹೇಳಿ ಉಗ್ಗಪ ನೀವು ।
ಬಾತಲ್ಲ ಪಾಪ ರಘು । ವಂಶಕೆಲ್ಲಕೂ ನೋಡಿ ॥ ೪ ॥

ಯಾವ ಹೋಮನ ಮಾಡ್ದು । ಯಾವ ತಪನ ಮಾಡ್ದು ।
ರಾವಣ ಕೊಲೆನ ಹೆಂಗೆತ । ಬೂಟುದು ಹೇಳಿ ॥ ೫ ॥

ರಾಗ ನವರೋಜು ಏಕತಾಳ

ನೆಗೆ ಬಾತ್ ಉಗ್ಗಪ್ಪಂಗೆ । ನೀ । ಜಗದು ಪತೀ ಬ್ರಮ್ಮಂಗೆ
ಹಗೆಗಳ ಕೊಲ್ಲಿಕೆ ದಶರಥ ರಾಜಗೆ ।
ಸಿಗುವೆನವರ ಮಜ್ಜ ನಾಗಿ ನಾ ಕಡೆಗೆ ॥ ೧ ॥

ಹೇಳ್ದಾ ಮಾತ್‌ನ ಹಾಂಗೆ । ನೀ । ಸೀಳ್ದೀ ರಾವಣ ತಲೆನ
ಕೇಳ್ದವು ಎಲ್ಲರ್ ಇರುವೊ ಲೊಕಲಿ ।
ಬಾಳ್ದವೆ ನಿನ್ನನೆ ನಂಬುತ ಭಕ್ತರ್ ॥ ೨ ॥

ಪಾಪನೆ ಬಾಕಿಲೆ ನಿಂಗೆ । ಆ ।
ದೋಸನು ಹಕ್ಕಲೆ ಬಾಲೆ ॥ ಮಾಪುನೆ ಉಟ್ಟುಯ ಪರ
ಮೋಸಾದರೆ । ತಾಪತ್ರಯ ನಿಂಗೆಲ್ಲಿಯ ರಾಘವ ॥ ೩ ॥

ಭಾಮಿನಿ

ಮಾತ್‌ಗೇಳ್ನೇ ಕೇಳಿ ಉಗ್ಗಪ
ನಾ ತಿಳಿಯದವ ಅಂತ ಕಿಚ್ಚಿಗೆ
ಬೂತ ಕೈ ಹಾಕ್ದಂಗೆ ಮುಟ್ಟಿರೆ ಸುಡದೆ ಬುಟ್ಟದೆನಾ ॥
ಗಾತಿ ಇದ್ರ್‌ಂದಾತ್ ನಂಗೆ ಪಾಪನೆ
ಬಾತ್ ನೀವೇನಾರ್ ಹೇಳ್ದರು
ಆತ್ ಬುಡಿ ಅದರ ಕತೆ ಮಾಪುನ ಮಾಡಿಕೊಡುದು ಹೇಂಗೆ
॥ ೧ ॥

ವಾರ್ಧಿಕ್ಯ

ಎಸ್ಟ್ ಹೇಳ್ದರು ಕೇಳ್ದುಲೆ ನೀಂತ್ ಹೇಳ್ಕನಮತ್ತೆ ।
ಇಸ್ಟ್ ಹೇಳ್ನೆ ಪದ್ದತೀಂತೊಂದುಟ್ಟು ಲೋಕಕೇ ।
ಇಸ್ಟ ಇದ್ದರೆ ಮಾಡಿ ನೋಡು ಗಡ ಕುದುರೆಬಲಿ
ಕೊಡುವಯಾಗನ ಮುಂದೆನೀ ॥
ಅಶ್ವಮೇಧಾಂತದನಕರ್ದವೆ ನೀ ಈಗ ।
ತರ್ಸ್ ಕುದ್ರೇನ ದಂಡ್ ನಡಿಲಿ ಯುದ್ಧ ಕಪ್ಪನಾ ।
ತರ್ಸಿ ಕುದ್ರು ನೀ ಯಾಗಕೆ ಗುರು ವಶಿಷ್ಟರ ಕೇಳಿ ಎಂದಗಸ್ತ್ಯರೆದ್ದು
ಹೋದೋ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡಿ ತಾಳ

ತರ್ಸಿ ಕುದ್ರೆನ ಪೊರ್ಲು ಮಾಡಿದೊ
ಬೆರ್ಸಿ ಹೋಕನ ದಂಡ್ ಕಪ್ಪನ
ತರ್ಸಿ ಕೊರ್‌ಂಬಕೆ ಜಗಳಕೆದ್ದರೆ । ದೊರೆಗಳೆಲ್ಲ ॥ ೧ ॥

ದಂಡನಾಯಕ ಮಾಡ್ನೆ ಕುಞ್ಞಣನ
ದಂಡ್ ಹೊರ್ಡ್ಲಿ ಹನುಮ ಪುಷ್ಕರ
ದಂಡ್‌ನೊಟ್ಟಗೆ ಸೇರಿ ನಡಿಯೊಕು ರಾಮಕಟ್ಲೆ ॥ ೨ ॥

ಹಾಂಗೆ ಆಗಲಿ ಅಂತ ರಾಮಗೆ
ಸಾಂಗವಾಗಿನೆ ಅಡ್ಡ ಬೀಳ್ತ
ಸಂಗಡಿಗ ಶತ್ರುಹನ ಕೂಡಿದೊ ಬಂಗಪಡದೆ ॥ ೩ ॥

ಪಡೆನಡಿತ್ ಶತ್ರುಹನ ಮುಂದಕೆ
ಬಡಗ್ ದಿಕ್ಕಿನ ಕಪ್ಪ ಕಾಣಿಕೆ
ಪಡೆದೊ ವಿದ್ಯುನ್ಮಾಲಿಗಳ ತಲೆ ಕಡಿದ್ ಮುಂದೆ ॥ ೪ ॥

ಮುಂದೆ ಚಕ್ರಾಂಕಿತನ ರಾಜನ
ಕಂದ ದಮನಾ ಕುದುರೆ ಕಟ್ಟಿರ್
ಅಂದವನ ಕಾಳಗದಲಿ ಸೋಲಿಸಿ ।
ಹಿಂದೆ ಕರ್‌ಕ್‌ಂಡ್ ಹೊರ್‍ಟ್ಟೊ ಪಿರಿತಿಲಿ ॥ ೫ ॥

ರಾಗ ಕೇದಾರಗಳ ಅಷ್ಟತಾಳ

ಕುಸಿಯಲಿ ದಮನನ ಕರ್‌ಕೊಂಡ್ ಕುಞ್ಞಣ
ಹೊಸತ್ ಸೈನ್ಯನ ಸೇರಿಸಿ ॥
ಮೊಸೆದ್ ಮುಂದಕೆ ಚಕ್ರಾಂಕಿತ ನಗರನ
ಬಿಸಿಲಲಿ ದಾಟಿ ಮುಂದೆ ॥ ೧ ॥

ಕುದುರೆನ ಹಿಂದೆಕ್ಯೆಂಡ್ ಮುಂದೆ ಹೋಕ್ಯಾಕನ
ಮೊದೊಳಿಗೆ ನಡ್ದ ಹಾಂಗೆ ॥

ನದಿ ಯಮುನೆ ಹರಿತಿತ್ತ್ ಅದರ ನೋಡುತ ದಂಡ್ ।
ಬದಿಲಿ ನಿಂತತ್ ಸಾಲಾಗಿ ॥ ೨ ॥

ಕೈಕಾಲ್ ಮೋರೆನ ತೊಳ್ಡ್ ನೀರ್‌ನ ಕುಡ್ಡ್
ಕೈಕಾಲ್ ನೀಡಿ ಕುದ್ದೊ ॥
ಲ್ಯಾಕಾತ್ ಎಲ್ಲವುಕೆ ಉಲ್ಲಾಸ ಮಾಡಿತ್
ಲೋಕ ಪಾವನೆ ಯಮುನೆ ॥ ೩ ॥

ಒಮ್ಮೆಲೇ ನೋಡ್ಕನ ಕುದ್ರೆ ಮುಳುಗಿ ಹೋತ್
ಸುಮ್ಮನೇ ಕಯನೊಳಗೆ ॥
ಅಮ್ಮಮ್ಮ ಏನಾತ್ ಅಂತೆಲ್ಲ ನೋಡ್ದವು
ಕುಞ್ಞಣ ಮರನಾಗಿ ಹೋತ್ ॥ ೪ ॥

ಎಲ್ಲಿ ಹೋತೋ ಕುದ್ರೆ ಏನಾತೊ ಗೊತ್ತಿಲ್ಲೆ
ಎಲ್ಲ ಆಚಿರ ನೋಡಿರೆ ॥
ಎಲ್ಲಿನಾ ಕೇಳುದು ಎಂತರ ಮಾಡ್ದುಂತ
ಕಲ್ಲಾತ್ ಶತ್ರುಹನೆ ॥ ೫ ॥

ರಾಗ ಮಾರವಿ ಏಕತಾಳ

ಪುಷ್ಕರ ಸಿಟ್ಟ್‌ನ ನಿಟ್ಟಿನ ಕಕ್ಕ್‌ತ ಹೇಳ್‌ತ್ ॥
ಸಿಕ್ಕಿರೆ ಬುಡಿಕಿಲ್ಲೆ ॥
ಸೊಕ್ಕು ಮುರಿವೆ ನಾ ಬಕ್ಕೆ ಹಲ್ಸನ ಕಡಿ
ಯಕ್ಕೆ ಕಷ್ಟನ ನಂಗೆ ॥ ೧ ॥

ಅಪ್ಪಣೆ ಕೊಟ್ಟರೆ ಅಪ್ಪನ ಆಣೆಗೂ
ಸೊಪ್ಪುನ ಕಡ್ದಾಂಗೆ ॥

ತಪ್ಪಿದವರ ತಲೆ ತಪ್ಪಿಸಿ ತಾವ್ೀ
ಒಪ್ಪೊಕು ನೀನನ್ನ ॥ ೨ ॥

ಹಲ್ಲ್‌ನ ಕಚ್ಚ್‌ತ ನಿಲ್ಲ್‌ತ ದಮನಾ
ಎಲ್ಲರ ಮುಂದೇನೇ ॥
ಕೊಲ್ಲದೆ ಬುಡಿಕಿಲೆ ನಿಲ್ಲೊಕು ಇಂತದ್ ।
ಎಲ್ಲಕು ಗೊತ್ತಾಕು ॥ ೩ ॥

ಎಲ್ಲಿನೆ ಇರ್ಲ್ಯದ್ ಎಲ್ಲಿನೆ ಹೋಗ್‌ಲಿ
ಸುಳ್ಳನ ಹೇಳ್ದುಲೆ ನಾ ॥
ಒಳ್ಳೇದಾಕಿಲೆ ಎಳ್ದೊಲೊ ಕುದುರೆನ
ಎಳ್ದ್ ತಂದನೆ ನಾನೆ ॥ ೪ ॥

ಭಾಮಿನಿ

ಮೀಸೆ ತಿರ್‌ಗಿಸಿ ಇಬ್ಬರಾಗಲೆ
ಬಾಸೆ ಮಾಡ್ಕನ ಹೇಳ್ತ್ ಶತ್ರುಹ
ಬಾಸೆ ಇಲ್ಲೆನ ನೀವ್ಗೆ ಕುದುರೆದ್ ಎಲ್ಲಿ ಹೋತ್‌ಗಡ ॥
ದೇಸೆ ಬೇರೆನೆ ಬಾಸೆ ಬಾರೆನೆ
ಮೋಸ ಹೋಗದೆ ಮೊದ್ಲೆ ತಿಳಿಯೊಕು
ಏಸ ಕಟ್ಟುದು ಬೇಡ ಸುದರಿಕೆ ಮಾಡಿ ನೋಡೋಮೋ॰ ॥ ೧ ॥

ರಾಗ ಸಾಂಗತ್ಯ ರೂಪಕ ತಾಳ

ಕೋಮಣ ಕಟ್ಟಿಕ್ಯಂಡ್ ವೀಣೆನ ಬಾರ್ಸತ
ರಾಮ ರಾಮಾಂತ ಪದ ಹೇಳಿ ॥
ಭೂಮಿಗೆ ಇಳ್ದಾಗ ಬಾತ್ ನಾರದ ಮುನಿ
ಸ್ವಾಮಿನ ಕರ್ದ್ ಕುದ್ರಿಸಿದೊ ॥ ೧ ॥

ಸರಿಸಮಯಾಕೆ ನೀವು ಬಂದೆರಿ ಸ್ವಾಮಿಗ
ಪುರುಸೋತು ಮಾಡಿ ನಮ್ಮತ್ತ ॥
ಬರೊಕು ನೀವು ಕುಡಿಯಾಕೆ ಕೊಟ್ಟನೆ ತೆಕೊಣೊಕು
ಪರಮಾತ್ಮನಂತ ರಿಸಿಮುನಿಗ ॥ ೨ ॥

ರಾಮನ ಯಾಗದ ಕುದ್ರೆನ ಹಿಂದೆಕ್ಯೆಂಡ್
ಭೂಮಿನ ಸುತ್ತೋವು ನೀವು ॥
ಕಾಮ್‌ಬಕೇ ಇಲ್ಲೇಯ ಕುದ್ರೆ ಎಲ್ಲಿಗೇ ಹೋತ್ ।
ರಾಮಾರಾಮಾಂತ ಮುನಿ ಹೇಳ್ತ್ ॥ ೩ ॥

ಉಗ್ಗಪ ಕೇಳೋಕು ಯಮುನೆನ ಕಯಕೆ
ನುಗ್ಗಿತ್ ಕುದುರೆ ಇನ್ನಿಲ್ಲೆ ॥
ಸನ್ಗತಿ ಇಸ್ಟೇನೆ ತಿಳಿದ್ ಹೇಳೋಕು ನೀವು
ಬನ್ಗ ಬಂದನೆ ನಾನ್ ಕೇಳಿ ॥ ೪ ॥

ರಾಗ ಬೇಗಡೆ ಅಷ್ಟತಾಳ

ಸತ್ಯದೃಸ್ಟಿ ಕಾಂಬಸ್ಟ್ ನಾ ಹೇಳ್ನೇ । ಶತ್ರುಹನೆ ಕೇಳಿಯಾ ।
ಸತ್ಯ ತಿಳಿನೀ ಇದ್ರ್ ಕತೆ ಕೇಳ್‌ನ್ನೇ । ಅತ್ತ ನೋಡ್ ನಾಕೂರ
ಕಯನದ್ । ಸುತ್ತಿ ಬಂದದೆ ಚಕ್ರ ಸುಳಿಯದ್ । ಸುತ್ತ ತಿರ್‌ಗಿಸೆ
ಳ್‌ಕ್ಯೆಂಡ್ ಹೋದದೆ । ಮತ್ತೆ ಪಾತಾಳದತ್ತ ಸಿಕ್ಕಿದರ ॥ ೧ ॥

ಸೀದ ಹೋಕನ ಮುಗುಳಿ ಕಂಡದೆಯ । ವಿಷ್ಣು ಅಲ್ಯಟ್ಟು ।
ಸಾದ್ಯ ಆಕಿಲೆ ಮುಂದ ಹೇಳಿಕೆಯ । ಬೋದಿಗೆನ ಕಂಬಗಳ
ಅರಮನೆ । ಓದಿಕ್ಯೆಂಡದೆ ವಿಷ್ಣು ನಾಮನ । ಬಾದೆ ಇಲ್ಲದೆ
ಗೂಡೆ ಒಂದೆನೆ । ಹೋದ ಕುದ್ರೆನ ಅಲ್ಲಿ ಕಟ್ಯೆಳೊ ॥ ೨ ॥

ರಕ್ಕಸರ ಮಗ ರಕ್ಕಸರ ಮನೆನೆ । ಮಾಯಾನ ಲೋಕನೆ ।
ಸಿಕ್ಕಿಬುಟ್ಟರೆ ಎಲ್ಲ ಮಾಯಾನೆ । ಸಿಕ್ಕ ಕುದುರೆನ ನಿಗರ್ ರೂಪನ
ಸೊಕ್ಕಿ ಮಾಡ್‌ತ ಎಳ್ದ್ ತಂದೊಳೊ । ಮಕ್ಕ ಬರ್ಲೀಂತ
ಕಾದ್ ಕುದ್ದೊಳೊ । ನೆಕ್ಕಿ ಬುಡುವೊಯ
ನಿನ್ನ ಕಂಡರೆ ॥ ೩ ॥

ಭಾಮಿನಿ

ಕತೆನ ಕೇಳ್ದ್ ಶತ್ರುಹಗೆ ಕುದ್ರೆನ
ಎತೆನೆ ಹೆಚ್ಚಿತ್ ಕಯನ ಅಡಿನಲಿ
ಮತಿಯಿಲ್ಲದಂಗೆ ಅರಮನೆ ಕಟ್ಟಿದವರ್ ಯಾರ್ ॥
ಮಿತಿನ ಮೀರಿದೆ ನಮ್ಮ ಕೈಯಿಂ
ದ ತಿಳಿಯೊಕು ನಂಗೇಂತ ಕೇಳ್ಕನ
ಮತಿಗೆ ತಿಳಿಸಿದಸ್ಟ್ ಹೇಳ್ನೆ ನಾ ಕೇಳ್ಂತ ನಾರದ ಹೇಳ್ತ್ ॥ ೧ ॥

ರಾಗ ಕಾಂಬೋಜ ಝಂಪೆತಾಳ

ಮಾರೀಚ ರಕ್ಕಸನ ಮಗ ಕುಮುದಿನಿ ಕೇಳ್ ನೀ
ಬಾರಿ ಪೊರ್ಲುನ ಗೂಡೆ ಪ್ರಾಯ ಬಾಕನಯ ॥
ದಾರಿರಾಮನೇ ನಿಂಗೇತ ಹೇಳ್ತದರಪ್ಪ
ಆ ರೀತಿ ಅರಮನೆನ ಕಟ್ಟಿಸಿದ್‌ಕ್ಯೆಂತ ॥ ೧ ॥

ಪರಮಾತ್ಮನೊಲಿಸಿಬುಡು ಸರುವ ಎತ್ನನ ಮಾಡ್
ಅರಮನೆನೆ ನಿಂಗೇತ ಕಟ್ಟಿಕೊಟ್ಟೋ್ ॥
ಮರ್ಳ್ ರಾವಣಸತ್ತ ಮೇಲೆ ಆ ಗೊಡೆಗ
ಇರುವೋ ಇಲ್ಲಿಯೇ ರಾಮ ಭಜನೆ ಮಾಡ್‌ಕ್ಯೆಂಡ್ ॥ ೨ ॥

ಮದನಾಕ್ಷಿ ತಾರಾವಳಿ ಹೆಸ್ರುಗೂಡೆಗಳೆರಡ್ ।
ಪದಹೇಳಿ ಕೊಂಡಿರುವೊ ಕುಮುದಿನಿನ ಕೂಡಿ ॥
ಅದರ ಕತೆಕೇಳ್ ರಾವಣನ ಸೆರೆ ಮನೆಲಿದ್ದ
ಹದಿನಾರ್ ಸಾವ್ರ ಜೆನ ಗೂಡೆಗಾ ಒಳೊಯಾ ॥ ೩ ॥

ಭಾಮಿನಿ

ಗೂಡೆ ಕುಮುದಿನಿ ತಪಸ್ ಮಾಡ್ತಾ
ಮಾಡುತುಟ್ಟ್‌ಯ ಜಪನ ಅರಮನೆ
ನೋಡದಂಗೆನೆ ಬೇರೆ ಜನ ಕಾವಲಿಗೆ ಮದನಾಕ್ಷಿ ॥
ನೋಡಿ ಕುದ್ರೆನ ಕಟ್ಟಿತದ್‌ನೀ
ಮಾಡಿ ವರುಣನ ಮಂತ್ರ ಜಪ ಕೈ
ಗೂಡಿದರೆ ಹೋಗೂಂತ ನಾರದ ಮುನಿಗಳೆದ್ದು ಹೋದಂದ್॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಕೇಳಿ ಶತ್ರುಹನಂದ್ ಪುಷ್ಕರ
ನಾಳ್ ಬರೊಕುಯ ದಮನ ಸುಬಾಹಗ ।
ಳೇಳಿ ಕಾಳಗ ಕೊಡೊಮೊ ಅಲ್ಲಿಗೆ । ನಡೆಲಿ ಬೇಗ ॥ ೧ ॥

ಆದು ಸಣ್ಣಪ ಅಂತ ಪುಷ್ಕರ ।
ಪಾದ ಮುಟ್ಟಿನೆ ದಂಡ್ ಸೇರ್‌ಸ್ತ ।
ಸೀದ ಹೊರ್ಟ್‌ತ್ ತಾಕೆ ಕುದ್ರೆನ । ಬೇಗ ನೆಲಕೆ ॥ ೨ ॥

ಆಗ ಶತ್ರುಹ ವರುಣ ಮಂತ್ರನ ।
ಬೇಗ ಜಪಿಸಿತ್ ಯಮುನೆಗೆ ಇಳ್ದ್ ।
ಸಾಗಿ ಬಂದೊಳು ಸೀದ ಮಾಯದ । ಪುರಕೆ ದಂಡ್ ॥ ೩ ॥

ಏಳ್ ಸುತ್ತ್‌ನ ಕೋಟೆ ಅರಮನೆ ।
ಏಳ್ ಮಾಳಿಗೆ ಬೋದಿಗೆನ ಮರ ।
ಸಾಲ್ ಕೇರಿಗಳೊಳಯ ಗೂಡೆಗ । ಸುತ್ತ ನಿಂದ್ ॥ ೪ ॥

ದೇವ ಲೋಕನ ಅಯ್‌ಸಿರಿನೊ ಆ ।
ದೇವ ಬ್ರಮ್ಮನ ಮನೆನೊ ಗೊತ್ಲೇ
ಯಾವ ಸೀಮೆಗೆ ಬಂದೊ ಅಂತಲಿ । ಕುಞ್ಞಣನಂದ್ ॥ ೫ ॥

ಭಾಮಿನಿ

ಅರ‍್ಮನೆನ ಬಾಗಿಲಿಲಿ ಕಾಯುವ
ಕರ‍್ಮ ಕೆಂತೆಲೆ ಇದ್ದ ದೂತಿನ
ಕರ‍್ಸಿ ಶತ್ರುಹ ಹೇಳ್ತ್ ರಾಮನ ಕುದ್ರೆ ಕಟ್ಟ್ಯೊಳರಿ ॥
ಬೆರ‍್ಸಿ ಬೆರ‍್ಸಿನೆ ಹೊಡಿವೆ ಬುಟ್ಟರೆ
ತರ‍್ಸಿ ಕಪ್ಪನ ಕೊಟ್ಟ್ ಕಳ್ಸಿರೆ
ಒರ‍್ಸಿ ಹಾಕಿನೆ ಮಾಡ್ದ ತಪ್ಪುನ ಅಂತ ಹೇಳೋಕು ॥ ೧ ॥

ಕಂದ

ಗಡಿಬಿಡಿಲೋಡುತ ದೂತಿಯದ್
ಬುಡುತ ಉಸಿರ‍್ನಾಗ ಕುಮುದಿನಿ ಗೂಡೆನ ಕಾಲ್ಗಂದ್ ॥
ನಡ್‌ಗ್‌ತ ಅಡ್ಡ ಬೀಳ್ಕನ ಹೇ
ಳ್ತಡಗಿಸುದು ಬೇಡ ಸಂಗತ್ಯೇನಾತ್ ಹೇಳ್ನೇಂತ್ ॥ ೧ ॥

ರಾಗ ಕಾಂಬೋಜಿ ಆದಿತಾಳ

ಅಮ್ಮ ಮದನಾಕ್ಷಿ ಕೇಳಿ । ಸುಮ್ಮನೇಕೆ ಕುದ್ರೆ ನೀವು ।
ಅರ‍್ಮನೇಲೇಕೆ ಕಟ್ಟಿರಿ । ಸುಮ್ಮನಿದ್ರೆ ಒಳ್ಳೇದಿತ್ತ್ ॥ ೧ ॥

ಶತ್ರುಹನೆಂದೊಬ್ಬ ಮೊಯಿಂಸ । ಬಿತ್ತರನ ಮಾಡ್ದೇ ಹೊರಗೇ
ಮುತ್ತಿದೆಮ್ಮ ಅವನ ದಂಡ್ । ಇತ್ತ ಕಿವಿ ಕೊಟ್ಟು ಕೇಳಿ ॥ ೨ ॥

ಕುದ್ರೆನಾ ನೀವ್ ಬಿಚ್ಚಿಸಿಬುಟ್ಟ್ । ಎದ್ದ್‌ಬಂದ ಕಪ್ಪ ಕೊಡೊಕು ।
ಬಿದ್ದ್ ಕಾಲಿಗೆ ಹೋಕು ಇಲ್ಲರೆ ।
ಒದ್ದ್ ಬುಡುವೆ ಅಂತ ಹೇಳ್ತ್ ॥ ೩ ॥

ರಾಗ ಕೇದಾರಗೇಳ ಝಂಪೆತಾಳ

ದೂತಿ ಹೀಗೆಂತ ಹೇಳ್ಕನ । ಮದನಾಕ್ಷಿ । ಬಾತ್ ಸಿಟ್ಟಿಗೆ ತಕ್ಷಣ
ಬಾತವಗೆ ಹೋವ್ಂ ಕಾಲ । ದಂಡ್‌ನಲಿ । ನಾತರುವೆ ಅ
ವ್ಂಗೆ ಮರಣ ॥ ೧ ॥

ಬಲ ಮೊಂತ್ರಿ ತಾರಾವಳಿ । ಬಾನೇ ನೀ ।
ನಿಲ್‌ಸ್ ಸೇನೆನ ಸಜ್ಜಿಲಿ ॥ ಕಲ್ಸಿಬುಡೊಕವಗೆ ಪಾಟ ।
ಆಮೇಲೆ ಒಲ್ಲೋಕು ಶ್ರೀರಾಮನ ॥ ೨ ॥

ಬರುವೊ ನಮ್ಮತ್ತ ರಾಮ । ಕರಿವೆ ನಾ ।
ಬರೋಕೂಂತ ಶ್ರೀರಾಮನ । ಉರಿಬಾವ ಇವ್ಕೆಲ್ಲಕ್ಕೊ ।
ಸೋಲ್ಸಿನಾವ್ । ಸರಿ ಪಾತ್ರೆ ತೊಳ್ಸಿಬುಡೊಕು ॥ ೩ ॥

ಯಾರ್ ಬಂದವ್ಂ ಹೈದವ್ಂ । ಶತ್ರುಹನೋ ।
ತೋರ್ಸವರ ನಾ ಬುಡುವೆನೋ ।
ಬಾರಿ ದಂಡ್‌ನ ಕರ್‌ಸಿಯಾ । ಪೋಯಿನಾವ್ ।
ಮಾರಿ ಹಬ್ಬನ ಮಾಡ್ಲೊವೋ ॥ ೪ ॥

ಭಾಮಿನಿ

ಆನೆ ಕುದ್ರೆನೆ ತೇರ್ ದಂಡ್‌ನ
ಬಾಣ ಬಿಲ್ಲ್‌ನ ಹಿಡ್ದ್ ಗೂಡೆಗ
ನಾನ್ ತಾನ್‌ಂತ ಹೊರ್‍ಟ್ರೊ ಶತ್ರುಹನ ಕಡೆಗೆ ರಭಸಂದ ॥
ಏನ್ ಮಾಡುದು ನಾವ್ಗೆ ಗೂಡೆಗ
ಸೇನೆ ಜತೆ ಜಗಳಾಡುವಂಗಾತ್
ಏನಿದಕೆ ಪರಿಹಾರಂತ ಇರ್‍ಕನ ಬಂದ್ ಪುಷ್ಕರನ್ ॥ ೧ ॥

ರಾಗ ಮಾರವಿ ಏಕತಾಳ

ಕೇಳೊಕು ಸಣ್ಣಪ ಯೇಚನೆ ಎಂತಕೆ
ಹೇಳಿನೆ ಅಪ್ಪಣೆನ ॥
ಆಲಚನೇ ಮಾಡದೆ ಕೊಡಿನಂಗೆನೆ
ವೀಳ್ಯನ ಕೊಟ್ಟೀಗ ॥ ೧ ॥

ಆಗಲಿ ನಡಿ ನೀ ಜೋಕೆಲಿ ಈಗಲೆ
ಸಾಗಲಿ ನಿನದಂಡ್ ॥
ಹೋಗುನೆ ದಂಡ್‌ನ ಗೆದ್ದ್‌ನೀ ಬಾವಯ
ಆಗಲೊಳ್ಳೆದ್ ನಿಂಗೆ ॥ ೨ ॥

ಹೊರ್‍ಟ್ತ್ ಪುಷ್ಕರ ದಂಡ್‌ನ ಕೂಡ್‌ತ
ಸರ್‍ತ್ತ ಜಗಳ ಕಳಕೆ ॥
ಅರ್ತನ ಮಾಡ್ಸುವೆ ಅಂತವ ಹೋಕನ
ಬಾತಾಗಲೆ ತಾರಾ ॥ ೩ ॥

ಯಾರ್ನೇ ದಗಣೆಗ ಕುದ್ರೆನೆ ಕಟ್ಟಿಕೆ
ಯಾರ್ನೇ ಹೇಳ್ದೋ ನಿಂಗೇ ॥
ಸಾರಿನೆ ಹೇಳಿನೆ ಬುಡದೆನೆ ಇರ್ಕನ
ಮಾರಿಗೆ ಹಬ್ಬಾದು ॥ ೪ ॥

ತಾರಾವಳಿ ನಾ ಬಂದದ್ ನೋಡಿಯ
ಈ ರಾಜ್ಯದ ಮೊಂತ್ರೀ ॥
ಯಾರ್ಯ ಬಂದವ ಬೊಗಳ್ ನೀ ಸಾಕ್ಯ
ಊರೆಲ್ಲಿಯ ನಿಂದ್ ॥ ೫ ॥

ರಾಗ ಶಂಕರಾಭರಣ ಮಟ್ಟಿ ತಾಳ

ಗೂಡೆ ಕೇಳಯ್ಯೋದ್ಯ ನಗರ । ನಾಡ ಪ್ರಭುಗ ರಾಮ ದೇವ್ರು ।
ನೋಡ್ನೆ ನಂಗೆ ದೊಡಪನಾವೊ । ಪುಷ್ಕರಾಂತ ॥ ೧ ॥

ಪುಷ್ಕನಿನ್ನ ಉಸ್ಕ್‌ಡಮ್ಮು ತಕ್ಷಣನೆ ತೆಗಿವೆ ಬಲಯ ಇ
ದಿಕ್ಕೆ ಸಾಕ್ಷಿ ನನ್ನ ಬಾಣ ರಕ್ಸಿಸಿಕೊಯ ನೀ ॥ ೨ ॥

ಬಾರಿ ಗರ್ವ ಉಟ್ಟು ನಿಂಗೆ ಯಾರ್ ನಿನ್ನ ಕಾವೊ ನೋಡ್ನೆ
ಸಾರಿ ಹೇಳ್ದೆ ಅಂತ ಬಾಣ । ಮೂರ ಬುಟ್ಟ್‌ತ್ ॥ ೩ ॥

ಬಂದ ಬಾಣನರ್ದ ದಾರಿ ಗಂದ್ ತುಂಡು ಮಾಡಿ
ಬಂದ್ ಮಾಡಿ ಬುಟ್ಟೋತ್ ಬಾಣ ತೆಗಿಯದಂಗೆನೆ ॥ ೪ ॥

ಮತ್ತೆ ಬಾಣ ಬುಡಿಕೆ ಹೋಕನ ಸತ್ತ ಹಾಂಗೆ ಬಾಣ ಬಿಲ್ಲ್‌ನ
ಮೆತ್ತಿಕ್ಯಂಡ್ ಇರುದ ನೋಡಿ ಪುಷ್ಕಳ ॥ ೫ ॥

ಮಾಟ ಮಾಡಿ ಬುಟ್ಟೋತ್ ಗೂಡೆ ನಾಟು ದಿಲ್ಲೆ ಬಾಣ ಅಂತ
ಸಾಟಿ ಇಲ್ಲದಂತ ಕತ್ತಿ ಎಳ್ದ್ ತೆಗಿತವ ॥ ೬ ॥

ಕತ್ತಿ ಎತ್ತಿಕಾಗದಂಗೆ ಮತ್ತೆ ಸ್ತಂಭನಾಸ್ತ್ರ ಬುಟ್ಟ್ ।
ಕುತ್ತ ನಿಂತ್ ನೋಡ್ವ ಹಾಂಗೆ ಮಾಡ್ದ್ ಗೂಡೆದ್ ॥ ೭ ॥

ಭಾಮಿನಿ

ಬಾರಿ ನಾಚಿಕೆ ಮಾಡಿ ಪುಷ್ಕರ
ಸೂರ್ಯ ಕುಲದವು ಗೂಡೆ ಎದ್‌ರಲಿ
ಮೋರೆ ತೋರ್ಸದ ಹಾಂಗ ಆತಿದ್ ಎಂತ ಮಾಡ್ದೂಂತ ॥
ಮೋರೆ ಕಂತ್‌ನ ಮಾಡಿ ಇರ್ಕನ
ತಾರ ಕೋಂಗೀ ಕಟ್ಸಿ ಹೇಳ್ತದ್
ಬಾರಿ ಮೆರ್ದವ ಈಗ ಏನಾತ್ ಮೀಸೆ ಬೋಳ್ಸಿಬುಡು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಇಸ್ಟ್ ಹೇಳ್ಕನ ದಮನ ಕೇಳ್‌ತ
ಸಿಟ್ಟ್ ಮಾಡ್‌ತ ಬಂದ್ ಪುಷ್ಕರ
ನೊಟ್ಟಿಗೇಳ್‌ತ್ ನಂಗೆ ಅಪ್ಪಣೆ । ಕೊಟ್ಟೇ ಬುಡೊಕು ॥ ೧ ॥

ಕೇಳಿ ಪುಷ್ಕರ ಹೇಳ್ತ್ ಜಾಗ್ರ್ತೆ
ಬಾಳ ಜೋರುನ ಗೂಡೆಗಿವು
ಹೇಳುದೆಂತರ ನಿಂಗೆ ಯೋಚನೆ ಮಾಡಿ ಹೊರ್ಡ್ ॥ ೨ ॥

ಮತ್ತೆ ಭಾಷೆನ ಹೇಳಿ ದಮನಾ
ನಿತ್ತ್ ತಾಗಲೆ ತಾರಿರೆನೆದ್ರ್‌ಗೆ
ಕತ್ರಿಸೀನೇ ನಿನ್ನ ಈಗಲೆ ಇತ್ತ ಬಾನೆ ॥ ೩ ॥

ವಾರ್ದಿಕ

ಬಾರಿಕಾಳಗ ನಡಿತ್‌ಗಡ ಇವ್ಕೆ ತಾರಾವಳಿ
ಜೋರುಬಾಣನ ಬುಡ್‌ಕನ ದಮನ ತಡ್‌ದದ್ರನರ್ದ
ದಾರಿಲೇ ತುಂಡ್‌ಮಾಡಿ ಬುಟ್ಟ್ ಮತ್ತೆ ದಮನ ಕೈಯ್ನ ಬಾಣನ
ಕಡ್ತ್‌ಬುಡ್ತಾಗಲೇ ॥
ನೀರಿಲ್ದ ಜಾಗೆಲಿ ನಿನ್ನ ತಲೆಕಡಿವೆ ಬಲ
ಬಾರಿ ಉರ್ದಿಯ ಬುಡಕಿಲೆ ನಿನ್ನಾಂತ ಕಡ್ಪತ್ತಿ ತೆಗ್ದ್
ಹಾರಿ ಬಾಕನ ಬಾಣ ಬುಟ್ಟ್ ಕತ್ರಿಸಿತ್ ಗದೆ ತೆಗ್ದವ ಬಾಕನತ್ತ॥೧॥

ರಾಗ ಮಾರವಿ ಏಕತಾಳ

ದಮನನ ಕಯ್ ಗದೆನೆಳ್ಕಂಡ್ ತಿರ್‍ಗಿಸಿ ।
ಗುಮನ ಕೊಡದೆ ಅವ್ಂಗೆ ॥
ಯಮನಲ್ಲಿಗೆ ಕಳ್ಸಿನೆ ನಿನ್ನೆಂತಲಿ ।
ಸಮತಲೆಗೆ ಹೊಡಿತಾಗ ॥ ೧ ॥

ಕಂಡಾ ಶತ್ರುಹ ಹಲ್ಲ್‌ನ ಕಡಿತಲಿ
ದಂಡ್‌ಗೆ ಎದ್‌ರಾಗಿ ॥
ಮುಂಡೆಗ ಕಟ್ಟಿದ ಕುದ್ರೆನ ಬುಡಿನೀವ್
ಕಂಡನ ತೆಗಿಕುಟ್ಟು ॥ ೨ ॥

ಯಾರ್‌ಯ ನೀ ಎದ್‌ರಿಗೆ ಬಂದವ ಗಂಡ್
ಬಾರಿಬಡಾಯಿನವ ॥
ತೋರ್‌ಸಿಯ ಪವುರುಸ ನೋಡೊಮೊ ಅಂತಲಿ ।
ಹಾರಿನೆ ಬಾತ್ ಮದನ ॥ ೩ ॥

ಶ್ರೀರಾಮನ ತಮ್ಮನೆ ನಾ ಶತ್ರುಹ
ಬಾರಿಬೊಗಳ್ದೇಕೆ ॥
ತೋರ್‌ಸಿನೆ ನಾವೇನೆಂತೇಳ್ದದರ ವೈ
ಯಾರಿಗ ನೀವ್ಗೆಲ್ಲ ॥ ೪ ॥

ಶತ್ರುಹ ಮಿತ್ರಹ ಯಾರೇ ಆಗಲಿ
ಕತ್ರಿಸದಿರ್ಕಿಲೆ ನಾ ॥
ಮುತ್ತಿದೆ ಪಟ್ಟಣ ಬುಟ್ಟರೆ ನಿನ್ನನಾ
ಹೊತ್ತರ್ದ್ ಇದ್ ಮೊಲೆನಾ ॥ ೫ ॥

ರಾಗ ಭೈರವಿ ಏಕತಾಳ

ರಾಮನ ನಂಬುತ ನಾವು । ಈ ।
ಭೂಮಿನ ಸುತ್ತುತ ಹೋವ್ಹೊ ॥
ಹೋಮದ ಕುದ್ರೆನ ಬುಡೊಕು । ನಾ ।
ಸಾರಿನೆ ಹೇಳ್ಯೊಲೆ ಕೇಳ್ಕ ॥ ೧ ॥

ಅಂಗರೆ ನೋಡೊಮ ಅಂತ । ಆ ।
ಸಿಂಗರಿ ಬಾಣನ ಬುಡುತ ॥
ಬಂಗನ ಮಾಡಿಕೆ ನೋಡ್ತ್ । ಈ ।
ಮಂಗಳ ಮಹಿಮ ಅದ ತಡಿತ್ ॥ ೨ ॥

ರಾಮನ ಮೊನ್ನಲಿ ನೆನ್ಸಿ । ಹೊಸ ।
ಬಾಣನ ಬಿಲ್ಲಿಗೆ ಜೋಡ್ಸಿ
ಸಾಮರ್ತ್ಯಕೆಲೀ ಬುಡ್ತ್ । ಆ ।
ಮೈಮೆಗೆ ಗೂಡೆದ್ ಬೀತ್ ॥ ೩ ॥

ಭಾಮಿನಿ

ಗೂಡೆ ಬೀಳ್ಕನ ಹೆದ್ರಿ ತಾರೆದ್
ಓಡಿ ಬಂದನೇ ರಾಣಿ ಸಮಯನ
ನೋಡಿ ನಡ್‌ಗತ ಇತ್ತ್ ಬಾಯಿನ ಬುಡದೆ ನಡ್ಗಿಕ್ಯೆಂಡ್ ॥
ನೋಡಿ ಕುಮುದಿನಿ ಬಾನೆ ಹೆದ್ರಿಕೆ
ಬೇಡ ನಡ್ದರ ಹೇಳ್ ಕೇಳ್ನೆನ
ಕೇಡ್ ಬಂದರೆ ಬರ್ಲಿ ನೋಡೊಮೊ ಅಂತ ಹೇಳ್ತಾಗ ॥ ೧ ॥

ರಾಗ ಮಧುಮಾಧವಿ ತ್ರಿವುಡೆ ತಾಳ

ಅವ್ವ ಕೇಳೊಕಯೋಧ್ಯ ನಗರದ ।
ಸರ್ವ ರಾಜರ ರಾಜ ರಾಮನ ।
ಅಶ್ವಮೇಧದ ಕುದ್ರೆ ಬಾಕನ ।
ಗರ್ವ ಮಾಡಿದೊ ನಮ್ಮವು ॥ ೧ ॥

ಕಟ್ಟಿ ಬುಟ್ಟೊಳೊ ರಾಮ ಕುದ್ರೆನ
ಜಟ್ಟಿ ಕಾಳಗ ನಡೀತ್ ಮುಂದೆನೆ
ಪೆಟ್ಟ್ ಬಿದ್ದುಟು ನಮ್ಮ ದಂಡ್‌ಗೆ ।
ಕೆಟ್ಟ್ ಹೋಗುಟು ಈಚೆಲಿ ॥ ೨ ॥

ಗೂಡೆ ಮದನಾಕ್ಷಿ ಕಲನಲಿ ನಾ
ನೋಡಿದಾಕನ ಬಿದ್ದೆ ಹೋತದ್
ಮೋಡಿ ಮಾಡಿತ್ ಶತ್ರುಹನ ಬಲ ।
ನೋಡಿ ಬಂದರೆ ಉತ್ತಿಮ ॥ ೩ ॥

ಭಾಮಿನಿ

ಕೇಳಿ ಕುಲಮುದಿನಿ ಹೆದ್ರಿತಾಗಲೆ
ಕಾಲಕಾಲಕೆ ಮಾಡ್ದೆ ನೋಂಬ್‌ನ
ನಾಳೆ ರಾಮನ ಕಾಂಬ ಪುಣ್ಯಕೆ ಈಗ ಹೀಂಗ್ಯೇತ್ ॥
ಸೋಲು ರಾಮಗೆ ಉಟ್ಟೊ ಸುಮ್ಮನೆ
ಮೇಳ ಸಾಕ್‌ನೆ ಪೋಯಿ ಶತ್ರುಹ
ಕಾಲ್ನ ಹಿಡ್ದ್‌ನೆ ಬುಡೊಕು ಹೊರ್ಡ್‌ನೆಯ ಅಂತ ಬಂದ್‌ಬುಡ್ತ್॥೧॥

ರಾಗ ಕೇದಾರ ಗೇಳ ಝಂಪೆತಾಳ

ಹೊರಟ್ ಬಾಕನ ಮುಂದಕೆ । ಜಗಳಕಳ ।
ಕರೆಕರೆನ ಸರಿನೋಡಿಕೆ ।
ಮರಗಟ್ಟಿ ಹೋದ ಜನನ । ಕಾಂಬಕನ ।
ಕರಗಿ ಹೋತ್ ಕುಮುದಿನಿ ಮನ ॥ ೧ ॥

ಬಿದ್ದ ಮದನಾಕ್ಷಿ ಕೂಡಿ । ಎಲ್ಲವ್ಕೆ ।
ಮೊದ್ದು ಕುಡ್ಸುತ ಎಬ್ಬಿಸಿ ।
ಸದ್ದ್ ಮಾಡದೆ ಕುಮುದಿನಿ । ದಂಡ್‌ನವು ।
ಬಿದ್ದೊ ಶತ್ರುಹಗೆ ನಮಿಸಿ ॥ ೨ ॥

ರಾಗ ಮಾರವಿ ಏಕತಾಳ

ನೋಡಿನೆ ಸಿಟ್ಟ್‌ಲಿ ಬಂದತ್ ಶತ್ರುಹ
ಮಾಡಿನೆ ನೀವ್ಗೆಗತಿ ॥
ನೋಡಿಕೆ ಎಮ್ಮನ ಹಾಂಗೊಳರಿಯ ನೀವ್
ಓಡೊಕು ಇಲ್ಲಿಂದ ॥ ೧ ॥

ಯಾರೀ ಉಗ್ಗವ ಕಾಂಬಕೆ ರಿಸಿನಂ
ಗೀರೀತಿಯೊಳೊಟ್ಟು ॥
ಬೇರೇನ್ಕೆಲ್ಸನೆ ಇಲ್ಲೆಯೊ ರಕ್ಕಸ
ಮಾರಿಗ ನೀವ್ಗೆಲ್ಲ ॥ ೨ ॥

ಸಿಟ್ಟಿಲಿ ಪುಷ್ಕರ ದಮನಗರೆಲ್ಲರ್
ಮೆಟ್ಟಿನೆ ನೀವ್ಗೆಂದ್ ॥
ಪೆಟ್ಟಿಗೆ ಬಾಕನ ಕೈಮುಗಿತಾಗಲೆ
ಬುಟ್ಟರೆ ಕಷ್ಟಂತ ॥ ೩ ॥

ರಾಗ ಕಾಂಬೋಜಿ ತ್ರಿವುಡೆ ತಾಳ

ಕುಮುದಿನಿ ಕೈಮುಗಿದ್ । ಹೇಳ್ತಾಗಲೆ ।
ಸಮಾತ್ ನೀವು ಮಾಡ್ದ್ ॥ ಪ ॥
ಗುಮನ ಕೊಡ್ದ್ನೆ ನಿಮ್ಮ ಕುದ್ರೆನ
ಜಮೆರಿ ಗೂಡೆಗ ಕಟ್ಟಿದವು ಇವು
ಅಮಮ ಪರಮೋಸಾತ್ ಮಾಡ್ದದ್
ಕ್ಷಮೆನ ಕೊಡುನೀ ಮಾಪು ಮಾಡ್ತ ॥ ೧ ॥

ಹಿಂದಿನ ಜಲ್ಮಲಿ ನಾವ್ಗ । ಮಾಡ್ಯೊಳು ಕರ್ಮ ।
ಇಂದಾದೊ ರಕ್ಕಸಿಗ । ನೊಂದ ಜೆನನಾವ್ ಪಾಪ ಬಿದ್ದುಟು ।
ಬಂದನನ ಬುಡ್ಸೋಕು ಅಂತಲೆ
ಬಂದ್ ನಿಂತೊಳೊ ಇಲ್ಲಿ ತಪಸಿಗೆ
ಮುಂದೆ ರಾಮನ ಪಾದ ಗತಿಯದ್ ॥ ೨ ॥

ಮಯ ಸಿಲ್ಪಿ ಕಟ್ಟಿದದ್ । ಈ ಪಟ್ನನ ।
ನಯ ಆದ ಅರಮನೆನ । ಬಯಬುಟ್ಟ್ ಕೊಟ್ನೆಲ್ಲನ ।
ಜಯನೆ ನಿಮ್ಮದ್ ಕುದ್ರೆ ಬುಟ್ಟೊಳೆ
ಸೊಯನೆ ಇಲ್ಲದ ನಮ್ಮ ಕಾಯೊಕು
ಕಯನೆ ಬುಟ್ಟುನೆ ಅತ್ತ ಬಂದನೆ ॥ ೩ ॥

ಭಾಮಿನಿ

ಕಾಲ್ಗೆ ಕೈಮುಗ್ದ್ ಬಿದ್ದಕನ ಶತ್ರು
ಘ್ನನ್ಗೆ ಕರಗಿತ್ ಮೊನ್ಸ್ ಕುಸಿಯಲಿ
ನನ್ಗೆ ಸಿಟ್ಟೆಲ್ಲೆ ಬಲ ಬುಟ್ಟೊಳೊ ತೊಪ್ಪು ಮಾಡ್ದರ ನೀ ॥
ಬನ್ಗ ಬಂದದಕೆ ಸಾರ್ಥಕನ ಮಾಡಿಕೆ
ಸನ್ಗತನೆ ಬನ್ನೆಯ ಅಯೋಧ್ಯೆಗೆ
ನನ್ಗೆ ಅನುಮತಿಸೋಕು ರಾಮನ ಕಾಂಬ ಆಸೆನ ದಯಮಾಡ್
॥ ೧ ॥

ರಾಗ ಕೇದಾರ ಗೌಳ ಅಷ್ಟತಾಳ

ಕುಸಿಯಲಿ ಕುಞ್ಞಿ ಉಂಗ್ರನ ತೆಗ್ದಾಗ
ಇಸಿಕಬಲ ಹಿಡ್ದಿದರ ॥
ಒಸಿಹೊತ್ತು ಮೊನ್ಸಲಿ ಧ್ಯಾನನ ಮಾಡಿರೆ
ಕುಸಲಲ್ಲಲ್ಲಿದ್ದರಿಯ ॥ ೧ ॥

ಕುಮುದಿನಿಗುಂಗ್ರನ ಕೊಟ್ಟಾಗ ಅದ್‌ಬಂದ್
ನಮಸ್ಕಾರ ಹೇಳಿ ಮುಂದೆ ॥
ಸಮ ಯುದ್ಧ ನಡಿಕ್ಯುಟ್ಟು ಶಿವನ ಭಕ್ತರ ಕೈಯ್ಲಿ
ಅಮರಿಕೆ ಅವರ ಸಕ್ತಿ ॥ ೨ ॥

ಕೊಟ್ಟೆನೆ ನಿಂಗೆನಾ ದಿವ್ಯ ಶಕ್ತ್ಯಸ್ತ್ರನ
ಬುಟ್ಟರೆ ಅವಂಗಿದರ ॥
ಕೆಟ್ಟ್ ಶಿವನ ಭಕ್ತಿ ಹರಿಭಕ್ತಿ ಬಾದುಯ
ಇಷ್ಟರ ಮೇಲೆ ಮತ್ತೇನ್ ॥ ೩ ॥

ಭಾಮಿನಿ

ಶಕ್ತಿ ಬಾಣನ ಪಡ್ದ್ ಶತ್ರುಹ
ಯಿಕ್ತಿಯಿದ್ ಸರಿ ಅಂತ ಅಲ್ಲಿನ
ರಕ್ಕಸರ ಗೂಡೆಗಿದ್ದ ಅರಮನೆ ಎಲ್ಲ ಹಿಡ್ಕ್ಯೆಂಡ್ ॥
ಮಕ್ಕಳೆಲ್ಲರಯೋಧ್ಯೆಯತ್ತ ಕಳ್ಸಿನೆ
ಸಿಕ್ಕ ರಾಜರ ಗರ್ವ ಮುರಿಯಕೆ
ಸೊಕ್ಕಿ ದಂಡ್ನ ಕೂಡಿ ಕುದ್ರೆನ ಹಿಂದೆ ಹೊರ್ಟಾಗ ॥ ೧ ॥

ರಾಗ ಕಾಂಬೋಜ ಝಂಪೆತಾಳ

ಸೂರ್ಯ ಹೊಳ್ಪಿದ ಹಾಂಗ್ ಜ್ಯೋತಿರ್ಮೇಧ ರಾಜ್ಯಕೆ
ವೀರಮಣಿ ರಾಜನಾರ್ವಾಡ್ ಇತ್ತಂದ್ ॥
ವೀರ ರುಕ್ಮಾಂಗದನ್ ಶುಭ್ರಾಂಗ ಎಂಬ ಕು
ಮಾರರಂದ್ ಗೆದ್ದಿಗೆಲಿ ಕುದ್ದ್ಹೀಂಗೇಳ್ದೊ ॥ ೧ ॥

ತಮ್ಮ ಶುಭ್ರಾಂಗ ನೀ ಏಳ್ನಾವ್ ಪೋಯಿಯ
ನಮ್ಮ ತೋಟಕೆ ಈಗ ತಿರ್ಗಾಡಿ ಬರ್ರೊಮೋ ॥
ಮನ್ನೆಂದ ಮೊನ್ಸಿಂಗೆ ಗೇನ ಬಂದುಟು ಬಲಯ
ಇನ್ನ್ ಕಡ್ಸುದು ಬೇಡನೆ ಪೋಯಿ ನಾವೀಗ ॥ ೨ ॥

ಹೀಂಗ್ ಹೇಳ್ತವು ಹೊರ್ಟ್ಟ್ ಸೀದತೋಟಕೆ ಬಂದೊ
ಓಂಗುತುಟ್ಟು ಬಿಸಿಲಲ್ಲಿ ತಾಂಗಿದೆ ಚಾಳೆ ॥
ಹೇಂಗೆ ಕಾಂಬೋದು ಬಲಯ ನಮ್ಮ ತೋಟದ ಪೊರ್ಲು
ಬಂಗಾರದಂಗೆ ಮೆಂಚಿದೆ ಕಂಡಾ ತಮ್ಮ ॥ ೩ ॥

ರಾಗ ಪುನ್ನಾಗ ಏಕತಾಳ

ನೋಡ್‌ನೆ ತಮ್ಮಣನೀ ತೋಟದ ಪೋರ್ಲು
ಜೋಡಿ ಹಕ್ಕಿಗ ಕುದ್ದು ಹಾಕುವೆ ಕೂಕ್ಲ್ ॥ ಪ ॥
ಅಡಿಕೆ ಕೀಲೆನ ನೋಡು ಮಡಿಕೆ ಮಡಿಕೆಲಿ
ಕಿಡಿಕ್ೕಲಿ ಕಾಂಬೋದು ಇದೆ ನಮ್ಮ ಮನೆಲಿ ॥ ಅ.ಪ ॥

ಮಾಯಿನ ಮರನೋಡು ಬೇಯಿನ ಮರನ
ಕಾಯಿನ ಬುಟ್ಟಂತ ಸೀಗೆ ಚಪ್ಪರನ ॥
ಪೋಯಿಯ ಮುಂದಕೆ ನೋಡಿಕೆ ಲಾಯ್ಕಾದೆ
ಕಾಯೇರ್ ಮರದಡಿ ನಿಲ್ಲದೇ ಬಾಯ ॥ ೧ ॥

ಮಲ್ಲಿಗೆ ಬೊಳ್ಳಿ ಮರಂದ ಮರಕೆನೆ
ನಿಲ್ಲದೇ ಹಬ್ಬಿಟು ಸಂಸಾರ ತರನೆ ॥
ಅಲ್ಲಲ್ಲಿ ಹಾರುವ ಗೀಣನ ನೋಡ್
ಒಳ್ಳೇ ಪ್ರಾಯಕೆ ಬಂದ ಹೈದನ ತರನೆ ॥ ೨ ॥

ಗಾಳಿಬಾಕನ ನೋಡು ಬೆದ್ರ್‌ಪುಂಡೇಲ್‌ನ್ದ
ಮೇಲ್ಮೇಲೆ ಕೇಳ್ದೆಯ ಕೊಳಲಂತ ನಾದ ॥
ನಾಲಿಕೆ ಬಂದಾಂಗೆ ತೋಟಕೆ ನಮ್ಮ
ಸಾಲದ್ ಯೆರ್ಡ್‌ಕಣ್ಣ್ ನೋಡಿಕೆ ತಮ್ಮ ॥ ೩ ॥

ಬೇಂಗ ಮರನ ನೋಡ್ ಹೊನ್ನೆ ಮರನ ನೋಡ್
ಬಂಗಾರ್‌ನಂಗಿರುವ ಕಣಿಲೆನ ನೋಡ್ ॥
ಕೋಂಗಿ ಕಟ್‌ಸುತ ನಾವ್ಗೆ ಹಾರ್ವ ಕುರೆನ ನೋಡ್
ಬಂಗ ಬಂದವರ ತೋಟನೆ ಹಾಳ್ ॥ ೪ ॥

ಇಲ್ಲಿ ನೋಡ್‌ನೆ ತಮ್ಮ ಬಾನದ ಹೋಳ್
ಮೆಲ್ಲನೆ ಬಿದ್ದಂಗಿದ್ ಬಾಮಿನ ನೀರ್
ಅಲ್ಲಲ್ಲಿ ಪಾಂಬುದು ಪಾಚೊಲ್ತಿ ಮೀನ್
ಎಲ್ಲಿನೂ ಕಾಂಬೋದು ಪೊರ್ಲುನೆ ಕಣ್ಣ್ ॥ ೫ ॥

ಭಾಮಿನಿ

ಹೀಂಗೆ ಹೇಳ್ತವು ಮುಂದೆ ಹೋಕನ
ಹೊಂಗೆ ಮರನಲಿ ಎಲೆನ ಪೂಜುತ
ಪಿಂಗರನ ಪರ್ಮಳನ ಮೆತ್ತಿಕ್‌ಂಡ್ ಮಲ್ಲಿಗೆಲೀ ॥
ಸಿಂಗರನ ಮಾಡಿಕ್‌ಂಡ್ ಮಾಲಿ ತ
ನ್ನಂಗೆ ಬೀಸಿದ ತೊಂಪು ಗಾಳಿ ರು
ಕ್ಮಾಂಗದನ ಕಣ್ಣಿಂಗೆ ಕಾಣ್ಸಿತ್ ಕುದ್ರೆ ಬಾದುದರ ॥ ೧ ॥

ನಮ್ಮ ತೋಟಕೆ ಬಾವ ಕುದ್ರೆನ
ಸುಮ್ಮನೇಕೆಯ ಬುಟ್ಟು ನೋಡುದು
ತಮ್ಮ ನೋಡದ್ರಕತೆ ಎಂತಾಂತ ಹೇಳ್ಕನ ಶುಭಾಂಗ ॥
ನಿರ್ಮಲಲಿ ಬಾವ ಕುದುರೆ ಹಣೆಲಿ
ಬರ್ದ ಓಲೆನ ತೆಗ್ದ್ ತಾಕನ
ಸರ್ರಿನೇ ನಾ ಕೇಳ್ನೆ ಓದದರಾಂತ ಹೇಳ್ಕಾನ ॥ ೨ ॥

ರಾಗ ಕೇದಾರ ಗೌಳ ಅಷ್ಟತಾಳ

ಮಂಗಲ ಆದಂತ ಸಾಕೇತ ನಗರನ
ಮಂಗಲ ಮಹಿಮ ರಾಮ ॥
ಸಂಗಾತ ಬಂದವ° ಶತ್ರುಹ ನನ ತಮ್ಮ
ಸಂಗತಿ ಕೇಳೊಕ್ಕೆಲ್ಲ ॥ ೧ ॥

ಪೂಜೆನ ಮಾಡ್ದ್‌ನಾವ್ ಬುಟ್ಟೊಳೊ ಕುದ್ರೆನ
ಪೂಜೆ ನಡ್ದದೆ ಮುಂದಿನ್ಕ್ ॥
ರಾಜರಾದವ್ಕೆ ಸಾಮರ್ತಿಕೆ ಇದ್ದರೆ
ಆಜಮಾಡಿನೆ ಕಟ್ಟೊಕು ॥ ೨ ॥

ಸಾಮರ್ತಿಕೆನ ತೋರ್ಸಿಕ್ಯೇಗದಿದ್ದರೆ ನೀವ್ಗೆ
ರಾಮನ ಬಲನ ಸೇರಿ ॥
ಈ ಮಹಾ ಯಾಗನ ಪೊರ್ಲುಲಿ ನಡೆಸೋಕು
ಭೂಮಿಗೆ ಇದ್ ಆಜಿನೆ ॥ ೩ ॥

ರಾಗ ಮಾರವಿ ಏಕತಾಳ

ಕೇಳ್ಕನ ಸಿಟ್ಟಿಲಿ ರುಕ್ಮಾಂಗದ ತಾ । ಹೇಳ್‌ತ್ ತಮ್ಮಂಗೆ ॥
ನೋಡ್ಕೊಣೊಕಿವರ ಬುಡಿಕಿಲೆ ಬಲಯ ನಾವ್ ।
ಬಾ ಕೇಳ್ ಬಲ ನಮ್ಮ ॥ ೧ ॥

ಶಿವನೊಬ್ಬನೆ ತಾ ಲೋಕಕೆ ದೊರೆ ಗಡ । ಅವ°ನಮ್ಮೊಲ್ಯುಟ್ಟು ॥
ಇವ° ಎಂತರ ಹೇಳ್ದುಯ ಯಾರವ° ರಾ ।
ಮವನ ಬುಡಿಕೆ ಬೊತ್ತ್ ॥ ೨ ॥

ಇದ್ರಲಿ ಬರ್‍ದೊಳೊ ರಾಮನೆ ಲೋಕಕೆ ।
ಮೊದ್ಲಿನ ರಾಜಾಂತ ॥
ಕುದ್ರೆನ ಕಟ್ಟೊಕು ಇಲ್ಲರೆ ಕಪ್ಪನ ಕೊ
ಡೋ ಕಡ ನಾವೆಲ್ಲ ॥ ೩ ॥

ಬಂದರೆ ಬರ್‍ಲಿಯ ರಾಮನೋ ತಮ್ಮನೋ
ನಿಂದರೆ ಕಾಳಗಕೆ ॥
ಕೊಂದವರೆಲ್ಲರ ಕಳ್ಸೊವೊ ಬಲನೆ
ತಿಂದ್ ಬುಡಲಿ ಯಮನೆ ॥ ೪ ॥

ಹೀಂಗೇಂತೇಳ್ತನೆ ಕಟ್ಟಿದೊ ಕುದ್ರೆನ
ಹೊಂಗೆ ಮರನ ಬುಡಕೆ ॥
ಸಂಗತಿ ಹೇಳ್ಕೆಂತಾಗಲೆ ಬಂದವು
ಅಂಗಳಕೆತ್ತಿಕನ ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಶಿವನೆ ಅರಮನೆ ಕಾವ ಅಳಿಯನ್
ಇವನೆ ಮಾವನ್ ವೀರಮಣಿ ರಾ
ಜವನ ಕೀರ್ತಿನ ಕೇಳ್ರೆ ಹೇಳಿಕೆ ॥ ಶಿವಗೆ ಬೊತ್ತ್ ॥ ೧ ॥

ಗದ್ದಿಗೆಲಿ ಕುದ್ದಂತ ಸಮಯಕೆ
ಮುದ್ದುಮಕ್ಕಳ್ ಬಂದ್ ಕಾಲಿಗೆ
ಬಿದ್ದ್‌ದರ ಕಾಂಬಕನ ಕುಸಿಯಲಿ ॥ ಎದ್ದ್‌ಬಂದ್ ॥ ೨ ॥

ಸರ್ಪ ಮೊರಿನಂಗಿರುವ ಹಯ್ದರ
ಅಪ್ಪಿ ಕುಸಿಯಲಿ ಕೇಳ್ತ್ ಮಕ್ಕಳೆ
ಸುರ್ಪ ನೋಡಿರೆ ಸಿಟ್ಟ್ ಕಂಡದೆ । ಏನ್ ಹೇಳಿ ॥ ೩ ॥

ಆಟ ಪಾಟನ ಮಾಡಿ ದಿನದಿನ
ಕೂಟ ಕಳನಲಿ ಕಾಲ ಕಳೆಯೊಕು
ಸಾಟಿ ಯಾರ್ ನೀವ್ಗಿಂದ್ ಮಕ್ಕಳೆ । ಎಂತ ಹೇಳಿ ॥ ೪ ॥

ರಾಗ ಕಾಂಭೋಜ ಅಷ್ಟತಾಳ

ತಮ್ಮ ನೊಟ್ಟಿಗೆ ಇಂದ್ ತೋಟಕೆ ಹೋಕನ । ಅಪ್ಪಕೇಳಿ ।
ನಮ್ಮ ಕಡೆಗೆ ಬಾವ್° ಕುದ್ರೆನ ನೋಡ್ದೆ ನಾ । ಅಪ್ಪಕೇಳಿ ॥ ೧ ॥

ಸಾಕೇತ ಪುರ ಗಡ ರಾಮನೆಂತವ ಗಡ । ಅಪ್ಪಕೇಳಿ ।
ಲೋಕಕೆ ಅವ್° ದೊಡ್ಡ ರಾಜನಾಗುಟು ಗಡ । ಅಪ್ಪಕೇಳಿ ॥ ೨ ॥

ಪೂಜೆ ಮಾಡಿಟು ಗಡ ಅಶ್ವಮೇಧಕೆ ಗಡ । ಅಪ್ಪಕೇಳಿ ।
ಆಜ ಮಾಡ್ದೇ ಗಡ ಕುದ್ರೆಕಟ್ಟೋ ಕಡ । ಅಪ್ಪಕೇಳಿ ॥ ೩ ॥

ಹೀಂಗೆಂತ ಬರ್‌ದಿದ್ದ ಓಲೆನ ಓದಿ ನಾ । ಅಪ್ಪಕೇಳಿ ।
ಹೊಂಗೆನ ಮರಕದರ ಕಟ್ಟಿನೆ ಬುಟ್ಟೊಳೆ । ಅಪ್ಪಕೇಳಿ ॥ ೪ ॥

ಸಂಗರ ಪಂಗರೆ ಅಂತವ್° ಬಂದರೆ । ಅಪ್ಪಕೇಳಿ
ನುಂಗಿ ನೀರೆನಕುಡ್ದ್ ಬುಡೊಕವರೆಲ್ಲರ । ಅಪ್ಪಕೇಳಿ ॥ ೫ ॥

ರಾಗ ಕೇದಾರಗೌಳ ಝಂಪೆತಾಳ

ಒಳ್ಳೆ ಕೆಲ್ಸನ ಮಾಡ್ಯೊಳ । ರುಕ್ಮಾಂಗ ।
ಎಲ್ಲ ಇದ್ ಪುಣ್ಯನ ಫಲ ॥
ಕಲ್ಸೊಕಿಯ ಕುದ್ರೆ ಕಟ್ಟಿ । ಮಕ್ಕನೀವ್ ।
ನಿಲ್ಸೊಕಿಯ ಅವರ ಸೊಕ್ಕು ॥ ೧ ॥

ಯಾರೊಳಯ ನಿಮ್ಮ ಮುಂದೆ । ಕಾಳಗಲಿ ।
ಪೌರುಸನ ತೋರ್ಸುವಿಂದೆ ॥
ವೀರಮಣಿ ಎಂತವಂತ । ಅವಂಗೆ ನಾ ।
ತೋರ್ಸೋಕು ನಿಜ ಏನ್ಂತ ॥ ೨ ॥

ಶಿವನ ಮನೆಯಳಿಯ ನಾವ್ಗೆ । ಪೂಜೆನ ಮಾ ।
ಡುವೆ ನಾವು ದಿನವು ಅವಂಗೆ ॥
ಅವ್ಂ ಯಾರ್ ಬಾದು ನೋಡ್ನೆ । ಸುಮ್ಮನಿರಿ ।
ಸರಿಯಾಗಿ ಪಾಟ ಕಲಿಸಿನೆ ॥ ೩ ॥

ಭಾಮಿನಿ

ಕುದ್ರೆ ಕಾಂಬಕೆ ಇಲ್ಲೆ ಅಂತನೆ
ಬೆದ್ರ್ ಪುಂಡಲೆಗೆಲ್ಲ ಹೋಗಿನೆ
ಅದ್ರ ಇದ್ರನ ನೋಡಿ ಶತ್ರುಹ ಎಲ್ಲ ಹುಡ್ಕುತಲಿ ॥
ಕುದ್ರ್ಕನ ಚಾರಕರ್ ಕಾಲಿಗೆ
ಬಿದ್ದ್ ನಡ್ಗತ ಕೆಯ್ನ ಮುಗ್ದವು ।
ಸುದ್ದಿ ಕೇಳೊಕು ಅಂತ ಅಪ್ಪಣೆ ಕೇಳಿ ಕೆಯ್ ಮುಗ್ದ್ ॥ ೧ ॥

ರಾಗ ಮುಖಾರಿ ಏಕತಾಳ

ದನಿಗ ನೀವ್ ಕೇಳೋಕು ಮಾತ । ಬಿದ್ದನೆ ಕಾಲ್ಗೆ ।
ದನಿಗ ನೀವ್ ಕೇಳೋಕು ಮಾತ ॥ ಪ ॥
ನಿಮ್ಮ ಮಾತ್ನ ಕೇಳಿ ನಾವು । ಹುಡ್ಕಿದೊ ಈಗ ।
ನಮ್ಮ ಕುದ್ರೆನ ಎಲ್ಲ ಕಡೆನೂ ॥
ಹಿಂದೆನು ಮುಂದೆನು ಎಡೆಕೆನು ಬಲಕೆನು
ಸಂದಿಲಿ ಗೊಂದಿಲಿ ಮೂಲೆಲಿ ಮುಡುಕುಲಿ
ಒಂದಲ್ಲ ಎರ್ಡಲ್ಲ ಸಾವ್ರ ಜೆನಗಳ
ಬಂದುಟ ಕುದ್ರೆಂತ ಕೇಳಿನೆ ಸಾಕಾತ್ ॥ ೧ ॥

ಯಾವ ದೇಸನೊ ಇದ್ ಗೊತ್ಲೇ । ನಮ್ಮ ಕುದ್ರೆ ।
ಯಾವ ಕಡೆಗೆ ಹೋತೋ್ ಬಾತ್ಲೇ ॥
ಯಾವನಾರ್ ಕಂಡರೆ ಹೇಳೊಕು ಅಂತಲಿ ಹೋವಾ೦
ಬಾವರಿಕೆಲ್ಲಕು ಹೊಳ್ಯೊಳೊ್
ನಾವೇನ್ಮಾಡ್ದುಂತ ಮಂಡೆಗೆ ಹೋದುಲ್
ದೇವ್ರೇ ನೀವ್ಗೆ ಹೇಳ್ದುಂತ ಬಂದೊಳೊ್ ॥ ೨ ॥

ಕಂದ

ಚಾಕ್ರಿ ಜನಗ ಹೇಳ್ದರ ಕೇ
ಳ್ದಾಕನ ಶತ್ರುಹನ ಮೊನ್ನಿಗೆ ಎತೆ ಬಾತಾಗಲೇ ॥
ಏಕೀಂಗಾತಂತ ಸುಮತಿನ
ಜೋಕೆಲಿ ಕೇಳ್ಕನ ಹೇಳ್ತವ೦ ವೀರಮಣಿಕತೆನ ॥ ೧ ॥

ರಾಗ ಜಂಜೂಟಿ ಅಷ್ಟತಾಳ

ಕೇಳೊಕು ಶತ್ರುಹ ಹೇಳಿನೆ ನಿಂಗೆ । ಈ ।
ಮೇಲೆನೆ ಕಾಂಬೋದು ಕಣ್ಣಿಗೆ ನಾವ್ಗೆ ॥
ಹೇಳುವೆ ಜ್ಯೋತಿರ್ಮೇಧಾ ಪಟ್ಣಂತದ್ಕೆ
ಆಳ್ವ ರಾಜವ° ವೀರಮಣಿ ಗಡ
ಸೋಲಿಕಿಲ್ಲೆವ ಯಾರಿಗಾದರ್ ॥ ೧ ॥

ಅತಿಬಕ್ತಿ ಸಿವನ ಮೇಲವಂಗೆ । ಇಕ್ಸು ।
ಮತಿ ಅಂತ ಹೆಸ್ರ್ ಮಗಂಗೆ ।
ಮತಿಲಿ ತಪಸ್ ಮಾಡಿ ಶಿವನ ವರನ ಪಡ್ದ್
ಜತೆಲಿ ಇರಿಸಿತ್ ಅಳಿಯ ಮನೆಗವ°
ಕತನ ಕೇಳ್ಯ ಮೂಲ ಇದ್‌ಬಲ ॥ ೨ ॥

ಇಬ್ಬರ್ ಮಕ್ಕಳವಂಗೆ । ಇರುವೊ ।
ಒಬ್ಬರ್ ಮೇಲೊಬ್ಬರಿಂಗೆ ॥
ಒಬ್ಬನ ಹೆಸ್ರ್ ಕೇಳ್ ರುಕ್ಮಾಂಗದಂತಲಿ ।
ನೊಬ್ಬನೆಸ್ರ್ ಶುಭ್ರಾಂಗನಂತಲಿ ।
ಕೊಬ್ಬವುಕೆ ಕಟ್ಟಿರುವೊ ಕುದ್ರೆನ ॥ ೩ ॥

ರಾಗ ಮಧುಮಾಧವಿ ತ್ರಿವುಡೆ ತಾಳ

ಸಾರಿ ಸರ್‌ಪನನಾದ್ರ್ ಸಾಯ್ಲೊಕು ।
ಸೂರ್ಯ ವಂಶನ ರಾಜ ಧರ್ಮದ್ ।
ಯಾರನಾದರ್ ರಾಜಿ ಮಾಡ್ಸುವ
ಕಾರ್ಯಕೇಂತನೆ ಕಳ್ಸೊಕು ॥ ೧ ॥

ಒಳ್ಳೆ ಮಾತಿಲಿ ಕಪ್ಪ ಕೊಟ್ಟರೆ
ಇಲ್ಲೆ ಕಾಳಗ ಇವನ ಒಟ್ಟಿಗೆ
ಇಲ್ಲದಿರ್ಕನ ದಂಡ್ ಸೇರ್ಸ್ತ
ಗೆಲ್ಲೊಕಿವನ ನಿಮಿಸಲಿ ॥ ೨ ॥

ಬಂದೊಳದ್ ನಾವ್ ರಾಮ ಸೇವೆಗೆ
ಎಂದ್ ಸೋಲ್‌ನೆ ಬರದ್ ನಾವ್ಗೆನೆ
ಬಂದ ಕಸ್ಟಗೆ ಮಾಯ ಆದುಯ
ಎಂದ್ ಯೋಚನೆ ಮಾಡ್‌ತ ॥ ೩ ॥

ಭಾಮಿನಿ

ಹನುಮ ನೀ ಬಾ ಜಾಣಗಡ ಅರ
ಮನೆಗೆ ಹೋಗಾ ವೀರಮಣಿ ಕ
ಪ್ಪನ ಕೊಡೊಕಡ ಇಲ್ಲದಿರ್ಕನ ದಂಡೆ ಬಾದು ಗಡ ॥
ಜೆನರ ಮುಂದೆನೆ ತಲೆನ ತಗ್ಗಿಸಿ
ಕೊಣಿವ ಗೆತಿಯಾದುಂತವಗೆ ರಾ
ವಣಗೆ ಬುದ್ದಿನ ಹೇಳ್ದ ರೀತಿಲಿ ಹೇಳಿ ಬರೊಕು ಬಲಾ ॥ ೧ ॥

ಕಂದ

ಆತ್ ನಾ ಹೋನೇಂತ ಹನುಮ
ಬಾತಾಗ ಜ್ಯೋತಿರ್ಮೇದ ನಗರದತ್ತವ್ ॥
ಬಾತಿವಗೆ ಕಡೆದಿನಂತಾ ।
ಮಾತ್ ಮಾತಿಲಿ ರಾಮಭಜನೆ ಮಾಡ್ತಾ ಹಾರಿನೆ ॥ ೧ ॥

ರಾಗ ಕೇದಾರಗೌಳ ಝಂಪೆತಾಳ

ವೀರಮಣಿ ಗದ್ದಿಗೇಲಿ । ಕುದ್ರ್‍ಕನ ।
ಹಾರಿ ಬಂದವನೆದ್‍ರಲಿ ॥
ಮೋರೆ ನೋಡಿನೆ ಇರ್ಕನ । ವೀರಮಣಿ ।
ಯಾರಿವಂತ ಹಾಂಗಿರ್ಕನ ॥ ೧ ॥

ಕುರೆ ಬಂದ್‍ದಿಲ್ಲಿಗೇಂತ । ಸುಮ್ಮನೇ ।
ಇರಿಕೆವನ ಮುಂದೆ ಕುತ್ತ ।
ಸುರುಂಟಿ ಬಾಲನ ನೇಚ್‍ತ । ಕುದ್ರತವ ।
ಅರರೆ ನಾ ಹೇಳ್‍ದೇನೇಂತ ॥ ೨ ॥

ನೋಡಿ ರುಕ್ಮಾಂಗ ಮೊಸೆದ್ । ಹೇಳ್ತಾಗ ।
ಕಾಡ ಮಲೆಮಂಗ ಬಂದ್ ॥
ನಾಡ ರಾಜರ ಮುಂದೇನೇ । ಹೀಂಗೆ ನೀ ।
ಮಾಡಿರೆ ನಾವ್ಗೆ ಸಮನೆ ॥ ೩ ॥

ಸಮನೆ ನೀವ್ ರಾಮ ದನಿಗೆ । ಕುದ್ರೆನಾ ।
ಗುಮನ ಮಾಡ್ದನೆ ಕಟ್ಟಿಕೇ
ಅಮಲ್ ಬುಡ್ಸುವೆ ಹಿಡ್ದರ । ಹನುಮನಾ ।
ಸಮನಾಗಿ ಕೇಳೊಕ್ಕೆಲ್ಲ ॥ ೪ ॥

ಒಳ್ಳೆ ಮಾತಿಲಿ ಹೇಳಿನೆ । ಬುಟ್ಟರೆ
ಎಲ್ಲ ಕಾಯುವೊ ರಾಮನೆ ।
ಇಲ್ಲದಿರ್ಕನ ಅಡ್‍ರ್‍ಲಿ । ಬಡಿವೆ ನಾ ।
ಎಲ್ಲ ಹಾಳಾದ್ ಇಲ್ಲೀ ॥ ೫ ॥

ರಾಗ ಮಾರವಿ ಏಕತಾಳ

ಗರ್ಜನೆ ಮಾಡ್ತಾ ವೀರಮಣ್ಯಾಗ
ದುರ್ಜನ ಮಾಡ್‌ಬೇಡ ॥
ಪ್ರೇಜನ ಇಲ್ಲೆಯ ನಿನ್ನನ ರಾಮವ್ಂ
ಯೂರ್ಜನ ಹೇಳವನ ॥ ೧ ॥

ಕಾಲಾಂತಕನವು ಕಲಿಗೆ ಗೊತ್ತುಟ ನೀ
ಬೋಳನ ಹಾಂಗೆಲ್ಲ ॥
ನಾಲಿಕೆ ಎಳಿ ಬೇಡ ಕಟ್ಟ್‌ತ ಕಡಲಿಗೆ
ಪಾಲನ ಮೆರ್ದವವು ॥ ೨ ॥

ರಾವಣ ಕದ್ದಾ ಹೆಣ್ಣ್‌ನ ತಂದವ
ಯಾವ್ಂ ಜನವ ದೊಡ್ಡ ॥
ನಾವ್‌ಗೆಲ್ಲಾ ಕತೆ ಗೊಟ್ಟುಟ ಬಲ ನಿನ
ಸಾವುಯ ಬೊಗಳ್ಬೇಡ ॥ ೩ ॥

ರಾಗ ತುಜಾವಂತು ಮಟ್ಟೆತಾಳ

ಯಾಕೆ ಹೀಂಗೆ ಹೇಳ್ದು ಬೋಳನೆ । ಲೋಕಕೆಲ್ಲ ಅಮ್ಮ ಸೀತೆ
ಕ್ಯಾತಿ ಗೊತ್ತ ನಿಂಗೆ ಮೂರ್ಕನೆ ॥ ಪ ॥

ಆದಿ ಮಾಯೆ ಸೀತೆ ಅಮ್ಮನೆ । ಉರ್ತ ಬಾವರ ।
ಆದಿ ಮೂಲ ತೆಗೆವ ನೆಪಕೆನೆ ॥
ಆ ದಶರಥಗೆ ಮಜ್ಜ ರಾಮ । ಆದ ರಾವಣನ ತಲೆನ ತೆ ।
ಗ್ದಾದ ಮೇಲೆ ಕಿಚ್ಚಿಗಿಟ್ಟ್ । ವಾದ ಇಲ್ಲದಂಗೆ ಸುದ್ದ ಮಾಡಿ
ಸಾದು ಜೆನೆನ ಲೋಕ ಎಲ್ಲ

ಕಾದ ರಾಮ ನಿಂಗೆ ಎಂತ ॥ ಗೊತ್ತುಟ್‌ಯ ॥
ಆದದಿಸ್ಟ್ ಕತೆನ ತಿಳ್ಕಯ ॥ ೧ ॥

ಶಿವನೆ ಲೋಕಕೆಲ್ಲ ಮೂಲನ್ । ತಿಳ್ಕನೀ ।
ಅವನ ಹೆಣ್ಣ್ ಗಿರಿಜೆ ಆದಿ ಮಾಯೆನೆ
ಅವನೆ ನನ್ನ ಅಳಿಯನಾದು ದವನೆ ನಮ್ಮ ಮನೆಗೆ ಪಾರ ।
ಕವಣೆ ಹಣ್ಣ್ ತಿಂಬ ಕುರೆಗೆ
ನೆವನ ಬೇಡ ಬೀಳ್ದೊ ನಿಂಗೆ । ಬೊಗಳ ಬೇಡ ।
ದವಡೆ ಗಟ್ಟಿ ಇರ್ದೊ ನೋಡುಯ ॥ ೨ ॥

ರಾಮ ಕತೆನ ಹೇಳ್ವೆ ಕೇಳ್‌ಯ । ಕೊಂದೊ ಪರಶು ।
ರಾಮ ಭೂಮಿಲಿದ್ದ ರಾಜರ ॥
ಕಾಮಲೆನ ಇಳಿಸಿತವನ ಸು । ತ್ರಾಮ ಮಗನ ಕೊಂದ ಗೊತ್ತ ।
ಸ್ವಾಮಿ ರಾಮ ದೇವರ ಶಿವನೆ
ನಾಮ ಹಾಕಿ ಪೂಜೆ ಮಾಡ್ದು । ಏನ್ ಗೊತ್ತು ।
ಬಾವಿಲಿದ್ದ ಕಪ್ಪೆ ನೀನೆಯಾ ॥ ೩ ॥

ಇರ್ಲಿ ನಿನ್ನ ರಾಮ ನಿಂಗೆನೆ । ನಿನ್ನ ಯಾರ್ ।
ಇಲ್ಲಿ ಕಳ್ಸಿ ಕೊಟ್ಟ್ರೊ ಹೇಳ್ ಸುಮ್ಮನೆ ॥
ತರ್ಲೆ ಮಾಡ ಬೇಡ ಬಂದ್ ।
ಮೊರ್ಲ ಯೇಕೆ ಬಂದೆ ಹೇಳ್ ।
ಪೊರ್ಲುಲಿ ಅರಮನೆನ ಬುಟ್ಟು
ನಿಲ್ಲದಂಗೆ ಹೋಕು ಬೇಗನೆ ॥ ಏನ್ ಎಂತ ॥
ಎಲ್ಲ ಹೇಳ್ ಕೊಟ್ನೆ ಉತ್ತರ ॥ ೪ ॥

ರಾಗ ತೋಡಿ ಅಷ್ಟತಾಳ

ಸೂರ್ಯ ವಂಶನ ರಾಜ ರಾಮನ ।
ದಾರಿಗಡ್ಡನೆ ಬರದೆ ಕುದ್ರೆನ ।
ಉರ್ಲಿಂದದರ ಬುಟ್ಟು ಬುಡುನೀಯ ।
ಮೊರ್ಲ ನೀನೆನೆ ಜಗಳ ಮಾಡಿರೆ ।
ಉರ್ಲು ಆದ್ಯ ನಿನ್ನ ತಲೆಗೆನೆ ।
ಸಾರಿ ಹೇಳ್ನೆ ಸಾವೆ ಕಾಳಗಲಿ ॥ ೧ ॥

ಕಟ್ಟಿಬುಟ್ಟೊಳೆಯ ಕುದ್ರೆ ಬುಡಿಕಿಲ್ಲೆಯ ।
ನೆಟ್ಟನಿಲ್ಲಿಂದ ಹೋಗು ಬಲನೀ ।
ಮುಟ್ಟಿ ನೋಡಲಿ ನಿನ್ನ ಶತ್ರುಹ ॥
ಕುಟ್ಟಿಬೀಳ್ಸ್ತ ನಿಮ್ಮ ಎಲ್ಲರ ।
ಇಟ್ಟ್‌ಬುಡುವೆ ಸೆರೆ ಮನೆಲಿ ನೋಡಿಕ ।
ಇಷ್ಟ್ ಹೇಳಿರೆ ಸಾಕ್ ಹೋಗು ಇಲ್ಲಿಂದ ॥ ೨ ॥

ಭಾಮಿನಿ

ವೀರಮಣಿ ಹೀಂಗೇಳ್ಕನಾಗಲೆ
ವೀರ ಹನುಮನ್ ಹೇಳ್ತ್ ಮೂರ್ಕನೆ
ಬಾರಿ ಮೆರ್ದಿಯ ನಮ್ಮ ಶತ್ರುಹ ನಿಂಗೆ ಗೊತ್ತಿಲ್ಲೆ ॥
ಬಾರಿ ದಂಡ್ನೆ ಬಾದು ಅಂತವ
ಹಾರಿ ಬಂದಲ್ಲಿಂದ ಬೇಗನೆ
ದಾರಿ ನೋಡ್ತಿರ್ಕನವ ಶತ್ರುಹನಲ್ಲಿ ಬಾತಾಗ ॥ ೧ ॥

ವಾರ್ಧಿಕ

ಕೇಳ್‌ಕುಞ್ಞಣ ನಾ ಹೋಗಿ ವೀರಮಣಿ ಹಕ್ಕಲೇ ।
ಹೇಳಿ ಸಾಕಾತ್ ನಂಗೆ ತೆರನ ಕೊಡು ನೀ ಅಂತ ।
ಕೇಳುದಲ್ಲೆವಂಗೆ ಅವ್ᵒ ಮೂರ್ಕ ಬಲೆರಿಯಾ ರಾಮದೇವಂಗೇನೆ
ಬಯ್ದದೇ ॥
ಕಾಳಗನ ಕೊಟ್ಟದೆ ಗಡ ಸಂದಾನ ಮುರ್ದ್ತವ್ᵒ ।
ನಾಳೆನೇ ಯುದ್ದಕೆ ಹೋಕು ದಂಡ್ ನಮ್‌ದೆಲ್ಲ ।
ಹೇಳಿ ಪ್ರೇಜನಯಿಲ್ಲೆ ಅವ್ಕೆ ತೋರ್‌ಸೋಕು ನಾವೇನ್‌ಂತ
ಯುದ್ಧಮಾಡಿ ॥ ೧ ॥

ರಾಗ ಸುರುಟಿ ಏಕತಾಳ

ಶತ್ರುಹ ಹೇಳ್ತಾಗ । ಗೊತ್ತುಟು । ಸತ್ತದ್ ಅವ್ᵒಬೇಗ ॥
ನಿತ್ತುಟು ಶಿವನವನ ಮನೆಲಿ ಗಟ್ಟನೆ ।
ಬರ್ತಿಲಿ ದಂಡ್‌ನ ಕೂಡಿಟು ಇವಗಡ ॥ ೧ ॥

ರಾಮನ ಹಗೆತನ । ಮಾಡಿರೆ । ಕಾಮಲೆ ಕಾರ್ದವನ ॥
ನಾಮೊನ್ನು ಮಾಡಿರೆ ಕತ್ತಲೆ ಮನೆಲವ್ᵒ ।
ಸೋಮರಿ ಹಂಗೆನೆ ಕುದ್ರಸದಿರಿಕಿಲೆ ॥ ೨ ॥

ಪಡ್‌ಪೊಸಿ ಮೊನ್ಸನಿವ । ಬಂದರೆ । ಕಡಿಯೊಕು ನಾವೆಲ್ಲ ॥
ಬುಡಿಕಿಲೆ ಅವನ ನ । ನಡಿಯೊಕು ಯುದ್ದಕೆ ।
ಪಡೆ ನಮ್ಮದ್ ಇರ್ಲಿಯ ಸಜ್ಜಾಗಿನೆ ॥ ೩ ॥

ರಾಗ ದೇಶಿ ಅಷ್ಟತಾಳ

ಸಣಪ ನೀವ್ ಅಪ್ಪಣೆನ ನಂಗೆ ಕೊಟ್ಟರೆ
ಹೆಣನ ಮಾಡಿನೆ ಬುಡುವೆ ನೋಡೋಕೂಂತ ಪುಷ್ಕರ ಹೇಳ್ತವ
॥ ೧ ॥

ಗುದ್ದಿ ಪುಡಿಮಾಡಿನೆ ಬಿದ್ದರೆ ಮತ್ತೆ ।
ಎದ್ರಿಕೆನೆ ಆಕಿಲ್ಲೆ ಅವುಕೆಂತ ಹನುಮಂತ ಹೇಳ್ಕನ ॥ ೨ ॥

ದಮನ ಹೇಳ್ತಾಗ ಬುಡಿಕಿಲೆ ಅವನ ನಾ ।
ಗುಮನ ಇರದೆನೆ ಇದ್ದರವ್ಕೆನೆ ಸಮನೆ ಬುದ್ದಿನ ಕಲ್ಸೊಕು ॥ ೩ ॥

ಭಾಮಿನಿ

ವೀರಮಣಿ ರಾಜನ ನಗರನ ಸ ।
ಮಾರ ಮಾಡಿನೆ ಬುದ್ದಿ ಕಲ್ಸೊಕು ।
ಯಾರ್ ಬಂದರ್ ಬುಡಿಕೆ ಬೊತ್ತುಂತಾಗ ಶತ್ರುಹ ಹೇಳ್ತಾಗ ॥
ವೀರರೆಲ್ಲವು ದಂಡ್ ಸೇರಿನೆ
ಹಾರಿ ಕೋಟೆನ ಮುರ್ದ್ ಒಳೆಗೆನೆ
ದಾರಿ ಮಾಡಿರೆ ಚಾಕ್ರಿಯವು ತಡೆದೊ ಗಡ ಬಾಗಿಲ್‌ನ ॥ ೧ ॥

ರಾಗ ಕಮಾಚು ಏಕತಾಳ

ಯಾರ್‌ಯ ಒಳಬಂದ ಬಿರ್ಸ । ಬಾರಿ ಹಾಂಕಾರ ನಿಂಗೆ ।
ಮಾರಿ ಹಬ್ಬ ಮಾಡ್ವೆ ನೀವ್ಗೆ । ಸಾರಿ ಹೇಳ್ನೇ ಹೋಗಿ ॥ ೧ ॥

ಭರತ ಮಜ್ಜ ಪುಷ್ಕರಾಂತ । ಕರಿಯಾ ನಿನ್ನಪ್ಪನ ನೀ ।
ಸರುವತಾ ಬುಡಿಕಿಲ್ಲೆ ಅವನ । ಬರ್ಲಿಯಾ ಯುದ್ದಕೀಗಲೇ ॥ ೨ ॥

ಪುಸ್ಕ ಗಿಸ್ಕ್ ಎಲ್ಲ ಗೊತ್ತುಟು । ಪುಸ್ಕ ನುಗ್ಗಿ ಬಂದ್‌ದೇಕೆ ॥
ಉಸ್ಕ್‌ಡಮ್ಮ್ ತೆಗಿರೆ ನಿಂಗೆ । ಪಸ್ಕ ಪಸ್ಕ ದವ್ಡೆಗಿಡುವೆ ॥ ೩ ॥

ಸಿಟ್ಟಿನಿಂದ ಪುಷ್ಕರಾಗ । ತಟ್ಟಿ ನಾಲ್ಕ್ ದವ್ಡೆಗೆ ॥ ಕಟ್ಟಿ
ಕಯ್ನಿ ಮೆಟ್ಟಿ ಹೇಳ್ತ್ । ಇಸ್ಟ್ ಸಾಕಾ ಹೋದಿಯಾ ॥ ೪ ॥

ಭಾಮಿನಿ

ಬೇಗ ಹೋಗಿನೆ ಹೇಳ್ ನೀನ್ನವ
ಈಗಲೇ ಬರ್ಲಿಯಾ ಪಡೆನ ಸ
ಜ್ಜಾಗಿ ನೋಡಿನೆ ಕಳ್ಸ್‌ಯಾ ಬಲ ಅಂತ ನೂಕಿಕನ ॥
ಹೋಗಿ ಚಾರಕ ಓಲಗಲಿ ತೊಂ
ಪಾಗಿ ಕುದ್ದವ ವೀರಮಣಿ ದೊರೆ
ಕಾಲ್ಗೆ ಬಿದ್ದವ್ ಹೇಳ್ತ್ ನಡ್‌ಗ್‌ತ ಬಾಳ ಬೇಜಾರ್ಲಿ ॥ ೧ ॥

ರಾಗ ಲಾವಣಿ ಅಷ್ಟತಾಳ

ದನಿಗ ಸಲಾಂ ನೀವ್ಗೆ ಸಾಮಿ ॥ ನಮ ॥ ಮನೆಗೆ ಬಿದ್ದುಟು
ಕಿಚ್ಚ್ ಸಾಮಿ ॥ ಕುದ್ರೆನ ಯಾಕೆ ಕಟ್ಟ್ಯೊಳರಿ ॥ ಬುಡಿ ॥
ಅದ್ರ ಕತೆನ ಕೆಲ್ಸ ಕೆಡ್ಗ್ ಹೋತೀಗ ॥
ಸದ್ರ್ ಇಲ್ಲದೆ ನಮ್ಮ ಪುರಕೆ ಬಾತ್ ।
ಹೆದ್ರಿಕಿಲ್ಲದೆ ಶತ್ರುಹ ಕೋಟೆ ಮುರಿದ್ ॥ ೧ ॥

ಉರ್ತ ಹೈದನೊಬ್ಬನುಟ್ಟು । ನನ್ನ ।
ಸರ್ತನ ನಿಲ್ಸಿನೆ ಕಯ್ನು ಬಿಗ್ದುಟ್ಟು ॥
ಒತ್ತ ಒದ್ದ್‌ನೆ ಬುಡ್ತುನಂಗೆ । ಬೇಡ ।
ಅರ್ತನ ಮಾಡ್ಕಣಿ ದನಿಗ ಹೇಳ್ದನೆ ನ ॥ ೨ ॥

ಕಡಲಂಗೆ ದಂಡ್ ಬಂದುಟ್ಟು । ಅವು ।
ಬೊಡಿಯಾಕೆಂತನೆ ನಾವ್ಗೆ ನಿಂದೊಳು ಒಟ್ಟು ॥
ತಡಿಯಾಕೆ ನಾವ್ಗೆ ಬೊತ್ತವರ । ದೇವ್ರು ।
ಮೊಡ್‌ಗಿದಾಂಗಿರೊಮೊ ಕೇಳಿ ನಾ ಹೇಳ್ದರ ॥ ೩ ॥

ರಾಗ ಪಂತುವರಾಳಿ ಮಟ್ಟೆತಾಳ

ಚಾಕ್ರಿ ಯವನ ಮಾತ್ ಕೇಳಿ
ನೂಕಿಯಿವನ ಅಂತ ರಾಜ
ಬಾಕಿ ಜೆನಕೆ ಹೇಳಿ ಎದ್ದ್‌ತಾಗ
ತಾಕೆ ದಂಡ್‌ನ ॥
ಜೋಕೆ ಮಾಡಿ ಎಲ್ಲ ಬಲನ
ಹೋಕು ಯುದ್ದಕೆಂತ ನೆನ್ನಿ
ಹಾಕ್ ಕೋಟೆ ಬಾಗಿಲಂತ
ಹೇಳ್ಕೆ ಮಾಡಿ ಮಕ್ಕಳೆಲ್ಲ
ಬಾಕೆ ಹೇಳ್ತವ ॥ ೧ ॥

ಎಲ್ಲಿ ನಮ್ಮ ರುಕ್ಮ ಎಲ್ಲಿ
ಎಲ್ಲಿ ಶುಭನ್ ಬರೊಕು ಬೇಗ
ಎಲ್ಲ ಬಲನೆ ಸೇರ್ನಿ ಬೇಗ
ನಿಲ್ನಿ ಜಗಳಕೆ ॥
ಕಲ್ನೊ ಕಿವುಕೆ ಬುಡಿಕೆ ಬೊತ್ತ್
ಕೆಲ್ಸ ಕೆಡ್ಗದಿರ್ಲಿ ಬಲೆರಿ
ಪೊಡ್ಸ್ ತೆಗಿಯೊಕವರ ತಮ್ಮ
ಬರ್ಲಿ ಕೇಸರಿ ॥ ೨ ॥

ಜಂಬು ದೀಪ ಮದ್ಯಲೆಲ್ಲ ।
ತುಂಬಿ ಇರ್ದ ಬೂಮಿಗೆಲ್ಲ ।
ಇಂಬುಕೊಟ್ಟ ರಾಜ ನನ್ನ ।
ನಂಬುತೊಳೊ ಜೆನ ॥
ಶಂಭು ನಮ್ಮ ಮನೆಯ ಅಳಿಯ ।
ನಂಬಿದವ್ಕೆ ದೈವ ಇರಿಕೆ
ಕೊಂಬುನಂಗೆ ಬಂದೊದೌದು ।
ಸಂಬ್ರುಮನೆ ಬಲಾ ॥ ೩ ॥

ನಡೆಲಿ ದಂಡ್ ಜಗಳ ಕಳಕೆ ।
ಬಡಿದ್ ಹಾಕಿ ಬಾವೆಂ ನೋಡಿ ।
ಕೊಡಲಿ ಬಿಲ್ಲ್ ಬಾಣ ಅಂತ
ನಡಿತ್ ಯುದ್ದಕೆ ॥
ಹೊಡಿತ್ ಭೇರಿ ದಂಡ್ ಮುಂದೆ
ನಡೆದ್ ಬಾವ ರಭಸೆ ಕೇಳ್ರೆ
ಕಡಲ್ ತೆರೆನ ರಬಸದಾಂಗೆ
ಹೊಡೆದ್ ಕೇಳ್ತ್ ॥ ೪ ॥

ಭಾಮಿನಿ

ಕೋಟೆ ಬದ್ರನ ಮಾಡಿ ದಂಡ್ಗೆ ।
ಕೋಟಿ ವೀರಗ ಸೇರ್ಸಿ ಹೊರ್ಟೊಳೊ ।
ಸಾಟಿ ಇಲ್ಲದ ರಾಮ ಸೈನ್ಯನ ಕಂಡ್ ವೀರಮಣಿ ॥
ಆಟ ನಡಿಯಕೆ ಬುಡದೆ ನಾ ಹೋ
ರಾಟ ಮಾಡಿನೆ ಕಳ್ಸಿ ನನ್ನ
ಕಾಟ ತಪ್ಸಿನೆ ಅಂತ ಕಾಲಿಗೆ ಬೀತ್ ರುಕ್ಮಾಂಗ ॥ ೧ ॥

ರಾಗ ಮಾರವಿ ಏಕತಾಳ

ಅಪ್ಪನ ಅಪ್ಪಣೆ ಪಡ್‌ಕ್ಯೆಂಡ್ ರುಕ್ಮನ್ ।
ತೊಪ್ಪದೆ ಗುರಿ ಇಡ್‌ತ ॥
ದರ್ಪಲಿ ಬಾಣನ ಬುಡ್‌ತಲಿ ಬಾಕನ ।
ತಕ್ಷಣ ಪುಷ್ಕರನ್ ॥ ೧ ॥

ರಕ್ಕಸ ದೇವರ್ ನರಮೊಯಿಂಸರ್‌ನ
ಲೆಕ್ಕನೆ ತಕಣದೆನೆ ॥
ಸೊಕ್ಕಿದ ಕುದ್ರೆನ ಕಟ್ಟಿದ ನೀವುಗ ।
ಸಿಕ್ಕಿರೆ ಬುಡಿಕಿಲೆಯಾ ॥ ೨ ॥

ಯಾಗನ ಮಾಡಿದೆ ಅಪ್ಪನ ಸಮಕವ ।
ಆಗಿಕೆ ಸಾದ್ಯನಯಾ ॥
ಬೇಗಲಿ ಹೋಕಿಲ್ಲಿಂದಲೆ ನೀವ್ ನಾ ।
ಯಾಗೊಳು ಬುಡಿಕಿಲೆಯಾ ॥ ೩ ॥

ಯಾರ್‌ಯ ವೀರಮಣಿ ಗಡವ ಸುಮ್ಮನೆ
ಬಾರಿನೆ ಹೇಳಿಯನಾ ॥
ಮೋರೆಲಿ ಚೋಲಿನೆ ಉಟ್ಟಯ ಎಂತರ
ತೋರ್‌ಸ್ ಮಾಡಿಟವ ॥ ೪ ॥

ಮೆಚ್ಚಿಸಿ ಶಿವನ ಮನೆಗಳಿಯನೆಂತಲೆ ।
ನಿಚ್ಚನೆ ಕಾವಲಿಗೆ ॥
ಹೆಚ್ಚಿಗೆ ನಿಲಿಸಿಟು ಯಾರ್‌ಯಾ ರಾಮವ° ।
ಕೊಚ್ಚುದು ನಿಲ್ಸಿಯ ನೀ ॥ ೫ ॥

ವಿಶ್ವಾಮಿತ್ರರ ಯಾಗನ ಕಾಯ್ದವು
ವಿಶ್ವಕೆ ಗುರುಗಳವು ॥
ಇಷ್ಟದಿ ನೆಂದರೆ ಕಾಪಾಡುವೊವವು ।
ಎಷ್ಟರ ವೀರಮಣಿ ॥ ೬ ॥

ರಾಗ ಬೈರವಿ ಅಷ್ಟತಾಳ

ಗೊತ್ತುಟು ಸಂಗತಿಗ । ಗೂಡೆನ ಹುಚ್ಚ್ ।
ಹತ್ತಿತ್ ದಶರಥಗೆ ॥
ಹತ್ತಿಸಿ ಕಾಡಿಗೆ ಕಳ್ಸಿರೆ ವಾಲಿನ ।
ನಿತ್ತ್‌ಮದೆಗೆವ್ ಕೊಂದ ॥ ೧ ॥

ಎದ್‌ರ್‌ಗೆ ನಿಂದವಂಗೆ । ಬರದ್ ಗೇಲ್ ವ ।
ರದ ಬಲನೆ ಹಾಂಗವಂಗೆ ॥
ಮದಲಿ ನಾದಿನಿನ ಮುಟ್ಟಿದ ಕಾರಣ ।
ಮದ್‌ಲಿ ನಿಂದವನ ಕೊಂದೊ ॥ ೨ ॥

ವೀರರ್ ನೀವೆಲ್ಲ ಗಡ । ನಿಮ್ಮ ಹಾಂಗೆ ।
ಯಾರ್‌ನೇ ಇಲ್ಲೇ ಗಡ ॥
ತೋರ್ಸಿ ನಿಮ್ಮ ಪವುರಸ ಕುದ್ರೆನ ಬಿಡ್ಸಿಯ
ಯಾರ್ ಬೇಡೆಂದವೆ ನಿಂಗೆ ॥ ೩ ॥

ಬುಟ್ಟರೆ ಕುದ್ರೆನ ನಮ್ಮ । ಉಳ್ಸುವೆ ನಿಮ್ಮ ।
ಕೆಟ್ಟಿಯ ಇಲ್ಲರೆ ತಮ್ಮ ॥
ಕೊಟ್ಟು ಕಪ್ಪನ ನಿನ್ನ ಜೀವನ ಉಳ್ಸಿಯ ।
ಅಟ್ಟಹಾಸನ ನಿಲ್ಸಿಯ ॥ ೪ ॥

ರಾಗ ಶಂಕರಾಭರಣ ಮಟ್ಟಿತಾಳ

ಯುದ್ದ ಮಾಡಿ ಗೆಲ್ಲದಿರಿಕೆ । ಸದ್ದ್ ಮಾಡಿ ಗೆಲುವ ಕೆಣಿಯ ॥
ಇದ್ದ ಬುದ್ದಿನೆಲ್ಲ ಕರ್ಚ್ ॥ ಮಾಡ ಬೇಡಯ ॥ ೧ ॥

ಹೀಂಗೆ ಹೇಳಿ ಬಾಣ ಬುಟ್ಟ । ಹಾಂಗೆನದರ ಪುಷ್ಕರ ಕಡಿತ್ ॥
ಹೇಂಗೆ ನನ್ನ ಗತ್ತ್ ನೋಡ್ ॥ ಅಂತ ಹೇಳ್ಕನ ॥ ೨ ॥

ಮಲೆತ್ ನಿಂತ್ ರುಕ್ಮನಾಗ ಎಳೆದ್ ಮಂತ್ರ ಕಣೆನ ಬುಟ್ಟ
ತಿಳ್ಕ ನನ್ನ ಬಲನ ನೋಡು ॥ ಅಂತ ಒಮ್ಮೆಗೆ ॥ ೩ ॥

ಪುಡಿನ ಮಾಡಿ ಅದರ ಮತ್ತೆ । ಎಡೆನ ಬುಡದೆ ಬುಟ್ಟು ಬಾಣ ।
ದಡಿಯ ಪುಷ್ಕರಿರಿಕೆ ನೋಡಿ ॥ ಕಿಡಿಲಿ ರುಕ್ಮನ್ ॥ ೪ ॥

ರಾಗ ಭೈರವಿ ಏಕತಾಳ

ಬೇಗನೆ ಮಾರುತ ಬಾಣ । ಬಿಲ್ಲಿ ।
ಗಾಗಲೆ ಸೇರಿಸಿ ರುಕ್ಮ ।
ತಾಗಿಸಿ ಬುಡಿಕನ ಹಿಂದೆ । ನೂರ್ ।
ಗಾವುದ ಬಾಕನ ರಥನ ॥ ೧ ॥

ಗಾಡಿನ ಅಲ್ಲಿಗೆ ಬುಟ್ಟ್ । ಹೊಡ್ ।
ದಾಡಿಕೆ ಬಾತವ ಒಟ್ಟ್ ॥
ನೋಡಿಕ ಸತ್ತಿಯ ನೀನ್ । ನಾ ।
ಮಾಡಿನೆ ಮದ್ದ್‌ನ ಇನ್ನ್ ॥ ೨ ॥

ಬೇಗನೆ ಕಿಚ್ಚಿನ ಬಾಣ । ಅವಂ ।
ತಾಗಿಸಿ ಬುಡ್ಕನ ರತನ ।
ಆಗಲೆ ಬಾನಕೆ ಹಾರಿ । ಅದ್ ।
ಬೇಗನೆ ಹೊತ್ತಿತ್ ಬಾರಿ ॥ ೩ ॥

ಬಾನಕೆ ಹಾರ್ಕನ ರತಲಿ । ರು ।
ಕ್ಮಾನ್ಗದ ಬಿದ್ದ್ತ್ ನೆಲಲಿ ॥
ಕಾಣ್ತ ಆಗ ಶುಬ್ರಾಂಗ । ಬಾತ್ ।
ಬಾಣನ ತಿರ್ಗಿಸಿ ಬೇಗ ॥ ೪ ॥

ರಾಗ ಮಾರವಿ ಝಂಪೆತಾಳ

ಯಾರ್ಯಾ ಬಂದವ್ ಏನ್ಂತ ಕರ್ದವೇ ।
ಸಾರ್ಯಾ ಇಲ್ಲಿಂದ ಕರ್ಸ್ ನಿನ್ನಪ್ಪನಾ ॥
ಮಾರಾಯ ಶುಭಾಂಗನೆ ಹೋರಾಟ ಮಾಡ್ನೀ ।
ಯಾರ್ ಬಂದರೇನ್ಂತ ಬಾಣನಾ ಬುಟ್ಟ ॥ ೧ ॥

ಬಾವ್ ಬಾಣನ ನಡ್ಲಿ ತುಂಡ್ಮಾಡ್ತ ಹೇಳ್ತ್ ।
ಸಾವ್ ನಿಂಗೇ ಗತಿಯ ಹೋವ್ನೀ ಬೇಗ ॥
ಹೋವನೀ ನಿಂಗೆನಾ ತೋರ್ಸುವೆ ದಾರೀಂತ ।
ಆ ವರುಣ ಬಾಣನಾ ಬುಡ್ತು ಶುಭಾಂಗ ॥ ೨ ॥

ಬುಟ್ಟಬಾಣನ ತುಂಡುಮಾಡಿ ಪುಷ್ಕರ ಬೇಗ ।
ಕೊಟ್ಟಬಂದವ್ ನಿನ್ನ ಬುಡಿಕಿಲಾ ಅಂತ ॥
ಅಟ್ಟಹಾಸನ ಕೊಟ್ಟ್ ಮತ್ತೊಂದು ಬಾಣನವ
ಇಟ್ಟ್ ಬುಟ್ಟ್ತ್ ಈಡ್ನ ಶುಭಾಂಗಂದ್ ॥ ೩ ॥

ರಾಗ ಮಾರವಿ ಏಕತಾಳ

ಪಳಪಳ ಹೊಳ್‌ಪುವ ಕಡ್ತಲೆ ಹಿಡ್ದವ
ಇಳ್‌ದ್ ರಥನ ಕೆಳಗೆ ॥
ಕಲ್‌ಸಿನೆ ನಿಂಗೇಂತೇಳ್‌ತ ಹೊಡಿಕೆ ಪು
ಷ್ಕರನದ ಕಡಿತಾಗ ॥ ೧ ॥

ಆ ಮೇಲವ ಗದೆತಿರ್‌ಗಿಸಿ ಹೊಡಿಕನ
ಈ ಮಾರಾಯನದ ॥
ಸಾಮರ್ತಿಕೆಲಿ ಒಂದೇ ಪೆಟ್ಟಿಗೆ
ಬೂಮಿಗೆ ಬೀಳ್ಸಿಕನ ॥ ೨ ॥

ಮತ್ತೆವ್ಂ ಕುಸ್ತಿಗೆ ಕರ್ದರೆ ಸಿಟ್ಟಿಲಿ ।
ಎತ್ತ್‌ತ ಬಿಲ್ಲಿಂದ ॥
ನೆತ್ತಿಗೆ ಹೊಡ್ದರೆ ಬೀತ್ ಶುಭಾಂಗವ
ನೆತ್ರ್‌ನ ಕಕ್ಕ್‌ತಲಿ ॥ ೩ ॥

ಭಾಮಿನಿ

ಮಕ್ಕಳಿಬ್ಬರ್ ನೆಲಕೆ ಬೀಳ್ಕನ ।
ದುಕ್ಕದಲಿ ವೀರಮಣಿ ರಾಜವ
ಸಿಕ್ಕಿಬಿದ್ದಂಗಾತ್ ಯುದ್ದಕೆ ಬಂದ್ ನಾವೀಗ ॥
ಅಕ್ಕ್ ಮಾಡಿದ ನಿಮ್ಮ ಕಾರ್ಯಂ
ತದ್ಕೆ ಒಪ್ಪಿದ ಮೇಲೆ ಯುದ್ದಕೆ
ಮಕ್ಕ ಬಂದೊಳೊ ಹೀಂಗೆ ಆತ್ಂತ ರಾಜ ಮರ್ಡಿತಾಗ
॥ ೧ ॥

ರಾಗ ನೀಲಾಂಬರಿ ರೂಪಕತಾಳ

ನೀವ್ಹೀಂಗಿರ್ಕನ ಮಕ್ಕ । ನಾವ್ಹೇಂಗಿರ್ದೀ ಬೂಮಿಲಿ ॥
ಸಾವ್ನೀವ್ಗೇಂಗಾತೋ ನಾ । ಬಾವೇನೆ ಒಟ್ಟಿಗೇ ॥ ೧ ॥

ಎಂತಕೆ ಕಟ್ಟಿದ್ ನೀ । ವೆಂತಕೆ ಹೋದಿರಿ ದಂಡ್‌ಗೆ ॥
ಅಂತ್ಯನ ಕಾಲನೇ ನಾವ್ಗೇ । ಎಂತರ ನಾವ್ ಮಾಡ್ದು ॥ ೨ ॥

ಮಕ್ಕಳ ಮಾತ್‌ನ ಕೇಳ್ದ್‌ನಾ । ಸಿಕ್ಕಿನೆ ಬಿದ್ದಂಗಾತೀಗ ॥
ದುಕ್ಕವ ಮಾಡಿರೆ ಏನೀಗ । ಮುಕ್ಕಣ್ಣನೆ ಗತಿನಾವ್ಗೇ ॥ ೩ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಮೊರ್ಟ್ಟ ರಾಜನ ಕಂಡ್ ಪುಷ್ಕರ । ಹೊರ್ಟ್ ಬಾತಾಗಲ್ಲಿ ಹೇಳ್ತವ
ಅರ್ತ ಆತೊ್ಯ ರಾಮ ಯಾರ್‌ಂತ । ಪೂರ್ತಿ ನಿಂಗೇ ॥ ೧ ॥

ಮೊರ್ಡುದೆಂತರ ಗೂಡೆಗಳ ತರ । ಹೊರ್ಟ್ ನೀ ಕಾಳಗಕೆ ಇಲ್ಲರೆ
ಹರ್ಡ್ ಕಪ್ಪನ ಬೀಳ್ ಕಾಲಿಗೆ । ಹೊರ್ಡ್ ಮನೆಗೆ ॥ ೨ ॥

ಹೇಳಿ ಕಳ್ಸಿದೆ ಹನುಮನೊಟ್ಟಿಗೆ । ನಾಳೆನೇ ಯುದ್ದಾಂತ
ಅಂದ್‌ಲಿ ॥ ಹೇಳ್ ನೀ ನಿನ್ನಳಿಯ ಮನೆನವ ।
ಹಾಳ್ ಮಾಡ್ತ್ ॥ ೩ ॥

ರಾಜ ಲಕ್ಷಣ ಅಲ್ಲ ಮೊರ್ಡುದು ।
ತೇಜ ಹೋದದೆ ಎದ್ದ್ ಯುದ್ದಕೆ ।
ಬಾ ಜನಗ ನೋಡುವೊಯ ಕೀರ್ತಿನ । ಮಾಜ ಬೇಡ ॥ ೪ ॥

ರಾಗ ಮಾರವಿ ಏಕತಾಳ

ಈ ಮಾತ್‌ನ ಕೇಳ್ದಾಗಲೆ ವೀರಾಮಣಿ ।
ಸಾಮರ್ತಿಕೆ ಬೇಡಾ ॥
ಈ ಮಕ್ಕಳ ಸಾಯ್ಸಿದೆ ಬುಡಿಕಿಲೆ ಬಲ ।
ಏನ್ಮಾಡಿಯ ನಿನ್ನ ॥ ೧ ॥

ತೋರ್ಸ್‌ಯ ಪೌರುಸ ಇದ್ದರೆ ಅಂತಲಿ ।
ಬಾರ್ಸ್‌ತ ಬಿಲ್‌ಹಗ್ಗ ॥
ಹಾರ್ಸಿತ್ ಬಾಣನ ಒಂದೊಂದೊಂದನೆ
ಸೇರ್ಸ್‌ತ ಮುಕ್ಕಕವ ॥ ೨ ॥

ಲೆಕ್ಕನೆ ಪುಷ್ಕರಗಾ ಬಾಣನ ಅವ° ।
ಪಕ್ಕನೆ ಕಡಿದಾಗ ॥
ದಕ್ಕಿಕಿಲ್ಲೆ ಜಯ ನೋಡ್‌ಯ ಹೇಳ್ನೇ ।
ಸೊಕ್ಕ್‌ನ ಬುಟ್‌ಹಾಕ್ ॥ ೩ ॥

ಭಾಮಿನಿ

ಬಾರಿ ಬಿರ್ಸರ್ ಅಂತ ಕುದ್ರೆನ
ಮೋರೆ ಮೇಲೆನೆ ಬರ್ದ್ ಹಾಕಿರೆ ।
ಹಾರಿ ಹಿಡ್ದದರ ಕಟ್ಟಿದೊಯ ನಾವುಗ ರಾಜಧರ್ಮದ್‌ಯ ।
ಕೋರೆ ಬಾಣನ ಹಿಡ್ದ್ ಯುದ್ದಕೆ ।
ವೀರರಾಗಿನೆ ಹಗೆಗಳಾಗೊಳೊ ।
ಯಾರ ಸೋಲ್‌ನೋ ಯಾರ ಜಯನೋ ಕಾದ್ ನೋಡೋಕು
॥ ೧ ॥

ರಾಗ ಭೈರವಿ ಅಷ್ಟತಾಳ

ಹಣೆ ಬರಕೆ ಹೆದ್ರದವು । ಕೀರ್ತಿಲಿ ಸೂ । ರ್ಯನ ವಂಶನ
ರಾಜರ್ ॥ ನೆನ್‌ಸಿಕೆ ಬರ್‌ಬೇಡ್ ನಾವ್ಗಿಲ್ಲೆ ಸೋಲ್‌ಯ ।
ಕನ್‌ಸಲೂ ಸಾದ್ಯ ಇಲ್ಲೆ ॥ ೧ ॥

ಇಸ್ಟ್‌ದಿನನು ನೀವ್ಗೆಲ್ಲ । ಸಿಕ್ಕಿಲ್ಲೆಯ । ಗಟ್ಟಿರಾಜರ
ಮಕ್ಕೆಲ್ಲ ॥ ಹುಟ್ಯೊಳೆ ನಾನೊಬ್ಬ ಬುಡಿಕೆಲೆ ಮದ್ದ್‌ನ ।
ಗಟ್ಯಾಗಿ ಅರ್ದನೆಯ ॥ ೨ ॥

ನೋಡಿಕೆ ಒಳ್ಳೆವನಂಗೆ । ಕಾಂಬೆಯನೀ । ಮಾಡುದು
ಸರಿನಾ ಹೀಂಗೆ ॥ ಕೂಡಿದ ಕುದ್ರೆನ ಬುಡ್‌ಯ ನೀ
ಸುಮ್ಮನೆ । ಬೇಡಿಕ ಕಪ್ಪಕೊಟ್ಟ್ ॥ ೩ ॥

ನೋಡಿಕೆ ನೀನ್ ಕೂಡ । ಸೂರನ ಹಾಂಗೆ । ಮೋಡಿನೆ
ಮಾಡಿಯ ಗಡ ॥ ಮಾಡದೆ ಕಾಳಗ ಕುದ್ರೆನ ಸುಮ್ಮನೆ ।
ಬೇಡೊದೊಳ್ಳದೆಯ ನಿಂಗೆ ॥ ೪ ॥

ರಾಗ ಕೇದಾರಗೌಳ ಝಂಪೆತಾಳ

ಇಸ್ಟ್ ಹೇಳ್ದರು ಕೇಳದೇ । ಇರಿಕನಾ । ಬುಟ್ಟರೇ ನಿನ್ನ
ಹೋತೇ ॥ ಕೆಟ್ಟವನೆ ನಿಂಗೆ ನೋಡ್ । ಬಾಣನಾ ।
ಬುಟ್ಟೊಳೆಯ ತಡ್ದ್ ನೋಡ್ ॥ ೧ ॥

ಪುಡಿಮಾಡ್ತ್ ಬಾಣನೆಲ್ಲ । ವೀರಮಣಿ ।
ಎಡೆಲಿ ಕಡ್ದದರನೆಲ್ಲ ॥
ಹಿಡಿದ ಬಿಲ್ಲ್‌ನೆ ತುಂಡ್‌ನ । ಮಾಡ್ದಾಗ ।
ಬುಡ್ ಬಾಣಾಂತ ಹೇಳ್ತವ ॥ ೨ ॥

ಬೇರೆ ಬಿಲ್ಲ್‌ನ ಹಿಡ್‌ಕ್ಯೆಂಡ್ । ಪುಷ್ಕರವ ।
ಜೋರಾಗಿ ಬಾಣಬುಟ್ಟ್ ॥ ವೀರಮಣಿ ಮತ್ತೆ ಬಿಲ್ । ತುಂಡು
ಮಾಡ್ತ್ । ಬಾರಿ ಬಾಣನೆಲ್ಲ ಬುಟ್ಟ್ ॥ ೩ ॥

ಕೆದರಿ ಪುಷ್ಕರ ಕಯ್ಯಲಿ । ಕಡ್ತಲೆನ ।
ಬದಲ್ ಮಾಡಿ ಹಿಡಿದಾಗಲ್ಲಿ । ಇದ್‌ನಿಂಗೆ ಕಡೆಗಾಲಂತ । ಬಾ
ಕವನ । ಎದ್‌ರಾಗಿ ತುಂಡ್‌ಮಾಡ್ತಲ್ಲಿ ॥ ೪ ॥

ಕಡ್ತಲೆನ ತುಂಡ್ ಮಾಡಿರೆ । ಪುಷ್ಕಳನ್ ।
ಎತ್ತಿ ಗದೆ ಬಾಕೆ ಬಲಕೆ ॥
ಅತ್ತದರ ಎತ್ತಿ ತಲೆಗೆ । ಹೊಡಿಯಕನ ।
ಸುತ್ತಿತಲೆ ಬೀತ್ ನೆಲಕೆ ॥ ೫ ॥

ಭಾಮಿನಿ

ಕಣ್ಣ್ ಕತ್ತಲೆ ಬಂದ್ ಪುಷ್ಕರ ।
ಮಣ್ಣ್ ಮೇಲೆನೆ ಬೀತ್ ಶತ್ರುಹ ।
ನಿನ್ನ ಬುಡಿಕಿಲೆ ಬಾಯ ಅಂತವ ನಿಂತ್ ಎದ್ರ್‌ನಲಿ ॥
ಅಣ್ಣ ರಾಮನ ತಮ್ಮನಲ್ಲಯ ।
ನಿನ್ನ ಕೊಲ್ಲದೆ ಬುಟ್ಟೆ ಬುಟ್ಟರೆ
ಮಣ್ಣ್ ತಿನ್ಸುವೆ ನೀವ್ಗೆ ಅಂತವ ಬಾಣ ಹೊಡಿಯಕನ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಕಣ್ಣೆನ ಮುರ್ದ್ ವೀರ । ಮಣಿನೆ ಸಿಟ್ಟಿನಿಂದ ಹೇಳ್ತ್
ನೆನ್‌ಸ್ ಬೇಡ ಗೇಲ್ ನಿಂಗೆ । ಕನ್‌ಸಿನ ಮಾತ್ ॥ ೧ ॥

ಇರಿಕೆ ರಾಮ ಕರ್ಣ ನಂಗೆ । ಸರಿನೆ ನೀನ್ ತೆರಿವೆ ನಿನ್ನ ।
ಹೊರುವೊ ನೋಡು ನಿನ್ನ ಹೆಣನ ।
ಮೊರಿಯ ಬೇಡಯ ॥ ೨ ॥

ನರಮೊಯಿಂಸ ರಾಮ ಕರ್ಣ । ಇರಿಕೆ ನಿಂಗೆ ಏನ್ ಪಲಯ
ಹರನ ಕರ್ಣ ನಂಗೆ ಉಟ್ಟು । ಮೆರೆವ ಬಲಯ ನಾ ॥ ೩ ॥

ಯುದ್ದ ಮಾಡ್ರೆ ಬೇಕು ತಾಕ । ತಿದ್ದವಗೆನೆ ಸಾದ್ಯ
ಬಲಯ । ಸದ್ದ್ ಮಾಡ ಬೇಡ ನನ್ನ । ಸುದ್ದಿ ಬೇಡಯ ॥ ೪ ॥

ರಾಗ ಭೈರವಿ ಅಷ್ಟತಾಳ

ಹತ್ತ್‌ತಲೆಯ ರಾವಣ । ಕೊಂದದ್ ರಾಮ ।
ಶಕ್ತಿಯಿಂದಲ್ಲ ಬಲ ॥
ನಿತ್ಯ ದೈವದ ಬಲ ಸಿಕ್ಕಿತ್ ಕುರೆಗ ।
ಎನ್ತರ ಮಾಡ್ದೊ ಹೇಳ್ ॥ ೧ ॥

ಪಂಡ್ ಕಾಲಲಿ ನಡ್ದದ್ । ವಿಶ್ವಾಮಿತ್ರ ।
ಮಂಡೆ ಬೆಳ್ದವನಿದ್ದದ್ ॥
ದಂಡ್‌ಗೆದ್ರಾಗಿ ಕೌಶಿಕ ಮುನಿ ರೆಟ್ಟೆನೆ ।
ದಂಡ್‌ಗೆ ಸೇರೀಂತ ಹೇಳ್ತ್ ॥ ೨ ॥

ಗೊತ್ತಿಲ್ಲೆ ನಿಂಗೆ ನಹುಸ । ಈ ಲೋಕೆಲ್ಲ ।
ಇತ್ತಲ್ಲ ಅವನ ವಸ ॥
ಮುತ್ತಿತವನ ಕೀರ್ತಿ ಹಣೆಬರ ಇದ್ದಂಗೆ ।
ಬಿತ್ತಲ್ಲ ಹಾಳಾಗ್ಯವ್ ॥ ೩ ॥

ನಿನ್ನಂತ ಮೂರ್ಕ ಕೇಳ್ । ತಲೆಕೆಟ್ಟ್ । ಇನ್ನೆಂತ ಹೇಳ್ವು ನಿಲ್ಲ್ ॥
ಇನ್ನಾದ್ರ್ ಪೌವುರುಸ ಮೇಲ್ಂತ ತಿಳ್ಕನೀ ।
ಸಣ್ಣವನಾಗ ಬೇಡ ॥ ೪ ॥

ಕೊಟ್ಟ ಬಂದವ° ಕೇಳ್‌ಯ । ಮೊದುವೆಲಿ ತಾಳಿ ।
ಕಟ್ಟಿ ಸೀತಗೆ ಬಾಳ್‌ನ
ಕೊಟ್ಟನೆ ಅಂತೇಳಿ ಕಾಡಿಗೆ ಕಳ್ಸಿತ್ ।
ಕೊಟ್ಟ್‌ತ್ ಕಯ್ನ ರಾಮ ॥ ೫ ॥

ಭಾಮಿನಿ

ರಿಸಿನ ಆಸ್ರಮ ನೋಡಿ ಬಾಕೆಂ
ತ ಸರಿ ಸಮಯನ ಕೇಳ್ಕನತ್ತಿಗೆ
ಕುಸಿಲಿ ಹೋಗಂತವರ ಕೇಳ್ಸಿತ್ ಅಣ್ಣ ಕಾಡಿಗೆಯ ॥
ಮೊಸ್‌ರ್‌ನಲಿ ನೀ ಕಲ್ಲ್ ಹುಡುಕುದು
ಕುಸಲ್ ಅಲ್ಲಯ ರಾಮ ಕತೆನಾ
ಇಸಯ ಬುಡ್‌ನೀ ಕುದ್ರೆ ಕಳ್ಸಿಯ ಒಳ್ಳೆ ಮಾತಿಲಿ ನೀ ॥ ೧ ॥

ರಾಗ ಮಾರವಿ ಏಕತಾಳ

ಯೋಚನೆ ಮಾಡಿನೆ ಕಟ್ಟಿದೆ ಕುದ್ರೆನ । ಗ್ರಾಚಾರನ ನಿಂಗೇ ॥
ಬಾಚುವೊ ನಿನ್ನವ ಎಲುಮುಳ್ಳು ನೋಡ್‌ಯ ।
ಸೂಚನೆ ಕೊಟ್ಟ್ಹೊಳೆ ನಾ ॥ ೧ ॥

ತಾಕತ್ತಿದ್ದರೆ ಎತ್ತ್‌ಯ ಬಿಲ್ಲ್‌ನ । ನೂಕ್‌ಯ ನೀ ಬಾಣ ॥
ಹೋಕಾಲನೆ ಬಂದುಟು ನಿಂಗೆಯ ।
ಸಾಕಲಿ ಯಮ ನಿನ್ನ ॥ ೨ ॥

ಸಿಟ್ಟ್‌ಲಿ ವೀರನ್ ಬಾಣನ ಬುಟ್ಟ್‌ತ್ । ಕೊಟ್ಟತ್ ಶತ್ರುಹನ್ ॥
ಇಟ್ಟ್‌ಗುರಿಗೆ ಗುರಿ ಬುಟ್ಟೊಟ್ತ್ ಬಾಣನ ಜಗ ।
ಜಟ್ಟಿಗ ಕಾದಿದೊಯ ॥ ೩ ॥

ಆಗಲೆ ನೆಂಪಿಲಿ ಶತ್ರುಹ ಉಗ್ಗವ
ಸೋಗಲೆ ಮಾಡಿಕೊಟ್ಟ ॥
ಆ ಗಟ್ಟಿ ಶಕ್ತಿ ಬಾಣನ ತೆಗ್ದವ ತಾಗಿಕೆ ಬುಟ್ಟಾಗ ॥ ೪ ॥

ಭಾಮಿನಿ

ಜೋರು ಕಾಳಗ ನಡಿತ್ ಶತ್ರುಹ
ಬಾರಿ ಬಾಣನ ತಾಂಗಿಕಾಗದೆ
ವೀರಮಣಿ ತಾ ಕಳನ ಮದ್ಯೆಲಿ ಬೀತ್ ತಲೆಸುತ್ತಿ ॥
ಯಾರ್ ಬಂದವೆ ನೋಡುಕುಂತಲಿ ।
ಸಾರಿ ಶತ್ರುಹ ಮತ್ತೆ ನಿಂತತ್
ಬಾರಿ ದಂಡ್‌ನೆ ಹಿಂದೆ ಹೋಕನ ವೀರಮಣಿ ಕಡೆಲಿ ॥ ೧ ॥

ವಾರ್ಧಿಕ

ಶಿವನ ಹನ್ನೆರಡ್ ಕೋಟಿ ಗಂಡಗಣ ದಂಡ್‌ನಲಿ
ಅವು ಬಂದೊಗಡ ನಂದಿ ಬ್ರುಂಗಿ ಗಂಟಾಕರ್ಣ
ನವು ಮತ್ತೆ ಸುಘೋಷ ದಂಡಿ ದಂಸ್ಟ್ರೋಜ್ವಲ ದೂಮ್ರಕೇತ
ಕರಾಳ ॥
ಅವುಡ್ ಕಚ್ಚ್‌ತ ಬಂದ್ ಶತ್ರುಹನ ದಂಡೆಲ್ಲ
ತವುಡ್ ಕುಟ್ಟಿದ ಹಾಂಗೆ ಕುಟ್ಯೆಲ್ಲ ಪುಡಿಮಾಡಿ
ದವು ದಮನ ಸುಬಾಹುನ ದಂಡ್‌ಲಿರ್ದ ಎಲ್ಲರ್ನ ಬುಡದೆ
ಸಿಟ್ಟೆಲಿ ದೆವ್ವಗ ॥ ೧ ॥

ರಾಗ ದೇಶಿ ಅಷ್ಟತಾಳ

ಕಂಡ್ ಹನುಮನ್ ಸಿಟ್ಟಿಲಿ ದೆವ್ವಗ ।
ಪುಂಡ್ ಪುಂಡ್‌ಲಿ ಬಾಕೆ ಮರನಲಿ ತುಂಡ್ ಕಲ್ಲಲಿ ಕೊಟ್ಟೊತ್
॥ ೧ ॥

ಯಾರ್ ಕುರೆಯಾ ನೀ ಬಾರಿ ಮೆರ್ದಿಯ ನಿನ್ನ ।
ಊರ್ ಬುಡ್ಸುವೊ ನೋಡ್ ಅಂತಲಿ ತೆಗ್ದ್ ಸಬ್ಬಲ್ ಕುತ್ತಿದೊ
॥ ೨ ॥

ಆಗ ಹನುಮನ್ ಮುರ್ದ್ ಸಬ್ಬಲ್
ಹೋಗಿ ತಲೆಗೆನೆ ಗುದ್ದಿ ದೆವ್ವಗ ।
ಕೀರಿ ಕುತ್ತುವ ಹಾಂಗೆನೆ ॥ ೩ ॥

ಕೆಟ್ಟ ಕುರೆಯಿದ್ ನಿನ್ನ ಬುಡಿಕಿಲ್ಲೆಂತ । ಇಟ್ಟೊ ಬರ್ಚಿಲಿ ಒಂಕೆ ।
ಪೆಟ್ಟ್‌ಲಿ ಅಟ್ಟಿ ಹನುಮನ ದೆವ್ವಗ ॥ ೪ ॥

ಸುತ್ತಿ ಬಾಲಲಿ ದೆವ್ವಗ ಕಿರ್ಚಿರೆ
ಎತ್ತಿ ಕೈಲಾಸಕ್ಕೆ ಬಿಸಾಡಿತೆಲ್ಲ ಗಣಗಳ ಒಮ್ಮೆಲೆ ॥ ೫ ॥

ಭಾಮಿನಿ

ಓಡಿ ಹೋದವು ದೆವ್ವ ಬೂತಗ
ಮಾಡಿ ಯುದ್ದನ ಇವ್‌ನ ಕಯ್ಯಲಿ
ಕೇಡೆ ನಾವ್ಗೆಂದಂತಾಗ ಈರಬದ್ರನೆ ಎದ್ದ್ ಬಾತಂದ್ ॥
ಕೂಡಿನೆ ಗಣಗ ಸೂಲ ಹಿಡ್ದವ
ನೋಡಿ ದೆಸೆದೆಸೆ ಕಣ್ಣ್ ಕೆಂಪ್‌ನ
ಮಾಡಿ ಹೊರ್ಟಿರೆ ಬೂಮಿ ಬಾಯ್ಬುಟ್ಟಾಂಗೆ ಆತಲ್ಲಿ ॥ ೧ ॥

ರಾಗ ಮಾರವಿ ಏಕತಾಳ

ಬಾರಿನೆ ಪೌರುಸ ತೋರ್ಸ್ತ ಹನುಮನ್
ಈರಾಬದ್ರಾನ ॥
ಮೋರೆಗೆ ಗುದ್ದಿತ್ ಸಾವಿರ ಬಾರಿನೆ
ಮಾರಾಮಾರ್ಯಾತ್ ॥ ೧ ॥

ಕಟ್ವಾಂಗನ ಹಿಡಿಕ್ಯೆಂಡ್ ಈರಬದ್ರ
ಕುಟ್ಟಿತ್ ಮಾರುತಿನ ॥
ಅಸ್ಟಾಕನ ಪುಡಿಮಾಡ್ತ ಅವನೆದೆ
ಗಿಟ್ಸೊಟ್ತ್ ಸರಿಯಾಗಿ ॥ ೨ ॥

ಹನುಮನ ಗುದ್ದಿನ ಹೊಡ್ತಕೆ ಈರನ್
ಹೊಣ್ಕುತ ಬೂಮಿನಲಿ ॥
ಮಣಮಣ ಹೇಳ್ತ್ ಬೀಳ್ಕನ ಗಣದವು
ಮನೆಗೆನೆ ಹೋಕಾನ ॥ ೩ ॥

ಭಾಮಿನಿ

ಅಸ್ಟ್ ಹೊತ್ತಿಗೆ ನಾಲ್ಕ್ ದಿಕ್ಕಿಗೆ
ದೃಸ್ಟಿ ಹಾಕಿನೆ ನೋಡಿ ಶಿವ ತಾ
ಇಸ್ಟ್ ಹೊತ್ತಿಗೆ ಗಣಗಹೋದೋದೆಲ್ಲಿ ನೋಡಿಕನ ॥
ನೆಟ್ಟ ದೃಸ್ಟಿಗೆ ಯುದ್ದ ನಡ್ದದ್
ಕೆಟ್ಟ್ ಹೋದದ್ ಗಣಗಳೆಲ್ಲವು
ನೆಟ್ಟಗೆನೆ ಕಾಂಬಕನ ಸಿಟ್ಟಿಲಿ ಯುದ್ದಕೆದ್ರಾಗಿ ॥ ೧ ॥

ರಾಗ ಭೈರವಿ ಝಂಪೆತಾಳ

ಹತ್ತಿ ಬಸವನ ಮೇಲೆ ಎತ್ತಿ ತ್ರಿಶೂಲನಾ
ಸುತ್ತ ದಿಕ್ಕಿಗೆ ದೃಸ್ಟಿ ನೆಟ್ಟ್ ॥
ನೆತ್ತಿನಲಿ ಗಂಗೆ ತಿಂಗಳ ಮುಡ್ದ್ ಗಜ ಚರ್ಮ
ಸುತ್ತಿ ಸೊಂಟಕೆ ಹೊರ್ಟ್ತಾಗ ॥ ೧ ॥

ನನ್ನ ಭಕ್ತಂಗೆ ಎದರ್‌ನಿಂತವನ್ಯಾರ್ । ಅನ್ಯಾಯ ಮಾಡ್ದನಾರ್
ನಾವ್ಗೆ ॥ ನನ್ನ ಮಾವನಿವನಾನೊಳದವಂಗೆ ಗೊತ್ತಿಲ್ಲೆ ।
ಇನ್ನ್ ಬುಡಿಕಿಲ್ಲೆ ನಾ ಯಾರ್ನ್ನಾ ॥ ೨ ॥

ನಂಗ್ಯಾರ್ ಎದರ್ ಬಾವ್‌ಂವವನ ನೋಡ್ನೆ ನಾ
ಅಂಗಾರೆ ಇವನೇ ಶತ್ರುಹನೋ ॥
ಬಂಗಾತ್ ನಮ್ಮವ್ಕೆ ಶತ್ರುಹನೆ ಕಡೆಗಾಲ
ನಿಂಗಿನ್ನ್ ನೋಡು ನಾ ಹೇಳ್ದೆ ॥ ೩ ॥

ಅಶ್ವಮೇಧಕೆ ಕಪ್ಪ ತಾಕೆ ಬಂದವಗಡ
ಅಷ್ಟಕ್ಕೆ ಇಸ್ಟ್ ನಡೀತಿಲ್ಲಿ ॥
ಈಶ್ವರನೆ ನಮ್ಮಳಿಯನಂತ ನಂಬಿದ್ದೊ ಇವು
ವಿಶ್ವಾಸ ಇಟ್ಟರೇನಾತ್ ॥ ೪ ॥

ಅಳಿಯನಲ್ಲವ ಶರಣ ಅವಂಗೆ ಸೋಲಾಕೆ
ಉಳಿದವು ನನ್ನ ನಂಬುವೊನೋ ॥
ಉಳಿಗಾಲ ಅವಂಗಿಲ್ಲೆ ತೆರಿನೆವನ ಗಂಟ್ಲ್ ನಾ
ಅಳಿದ್ ಹೋಗಲಿ ಪಡೆಗ ಎಲ್ಲ ॥ ೫ ॥

ಪ್ರಳಯ ಕಾಲನ ರುದ್ರ ಆಗಿ ಶಿವ ಕೋಪನಲಿ
ಕಳನೊಳಗೆ ಹಣೆಕಣ್ಣ್ ತೆಗ್ದ್ ॥
ಪಳಪಳಾಂತ ಕಿಚ್ಚ್ ದಿಕ್ಕೆಲ್ಲ ಹಬ್ಬಿಕನ ಹ
ಕ್ಕಲೆ ಕರ್ದ್ ಶತ್ರುಹಗೆ ಹೇಳ್ತ್ ॥ ೬ ॥

ರಾಗ ಮಾರವಿ ಏಕತಾಳ

ಯಾರ್‍ಯಾ ಶತ್ರುಹ ನಾಯಾರ್‍ಂತಲಿ
ಯಾರಿಗೂ ಗೊತ್ಲೆನಯಾ ॥
ವೀರಮಣಿನ ನೀ ಸೋಲ್ಸಿಸಿದ ಬಲನಾ
ತೋರ್ಸ್ಯ ನನ್ನಲ್ಲಿ ॥ ೧ ॥

ಗೊತ್ತುಟು ನೀಯಾರ್‍ಂತಲಿ ನಂಗೆನೆ
ನಿತ್ತೊಳೆ ಯುದ್ದಕ್ಕೆ ॥
ಕ್ಷತ್ರಿಯ ಧರ್ಮದ ಹಾಂಗೆನೆ ಕುದುರೆನ
ಸುತ್ತಿಕೆ ಬುಟ್ಟೊಳದ್ ॥ ೨ ॥

ಹೇಳಿರೆ ಸುರುನಲಿ ನಂಗೆನೆ ಇದ ನಾ
ಹೇಳ್ವೆ ಮಾವಂಗೆ ॥
ಕಾಲಿಗೆ ಬೀಳ್ಸ್‌ತ ಕಪ್ಪನ ಕೊಟ್ಸುವೆ
ಆಲಚನೆ ಮಾಡೊಕುಯ ॥ ೩ ॥

ಭಕ್ತರ ಕಾಪಾಡುವ ನೀನಾದರೆ ಶಕ್ತಿನ ತೋರ್ಸದನೆ ॥
ಯುಕ್ತಿಲಿ ಕಪ್ಪನ ಕೊಡ್ಸುತ ದರ್ಶನ
ಇತ್ತರೆ ಆಗಿತ್ತ್ ॥ ೪ ॥

ಏನಿಯ ಮಾತಾಡ್ದೇನಿಯ ಸದರನ
ಏನಿಯ ತೋರ್ಸಿಯ ನೀ ॥
ಕಾಣಕೆ ಇಲ್ಲೆನೋ ಇದ್ ತ್ರಿಶೂಲಯ
ಹೂಣುವೆ ನಾ ಎದೆಗೆ ॥ ೫ ॥

ರಾಮನ ಕರುಣೆಗ ಇದ್ದರೆ ನಂಗೆನೆ
ಮಾಮುಲು ಇದ್ ಎಲ್ಲ ॥
ಸ್ವಾಮಿಗ ಬಂದೆರಿ ಬಾಣನ ಬುಟ್ಟೊನೆ
ಏನ್ಮಾಡೋಕಾದೇ ॥ ೬ ॥

ಭಾಮಿನಿ

ತರತರನ ಮಂತ್ರಾಸ್ತ ಬುಡುತಲಿ
ಇರಿಕೆ ಈಶ್ವರ ಶತ್ರುಹರ್ ಇ
ಬ್ಬರೊಳಗೆ ನೆಡಿತ್ ಬಾರಿ ಕಾಳಗ ಮತ್ತೆ ಶಿವನಾಗ ॥
ಕೆರಳಿ ಕಯ್ಯಲಿ ಪರಿಗನಲಿ ಹೊಡೆ
ದುರಳಿಸಿತ್ ಶತ್ರುಹನ ಮುಂದಕೆ
ಬರುವನಾರ್ ನಾ ನೋಡೊಕುಂತಲಿ ಕಾದ್ ನಿಂತಿತ್ತ್ ॥ ೧ ॥

ರಾಗ ದೇಶಿ ಅಷ್ಟತಾಳ

ಯಾರ್ ಕೊಂದವು ನಮ್ಮ ಪುಷ್ಕರ ಶತ್ರು
ಹಾರ ಬುಡಿಕಿಲೆ ನಿನ್ನ ಅಂತಲಿ ಹನುಮ ಯುದ್ದಕ್ಕೆ ಬಾತ್ಯ॥೧॥

ಕುದ್ರೆನೊಟ್ಟಿಗೆ ನಮ್ಮ ಕಳ್ಸುವ ದಿನ
ಎದ್ರ್‌ನಲಿ ಕರ್ಸ್‌ತಲಿ ಸೀತಾರಾಮ ಹೇಳಿಕೆ ಕೊಟ್ಟದ್ ॥ ೨ ॥

ಸೀತೆನ ಹುಡುಕಿ ಲಂಕೆನ ಸುಟ್ಟವ
ಆತ್ ನೀನಂಗತಿ ಪ್ರೀತಿಯ ಭಕ್ತನೆಂತಲಿ ಮಾತಿಗೆ ॥ ೩ ॥

ನಿನ್ನ ಬಲನ ನಂಬಿ ಕಳ್ಸಿನೆ
ನನ್ನ ಪ್ರೀತಿನ ತಮ್ಮ ಶತ್ರುಹನೊಟ್ಟಿಗೆ ಸೈನ್ಯನ ನೋಡಿಕಾ ॥ ೪ ॥

ತಮ್ಮ ಏನಾತ್ ಅಂತನೆ ಹೇಳಿರೆ
ಒಮ್ಮೆಗೇನಿಂತಿದರ ಹೇಳ್ದುದಿಯ ಎಂತ ಮಾಡುದು ಇನ್ನ್ ನಾ॥೫॥

ಭಾಮಿನಿ

ತಟ್ಟಿ ಪುಡಿಮಾಡಿನೆಯ ಲೋಕನ
ಕೆಟ್ಟ್ ಹೋದವ್ ಯಾರ್ ಶತ್ರುಹ
ನೊಟ್ಟು ಬಂದರ ಅವನ ಕೊಂದನ್ ದಯ್ರ ಇದ್ದರವ ॥
ದೃಸ್ಟಿನಲಿ ಕಾಂಬೋಕು ಹೇಳ್ಕನ
ಅಟ್ಟಹಾಸದಲಿ ಶಿವನ ಶೂಲನ
ಇಟ್ಟ್ ಗುರಿನಲಿ ಬಾತ್ ಹನುಮವ್ ಎದ್ರ್ ಕಳನೊಳಗೆ ॥ ೧ ॥

ರಾಗ ಭೈರವಿ ಅಷ್ಟತಾಳ

ಈಶ ನೀನಾಗಿರಿಕೆ । ಸುಮ್ಮನೆ ಈಗ । ದ್ವೇಷ ಮಾಡ್ದದ್ ಎಂತಕೆ
ಬಾಷೆ ಇಲ್ಲೆಯೊ ನಿಂಗೆ ಹೀಂಗೆ ಮಾಡಿಕೆ ಆದೋ । ಹೇ ಶಿವ
ಅಂತ ಕೇಳ್ತ್ ॥ ೧ ॥

ಯುದ್ದಕೆ ಶತ್ರುಹನೆ । ಬಾಕೆ ನಾನೆ । ಎದ್ದದ ಬಂದದ್
ಬೇಗನೆ ॥ ಒದ್ದ್ ಅವನ ನಿಲ್ಗಿಸ್ಯೊಳೆ ನೋಡು ನಿಂಗೇನ್ ।
ಬಿದ್ದದೆ ನೋಡು ಈಗ ॥ ೨ ॥

ಸೀತಮ್ಮನ ಗಂಡಂಗೆ ನೀ । ಕಸ್ಟನ ಕೊಟ್ಟ್ । ಗಾತಿನ ಮಾಡಂವಂ
ನೀ ॥ ಕ್ಯಾತಿಲಿ ನೀನೊಬ್ಬ ಮೂರ್ಮೂರ್ತಿ ಆಕನ ।
ಯಾತರ ಧರ್ಮ ಇದ್ ॥ ೩ ॥

ಮಲೆಮಂಗನಾಗಿ ನೀಯ । ಕಾಡ್‌ಲಿ ಇರದೆ । ಕಳನಲಿ ಯು
ದ್ದಕೆಯ ॥ ಗೆಳೆತನ ಮೊಯಿಂಸರೊಟ್ಟಿಗೆ ನಿಂಗೆ ರಾಮನ ।
ಬಲುದೊಡ್ಡ ಭಕ್ತ ಗಡ ॥ ೪ ॥

ಗೊತ್ತೊ ನಿಂಗೆಯ ರಾಮನ । ದೊಡ್ಡ ಭಕ್ತನಾ ।
ಸತ್ಯನೆ ಹನುಮಂತ ನಾ ॥
ಮತ್ತೆ ದಂಡ್‌ಗೆ ರಕ್ಷಣೆ ಕೊಡುಕುಂತಲೆ । ಇತ್ತ ನಾ
ಬಂದ್‌ದ್‌ಯ ॥ ೫ ॥

ಶೂರನೀನಾಗಿರಿಕೆ । ಈತರ ಜೀತ । ಬೇರೆ ಜನಕೆ ಮಾಡಿಕೆ ॥
ಯಾರ್‌ಗೆ ಮೊನ್ಸ್ ಬಂದದೆ ನಿನ್ನ ನೋಡಿರೆ ।
ಬಾರಿ ನೆಗನೆ ಬಂದದೆ ॥ ೬ ॥

ವೀರಮಣಿನ ಪುರಲಿ । ನಿತ್ತೊಳದ್‌ನೀ । ಯಾರ್‌ಗಾಗಿ
ಹೇಳ್ಕತ್ತಿಲ್ಲಿ ॥ ಬಾರಿ ಸೇವೆನ ಮಾಡ್ದು ಯಾರ್ಗೂ ಗೊ
ತ್ತಿಲ್ಲೆನೋ । ಊರಲ್ಲೆ ನೀನಿಲ್ಲೆನೊ ॥ ೭ ॥

ಶರಣಗ ಇದ್ದಲ್ಲಿ ನಾ । ಇದ್ದುಯಾ । ಅರಸ
ಇವಂ ಭಕ್ತ ನನ್ನ ॥ ವರ ಕೊಟ್ಟ ರೀತಿಲಿ ಇರುದು ನಾ
ಗೊತ್ತೊಯಾ । ಕುರೆನಿಂಗೇನ್ ಗೊತ್ತು ॥ ೮ ॥

ರಾಗ ಮಾರವಿ ಏಕತಾಳ

ರಾಮನ ಬಂಟನೆ ಹನುಮಂತನ್ ನಾ
ಭೂಮಿಲಿ ನನ ಬಿರುದು ॥
ನೇಮಲಿ ಅದ ನಿಲಿಸಿಕೆ ಬಂದೊಳೆ ನಾ ।
ಸಾಮರ್ಥ್ಯನ ತೋರಿ ॥ ೧ ॥

ಯಾರಾ ಬಂಟನೆ ಆದರೆ ಏನ್‌ಯಾ
ಮಾರಿಕಳನ ಮಾಡಿ ॥
ಈ ರೀತಿಲಿ ಜನಗಳ ಸಾಯ್ಸಕೆ
ಯಾರ್ ನಿಂಗೆ ಹೇಳ್ಯೊಳಯ ॥ ೨ ॥

ಯಾಗೊಳು ರಾಮನ ಭಜನೆನೆ ಮಾಡಿನೆ
ಈ ಗೆತಿ ಶತ್ರುಹಗೆ ॥
ಆಗ್ಯುಟು ಅಂತೇಳ್ಕನ ನಾ ಬಂದೊಳೆ
ಸಾಗದ್ ನಿಮ್ಮಾಟ ॥ ೩ ॥

ತ್ರಿಪುರರ ಹಿಂದೆನಾ ಕೊಂದದ್ ಗೊತ್ತುಟ
ಉಪದ್ರ ಮಾಡ್ಡವರ ॥
ತ್ರಿಪುರಾರಿನೆ ಆಗುವೆ ನಿಂಗೆನು ಕುರೆ
ಅಪದಸೆ ನಿಂಗಿನ್ನ್ ॥ ೪ ॥

ಕಡಲಿಗೆ ಪಾಲನ ಕಟ್ಟಿದ ಕಾಲಕೆ
ಬುಡಕೆನ ಕೈಹಾಕಿ ॥
ಹಿಡಿಯಕೆ ಕೈಲಾಸನ ಅರ್‌ನ್ಜಿದೆ ನೀ
ಬಡಾಯಿ ಬುಡ್‌ಬೇಡ ॥ ೫ ॥

ರಾಗ ಕೇದಾರಗೌಳ ಝಂಪೆತಾಳ

ಹಿಂದೆ ರಾಮನ ಕಾರ್ಯಕೆ । ಅಂತ ನೀ । ಅಂದ್ ಲಂಕಗೆ
ಹೋಗಕೆ ॥ ಸೊಂದಿ ಬೀಲಕೆ ಬಟ್ಟೆನಾ । ಸುಟ್ಟೊಳೊ ।
ಇಂದ್ ನೀ ಮರ್ರೊತ್ತಳದನಾ ॥ ೧ ॥

ಮೊರ್ಲ ಭಸ್ಮಾಸುರಂಗೆ । ವರಕೊಟ್ಟ್ । ಹುಲ್ಲು ಹುಟ್ಟದೆ
ಓಡಿಕೆ ॥ ಪೊರ್ಲು ಮೋಹಿನಿ ಕಾದದ್ । ಗೊತ್ಲೇನ ।
ಇಲ್ಲದೇನದ್ ಹೇಳುದು ॥ ೨ ॥

ಯಾರಾರ ತೋಟಕೆಲ್ಲ । ಹಾರಿಬಂದ್ । ಜೇರ್‌ಕಾಯಿ
ಹಣ್ಣ್‌ನೆಲ್ಲ ॥ ಮೋರೆ ಕೋಂಗಿನೆ ಮಾಡ್ತ । ಕಿತ್ತ್‌ತಿಂಬ ।
ಯಾರ್‌ಯಾ ಕುರೆ ಹೋಗತ್ತ ॥ ೩ ॥

ಕೊಳ್ತ ವಾಸನೆ ಹರ್ಡ್ವ । ಚರ್ಮನ । ಹೊಲ್ದ್ ಸೊಂಟಕೆ
ಕಟ್ಟ್‌ವ್ ॥ ಬೊಳ್ದು ಭಸ್ಮನ ಸೈಯರಕೆ । ಹೋವಂತ ।
ಜಲ್ಮ ನಿನ್ನದ್ ಹೇಳಿಕೆ ॥ ೪ ॥

ಸ್ವರ್ಗ ಲೋಕನ ಮುತ್ತುತ । ಅಂಧಕಾ । ಇರ್ಕೆ ಗರ್ವನ
ತೋರ್ರುತ ॥ ಬಕ್ಕೆ ಹಲ್ಸ್‌ನ ಸೀಳ್ದಂಗೆ । ಸೀಳ್ಯೊಳಿ ।
ದಿಕ್ಕೆ ನೀನೇಳ್ವೆಯ ॥ ೫ ॥

ಎಲ್ಲ ಗೊತ್ತುಟುಯ ನಂಗ್ । ಗಂಗೆನ । ಮೆಲ್ಲ ನೆತ್ತಿ
ಮೇಲೆ ಹಂಗ್ ॥ ಒಳ್ಳೆ ಆಸನ ಕೊಟ್ಟುನೀ । ಕುದ್ರಿಸ್ಯೊಳ ।
ಮಲ್ಲ ಹೌದುಯ ಅಲ್ಲಿ ನೀ ॥ ೬ ॥

ಭಾಮಿನಿ

ದೊರೆ ಭಗೀರಥ ಮಾಡ್ದ ತಪಸಿಗೆ
ಕರಗಿ ನಾ ಪ್ರತ್ಯಕ್ಷನಾಗಿನೆ
ಹರ್‌ಸಿದೆಯ ಆಕಾಶ ಗಂಗೆನ ಭೂಮಿ ಕಡೆಗಂದ್ ॥
ಬರುವ ಬರಕದ್ ಭೂಮಿ ಒಡ್ಯದೆ
ಇರದ್ ಅಂತಲಿ ಜೆಡೆಲಿ ಕಟ್ಟಿದೆ
ಕುರೆಯ ನಿಂಗೇನ್ ಗೊತ್ತುಟು ಬಲಾ ಸುಮ್ಮನಿರ್ ನೀಯಾ॥೧॥

ರಾಗ ಶಂಕರಾಭರಣ ಮಟ್ಟೆತಾಳ

ಸುಮ್ಮನೇಕೆ ಹರ್ಟೆ ಹೊಡಿದು । ಇನ್ನ್ ಮಾತಿಗರ್ತ ಇಲ್ಲೆ ।
ಒಮ್ಮ ನೋಡು ಎಂದ್ ಮರಲಿ । ಮರ್ಮಕಿಟ್ಟ್‌ತ್ ॥ ೧ ॥

ಬಂದ ಮರನ ಪುಡಿನೆ ಮಾಡಿ ।
ಅಂದ್ ಶಿವನ್ ಶೂಲಚುಚ್ಚಕೀಶ ।
ನಿಂದ ಎಳ್ದ್ ಹನುಮನಾಗ । ಎತ್ತಿ ಎಸಿತದ ॥ ೨ ॥

ಕೊಡ್ಲಿ ತೆಗ್ದ್ ಹನುಮ ತಲೆಗೆ ।
ಮಡ್ಗೊಕುಂತ ಶಿವನ್ ನೇಚಿರೆ ।
ಹೊಡ್ಡ ಸಮಯ ಕದರತೆಗ್ದ್ ಪುಡಿನೆ ಮಾಡ್ತವ ॥ ೩ ॥

ಬಾರಿ ಜೋರು ಒಳಯ ನೀನ್ ।
ಯಾರ್ ನಿನ್ನ ಕಾವೊ ನೋಡ್ನೆ ॥
ವೀರನಾಕೆ ಇದರ ತಾಳ್ಗುರಾಣಿ ಹೊಡ್ತನ ॥ ೪ ॥

ರಾಗ ಭೈರವಿ ಏಕತಾಳ

ಇನ್ನ್ ನಾ ಬುಡಿಕಿಲೆ ನಿನ್ನ । ಶಿವ । ನನ್ನ ತಿಳಿಯ ಬಲನ ॥
ಮಣ್ಣ್‌ನೆ ಮುಕ್ಸುವೆ ಅಂತ । ಕೈ । ಯಿನ್ನವ ಎತ್ತಿತ್ ಬಿಗ್ದ್ ॥ ೧ ॥

ಸಿಡ್ಲಂಗೆನೆ ಹೊಂಕರಿಸಿ । ಶಿವ । ಕಡೆಕಣ್ಣಲಿ ಕಿಡಿ ಸೂಸಿ ॥
ಹೊಡ್ದ್ ಬುಡಿಕೆ ಕಟ್ವಾಂಗ । ಹಲ್ಲ್ । ಕಡ್ದೆತ್ತಿತ್ ಕಾಂಬಾಗ ॥ ೨ ॥

ಹನುಮನದರ ನೋಡಿಕನ । ಇನ್ನ್ । ಜನುಮಕೆ ಸಾಕ್‌ಂತವನ ।
ಹೊಣ್‌ಕಿಸಿ ಪರ್ವತ ಕಿತ್ತ್ । ಹೊಡಿ । ಕನ ದೂಳೆಲ್ಲೆಲ್ಲಾತ್ ॥ ೩ ॥

ಭಾಮಿನಿ

ಬಾರಿ ಯುದ್ದನ ಮಾಡಿಕ್ಯೇಕನ
ಬಾರದಿದರ್‌ಲಿ ಜಯನೆ ಇಬ್ಬರಿ
ಗ್ಯಾರಿಗಾದರ್ ಸಾವು ಬಾಕಿಲೆ ಕಂಡಿಂತಾಂತಾಗ ॥
ಸೂರತನ ಬುಟ್ಟಲ್ಲಿ ನೆಮ್ಮದಿ
ಸೇರಿ ಕುಸಿಯಲಿ ಹನುಮನ ಕರಿತ
ಮೂರಹರ ಶಿವ ಹೇಳ್ತ್ ಕರ್ಣಲಿ ಎಲ್ಲ ಕೇಳ್ವಂಗೆ ॥ ೧ ॥

ರಾಗ ಮಧುಮಾಧವಿ ತ್ರಿವುಡೆತಾಳ

ಬಾಯ ನೀ ಶ್ರೀರಾಮ ದಾಸಯ
ಬಾಯನೀ ಮಾರುತನ ಮಜ್ಜನೇ
ಬಾಯ ನೋಡಿಲಿ ಶತ್ರುಹನ ನೀ
ಬಾಯ ವೀರಮಣಿನ ನೋಡ್ ॥ ೧ ॥

ಯಾರಿಗೀ ಕಾಳಗಯ ನಮ್ಮಲಿ ।
ಯಾರಿಗೂ ಜಯ ಸಿಕ್ಕಿಕಿಲೆ ಬಲ ।
ಮೂರು ಕಲ್ಪನು ಕಳೆದ್ ಹೋದರು ।
ಸಾರಿ ಹೇಳಿನೆ ಕಂಡಿತ ॥ ೨ ॥

ಒಲಿದೆ ಕೇಳ್ನಾ ನಿನ್ನ ಶಕ್ತಿಗೆ
ಚಲನ ಬುಡ್ನೀ ಕೊಡುವೆ ವರ ನಾ ।
ಬಲನ ತೋರ್ಸುದು ಬೇಡ ಹೇಳ್ಕನ ।
ಚಲಬುಡುತ ಹನುಮಂತ ಹೇಳ್ತ್ ॥ ೩ ॥

ರಾಗ ಸುರುಟಿ ಏಕತಾಳ

ವರ ಯಾಕೇ ನಂಗೇ । ರಾಮನ । ಕರುಣೆನೆ ಸಾಕ್ನಂಗೆ ॥
ಇರುವೆ ನ ನಿನ್ನಾ ಹಂಗ್ನಂಗ್ಯಾಕೆಯ ।
ಸರಿ ನೀ ಸುಮ್ಮನೆ ಬಂದಲ್ಲಿಗೆ ಶಿವ ॥ ೧ ॥

ಸಿಟ್ಟ್ ಬೇಡಯ ಹನುಮ । ವರನಾ ।
ಕೊಟ್ಟುಬುಡುವೆ ಜಾಣ ॥
ಇಸ್ಟಾ ಬಂದರ ಮೊನ್ಸಿನ ಬಯ್ಕೆನ । ಕೊಟ್ಟುಬುಡುದು
ನನ್ನ ಬಿರುದಗ ಕೇಳ್ಯ ॥ ೨ ॥

ಯುದ್ದಲಿ ಸತ್ತವರ । ಬೊದ್ಕಿಸ್ ।
ಮೊದ್ದನೆ ತಂದವರ ॥
ಇಂದ್ ನೀನಲ್ಲದೆ ತಾವವು ಒಳನಯ ॥
ಮೊದ್ದ್ ಸಂಜೀವಿನಿ ಬೇರ್ಗಳೆಲ್ಲನ ॥ ೩ ॥

ಆಗಲಿ ಮತ್ತೇನ್ । ತಾವೆ ನ । ಈಗಲೆ ಮೊದ್ದ್ನಾ ॥
ಹೋಗುಕು ದ್ರೋಣಾ ಪರ್ವತ ಕಡೆಗೆನೆ ।
ಈಗಲೆ ಇಲ್ಲಿನ ಹೆಣನೆಲ್ಲ ಕಾಯೊಕು ॥ ೪ ॥

ಬಿದ್ದುಟು ಹೆಣರಾಶಿ । ಇದ್ರಲಿ । ಇದ್ದಾಂಗೇನೇ ಇರಿಸಿ ॥
ಇದ್ದರ ಹಾಂಗೆನೆ ನೋಡೋಕು ಇಲ್ಲಿನೆ । ಎದ್ದ್ನೀ
ಹೋಗಿಕೆ ಬೊತ್ತುಯ ಇದೆ ವರ ॥ ೫ ॥

ಆತ್ ಬಲಯ ಅಂತಾ । ಹೇಳಿಕೆ । ವಾತಾತ್ಮಜ ಹಾರ್ತಾ ॥
ಬಾತಾ ದ್ರೋಣಾ ಪರ್ವತ ಹಕ್ಕೆಲೆ ।
ತಾತಾಗಲೆ ಸಂಜೀವಿನಿ ಮೊದ್ದುನ ॥ ೬ ॥

ಭಾಮಿನಿ(ಅರ್ಧ)

ಹನುಮ ತಾಕನ ಸಂಜೀವಿನಿಯ ಕ
ಡ್ಡಿನ ಸಂಸಯಲಿ ಶಿವ ತಾ ಕೇಳ್ತ್
ಹೆಣಗಳೆಲ್ಲಕೆ ಮತ್ತೆ ಜೀವನ ಕೊಡಿಕೆ ನಿಂಗಾದೋ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ನಮ್ಮ ಕಡೆ ಜೆನನಲ್ಲದುಳಿದರ
ನಿಮ್ಮ ಮಾವನ ಪಡೆಗೆ ಮೊದ್ದುನ
ಸುಮ್ಮನೇತಕೆ ಕೊಡುಕು ನಾ ಶಿವ । ಸುಮ್ಮನಿರ್‌ಯಾ ॥ ೧ ॥

ಹನುಮ ನೀ ವೀರಮಣಿನ ಕಡೆನ
ಜೆನಕೆ ಸಂಜೀವಿನಿನ ಕೊಡದಿ
ರ್ಕನ ಬರದಿರ್ದು ಕುದ್ರೆ ಕಪ್ಪನು । ಎಣಿಸಿ ನೋಡ್ ॥ ೨ ॥

ಆತ್ ಎಲ್ಲರ ಬೊದ್ಕಿಸಿನೆ ನಾ
ಮಾತ್ ಕೊಟ್ಟರೆ ಸಾಕ್ ಹೇಳ್ಕನ
ಬಾತ್ ರಾಮಾಂತಾಕೆ ಹೋವೆಂ । ತಾತ್ ಮಾತ್ ॥ ೩ ॥
ಶಕ್ತಿ ಬಾಣನ ಕೊಟ್ಟು ಯೋಗಿನಿ ಶತ್ರುಹಗೆ ಹೇಳಿಟ್ಟು ರಾಜಗೆ
ಭಕ್ತಿ ಬಾದುಯ ರಾಮ ಮೇಲೆಂ । ದಿತ್ತ ಕೇಳ್ ॥ ೪ ॥

ನೆಲಕೆ ಬಿದ್ದ್ ಅದರ ಬಲನಲಿ ಚಲನ ಬುಡ್ಡವ ಮತ್ತೆ ಬೊದ್ಕಿರೆ
ಕಲಿದು ರಾಮನ ಭಕ್ತಿ ಇದರಲಿ । ಒಲಿವ ನಾವ್ಗೆ ॥ ೫ ॥

ಬರ್ಸ್ ರಾಮನ ಇಲ್ಲಿಗೀಗಲೆ ನೆನ್ಸ್ ರಾಮನ ಪಾದ ಮೊನ್ಸಿಲಿ
ಕನ್ಸ್‌ನಂಗೆನೆ ಎದ್ದ್ ಬುಡುವೊಯ ಸತ್ತರೆಲ್ಲ ॥ ೬ ॥

ಅಕ್ಕ್ ಹಾಂಗೆನೆ ಮಾಡ್ನೆನಾಂತಲಿ ತಕ್ಸಣನೆ ಹನುಮಂತ ರಾಮನ
ಸೂಕ್ಷ್ಮ ಧ್ಯಾನನ ಮಾಡಿತಾಗಲೇ ಕಣ್ಣ್ ಮುಚ್ಚಿ ॥ ೭ ॥

ರಾಗ ಮೋಹನ ಛಾಪುತಾಳ (ಮಿಶ್ರ)

ಇವರಾರು ನಿನವಿನಾ ಸೇವ್ಯರು ನಮಗೆ
ಸವನ ರಕ್ಷಕ ನಿತ್ಯೋತ್ಸವ ಸೀತಾಪತಿ ॥ ಪ ॥ ಇವರಾರು ॥
ಬಾರದಾ ದಯೆ ಕೇಳಲಾರದಾ ನನದನಿ
ಮುರವೈರಿಗೈದೆ ದಯೆ ಬಾರದಾ
ಇದು ಮರಿಯಾದೆಯಾ ಎನ್ನೊ
ಳ್ಪಾದವೇ ಭೇದ ಬೇಡವೋ ॥ ಇವರಾರು ॥ ೧ ॥

ಬಾರದಿಹುದು ನ್ಯಾಯವೇ ಪ
ರಾಕೇ ನಾನೆಂದರಿಷ್ಟು ಹೇಯವೇ ರಾಮಾ

ರಾಕಾ ಶಶಿಮುಖಿ ನಿನಗಾಗಿಸುವೆ ನೀ
ಸಾಕೆನ್ನನೆಲೆ ಪುಣ್ಯಶ್ಲೋಕನೇ ನಮಗೆ ॥ ಇವರಾರು ॥ ೨ ॥

ರಾಜಾಭಿಮಾನ ನಿನಗೇತಕೋ ತ್ಯಾಗ
ರಾಜಾರ್ಚಿತ ತಾಳಜಾಲವೋ
ಈ ಜಾಲವು ಸರಿಯಲ್ಲ ರಾಜಾಪಾಲ ಸಂ
ಕೋಚವೇ ಸುರಭೂಜನೇ ನಮಗೆ ॥ ಇವರಾರು ॥ ೩ ॥

ಭಾಮಿನಿ

ಹನುಮ ಭಕ್ತಿಗೆ ಮೆಚ್ಚಿ ರಾಮನ್
ಚಣಕೆ ಕಣ್ಣಿಗೆ ಕಾಂಬಕನ ಕಾ
ಲ್‌ನ ಬುಡಕೆ ಜಯ ಜಯ ಜಯಾ ಜಯ ಎಂದ್ ಬೀತಾಗ॥
ನೆನೆದ್ ರಾಮನ ಶಿವನ್ ಭಕ್ತಿಲಿ
ಕೊನೆತನಕ ನಡೆದ್‌ದ್‌ದರ ಸಂಜೀವಿನಿನ ತಂದರ ಹನುಮ
ಹೇಳ್ಕನ ಕೇಳಿ ರಾಮಾಗ ॥ ೧ ॥

ರಾಗ ಸುರುಟಿ ಏಕತಾಳ

ಕುಸಿಯಲಿ ಹನುಮಾನ । ಮನ್ನಿಸಿ । ದಶರಥ ಮಜ್ಜ ರಾಮಾ ॥
ಶಶಿಧರನೊಟ್ಟಿಗೆ ಕುಸಲ್‌ನ ಮಾಡ್‌ತ ।
ದೆಸೆ ಎಲ್ಲಾ ನೋಡಿ ಹನುಮನ ಕರ್ದ್‌ನೆ ॥ ೧ ॥

ದಂಡ್‌ಲಿ ಸತ್ತವರ । ಎಬ್ಬಿಸ್ । ಪಂಡಲಿದ್ದಂಗವರ ॥
ಕಂಡಲಿ ಆನೆ ಕುದುರೆನೆ ಬಿದ್ದೊಳೊ ।
ಹಿಂಡೋಕೆಲ್ಲಕು ಸಂಜೀವಿನಿ ನೀ ॥ ೨ ॥

ಕೇಳ್ತ ಹನುಮಂತಾ । ಸತ್ತರ । ಬಾಳೊಕು ಅಂತೇಳ್ತಾ ॥
ಏಳ್‌ಯೋಜನದಳೆತನ ಕಳನಲಿ ।
ಸಾಲಾಗಿ ಬಿದ್ದವ್ಕೆಲ್ಲಾ ಮುಟ್ಟ್‌ಸ್ತ್ ॥ ೩ ॥

ವಾರ್ಧಿಕ

ನಿದ್ರೆಂದ ಎದ್ದ್ ಕುದ್ದ ಹಂಗೇನೆ ದಂಡ್‌ನವು
ಎದ್ದೆಲ್ಲ ಗರ್ಜನೆನ ಮಾಡಿ ಹಗೆ ಎಲ್ಲಿ ಸ
ತ್ತಿದ್ದೊ ಬುಡಿಕಿಲೇಂತವರ ಹುಡುಕಿರೆ ಶತ್ರುಹನವು ರಾಮ
ಕಾಲ್ಗೆ ಬಿದ್ದೊ ॥
ಮೊದ್ದರಿವೆ ರಾಮನ ದಂಡ್‌ಗೆ ವೀರಮಣಿನಾ
ಯುದ್ದ ಮಾಡಿನೆ ಅಂತ ಮುಂದರಿಕನ ಶಿವನವಗೆ
ಬುದ್ಧಿ ಹೇಳಿ ಸಮಾದಾನ ಮಾಡ್‌ತ ನೋಡ್ ರಾಮನಂತವಗೆ
ತೋರ್ಸಿಕನ ॥ ೧ ॥

ಭಾಮಿನಿ

ಬಾರಿ ಘೋರ್ಲ್ರುನ ರಾಮ ಮೂರ್ತಿನ
ದೂರದಲೇ ಕಾಂಬಕನ ಕಣ್ಣಲಿ
ನೀರ ಬಂದ್‌ತ್ ವೀರಮಣಿಯರಸಂಗೆ ಅಚ್ಚರಿಲಿ ॥
ತೀರದಿಂತರ ಕಣ್ಣ್ ನೋಡಿಕೆ
ಮೂರು ಲೋಕನೆ ಹೊಟ್ಟೆಲಿರುದೇ
ನ್ಯಾರಿಗದ್ ತಿಳ್‌ಕ್‌ಂಬಕೆ ಸಾದ್ಯ ಇಲ್ಲೆಂತಾಗ ನಿಚ್ಚಯಲಿ ॥ ೧ ॥

ರಾಗ ಅಗೇರಿ ಆದಿತಾಳ

ದಶರಥ ಅರಸುಮಜ್ಞ । ಕೋದಂಡ ಪಾಣಿ । ದಶಶಿರನ
ತಲೆತೆಗ್ದವ° ॥ ಶಶಿಮುಖಿ ಸೀತೆನ । ಗಂಡನೀ ರಾಮನೆ ।
ದೆಸೆಯೆಲ್ಲ ಹೊಗಳ್ವಂತ । ಹೆಸರಾದ ರಘುರಾಮ ॥ ೧ ॥

ಬಂದತ್ ಕುದ್ರೆ ಇತ್ತ । ಕಟ್ಟಿದೊನಾವು । ನಿಂದೊ ಯು
ದ್ದಕೆ ನಿಮ್ಮತ್ತ ॥ ನಿಂದನೆ ಮಾಡ್ಯೋಳೊ । ಸರಿಯಾಗಿ ನಿಂಗೆ
ನಾವ್ । ಇಂದ್‌ನೀ ಕ್ಷಮಿಸೋಕು । ವಂದನೆ ಮಾಡಿನೆ ॥ ೨ ॥

ಮೋಕ್ಷನ ಕುಡೋಕು ನಂಗೇ ಸರ್ವಾತ್ಮಕ । ಶಿಕ್ಷೇನ್ ಬೇಡ
ನಂಗೆ ॥ ಅಕ್ಷಯ ಆಗಲಿ ಪುಣ್ಯಗ ದೇವ । ನಾಶನೆ ಆಗಲಿ
ಪಾಪಗ ನನ್ನ ॥ ೩ ॥

ನೀನೆ ಪರಮಾತ್ಮ ಶಿವ । ವಿಷ್ಣುನು ನೀನೆ ।
ನೀನೆ ಜಗದಾದಿ ದೈವ ॥
ನೀನೆ ಸರ್ವರ ಕಾವ । ನೀನೆ ಚಂದ್ರಾಸೂರ್ಯ ।
ನೀನಲ್ಲದಿಲ್ಲೆಯ । ಕಾಪಾಡ್ ಶ್ರೀರಾಮ ॥ ೪ ॥

ಭಾಮಿನಿ

ತರತರನ ಹೊಗಳಿಕೆನ ಮಾಡ್ತಾ
ಇರುವ ರಾಜನ ತಲೆನ ಎತ್ತ್‌ತ
ಭರತನಣ್ಣನ್ ಹೇಳ್ತ್ ಕಾಪಾಡಿನೆಯ ನಿನ್ನಂತಾಗ ಕುಸಿಯಾಗಿ ॥
ಇರಿಕೆ ಶಿವನಿವ° ನನ್ನ ಭಕ್ತನ್
ಅರಿಕೆ ಮುಂದಿವ° ನಿನ್ನ ದಾಸನೆ
ಕೊರತೆ ಬಾವಂಗಾಕೆ ಬೊತ್ತ್‌ಯ ಕಾಯೊಕುಂತೇಳ್ತ್ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಶಿವನೇ ನೀ ಕೇಳ್ ನಮ್ಮೊವು ನಿಮ್ಮೊವಂತಿ
ರುವ್ರೊನೋ ಭಕ್ತರ್ ನಿಜನಾ ಹೇಳ್ ॥
ಇವ° ನನ್ನ ಭಕ್ತನೆ ಸತ್ಯ ॥ ೧ ॥
ಅಸ್ಟಾಕೆ ಈಶ್ವರ ರಾಜಂಗೆ ಹೇಳ್ತಾಗ
ಕೊಟ್ಟುಬುಡೊಕು ಕಪ್ಪನೀಗ ॥
ಕಟ್ಟಿದ ಕುದ್ರೆನ ಬುಡೊಕುಂತ ಶಿವ ಹೇಳಿ ।
ಅಸ್ಟಕೆ ಮಾಯಾಗಿ ಹೋತ್ ॥ ೨ ॥

ಕುಸಿಲಿ ರಾಮಂಗೆ ಕಪ್ಪನ ಕೊಟ್ಟ್ ದೊರೆ ಮತ್ತೆ
ಹೊಸತಾಗಿ ಪೂಜೆನ ಮಾಡಿ ॥
ಬಿಸಿಲಲಿ ಮೇವ ಕುದ್ರೆನ ಬುಟ್ಟ್‌ಬುಡಿಕ್ಯಾಗ
ಕುಸಿಯಾತ್ ರಾಮದೇವರಿಗೆ ॥ ೩ ॥

ಸಾಕೇತ ನಗರಕೆ ಶ್ರೀರಾಮ ಹೋಕನ
ಸಾಕಾಗುವಸ್ಟರ ಮಟ್ಟ್ ॥
ಬೇಕಾದ ವಸ್ತುನ ತಕ್ಕಂಡ್ ಶತ್ರುಹ ।
ಲೋಕನ ಗೆಲ್ಲಿಕೆ ಹೋತ್ ॥ ೪ ॥

ಇಲ್ಲಿಗೀಕತೆ ಮುಗಿತ್ ಕೇಳಿ ಹೇಳ್ದವುಕೆಲ್ಲ ।
ಒಳ್ಳೇದಾಗಲಿ ಮಾರಿ ಕಳಿಲಿ ॥
ಒಳ್ಳೇ ಕತೆನೆ ಇದ್ ಶೇಷ ಹೇಳ್ತಿದ
ನೆಲ್ಲ ವಾತ್ಸ್ಯಾಯನ ಮುನಿಗೆ ॥ ೫ ॥

ಮಂಗಳ ಪದ್ಯ

ರಾಗ ನಾದನಾಮಕ್ರಿಯೆ ಏಕತಾಳ

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥
ಮಂಗಳಂ ಅವನಿಸುತಾನಾಥನಿಗೆ
ಮಂಗಳಂ ಅರವಿಂದಾಕ್ಷನಿಗೆ
ಮಂಗಳಂ ಅದ್ಭುತ ಚಾರಿತ್ರನಿಗೆ
ಮಂಗಳಂ ಆದಿ ದೇವನಿಗೆ ॥ ೧ ॥

ಸುಂದರ ವದನನಿಗೆ ಸುದೇಹನಿಗೆ
ಬೃಂದಾರಕ ಗಣವಂದ್ಯನಿಗೆ
ಮಂದರಧರನಿಗೆ ನನ ಮಾಧವನಿಗೆ
ಶುಭಫಲದನಿಗೆ ಹರಿಗೆ ॥ ೨ ॥

ಇನಕುಲದಲಿ ಜನಿಸಿದ ರಾಮನಿಗೆ
ಜನಕ ವಚನ ಪರಿಪಾಲನಿಗೆ
ಮನಸಿಜ ಕೋಟಿ ಲಾವಣ್ಯನಿಗೆ
ಕನಕ ಸಿಂಹಾಸನ ನಿಲಯನಿಗೆ ॥ ೩ ॥

ಮಂದಾನಿಲ ಭೋಜಶಯನನಿಗೆ
ಮಂದಾಕಿನಿ ವರಜನಕನಿಗೆ
ಮಂದಜನಕ ಶತ ಸಂಕಾಶನಿಗೆ
ಮಂದಾರ ರೂಪನಿಗೆ ॥ ೪ ॥

ಇಂದ್ರಾದ್ಯಷ್ಟ ದಿಗೀಶನುತನಿಗೆ
ಚಂದ್ರಾದಿತ್ಯ ಸುನಯನನಿಗೆ ಗ
ಜೇಂದ್ರನ ಸಂರಕ್ಷಿಸಿದ ರಾಮ
ಚಂದ್ರನಿಗೆ ಜಗದ್ರೂಪನಿಗೆ ॥ ೫ ॥

ರಾಜಶೇಖರ ಪ್ರಿಯನಿಗೆ ಮೌನಿ
ರಾಜ ರಾಜ ಪೂಜಿತನಿಗೆ ತ್ಯಾಗ
ರಾಜವಿನುತನಿಗೆ ವರಗಜ
ರಾಜಾದಿ ಭಕ್ತ ವರದನಿಗೆ ॥ ೬ ॥

❖ ❖ ❖



ಸಾಹಿತ್ಯ, ಸಮಾಜವಿಜ್ಞಾನ, ಮತ್ತೆ ವಿಜ್ಞಾನ ಅಧ್ಯಯನ ಶಿಸ್ತುಗಳ ಬಗೆಲಿ ಒಂದೇ ನಮೂನಿನ ಆಸಕ್ತಿ ಇರ್ವ ಡಾ. ಮಾಧವ ಪೆರಾಜೆನವ್ 1967ರ ಅಗಸ್ಟ್ ತಿಂಗಳ 15ನೇ ತಾರೀಕ್‌ಗೆ ಕೊಡ್ಗ್ ಜಿಲ್ಲೆನ ಮಡ್ಕೇರಿ ತಾಲೋಕುನ ಪೆರಾಜೆಲಿ ಹುಟ್ಟಿದೊ. ಇವು ಪ್ರಾಥಮಿಕ ಮತ್ತೆ ಪ್ರೌಢಶಾಲೆ ಶಿಕ್ಷಣನ ತಮ್ಮ ಹುಟ್ಟೂರುಲೆ ಮುಗ್ಸಿದ್, ಮುಂದೆ ಪದವಿ ಪೂರ್ವ ಮತ್ತೆ ಪದವಿ ಶಿಕ್ಷಣನ ಸುಳ್ಯದ ನೆಹರು ಮೆಮೋರಿಯಲ್ ಕಾಲೇಜುಲಿ ಪಡ್ಕೊಂಡ.

ಮುಂದೆ ಮಂಗಳೂರು ವಿಶ್ವವಿದ್ಯಾಲಯಂದ ಎಂ.ಎ ಸ್ನಾತಕೋತ್ತರ ಪದವಿನ ಪಡ್ಕೊಂಡ, ಮತ್ತೆ ಹಂಪಿ ಕನ್ನಡ ವಿಶ್ವವಿದ್ಯಾಲಯಂದ ಪ್ರೊ. ಹಿ.ಚಿ. ಬೋರಲಿಂಗಯ್ಯನವರ ಮಾರ್ಗದರ್ಶನಲಿ ಎಂ.ಫಿಲ್. ಪದವಿ ಮತ್ತೆ ಪ್ರೊ. ಕೆ.ವಿ. ನಾರಾಯಣನವರ ಮಾರ್ಗದರ್ಶನಲಿ ಯಕ್ಷಗಾನ ಮತ್ತೆ ತಾಳಮದ್ದಳೆ ಪಠ್ಯ ಮತ್ತು ಪ್ರದರ್ಶನ ತೇಳುವ ವಿಷಯಲಿ ಡಾಕ್ಟರೇಟ್ ಪದವಿನ ಪಡ್ಕೊಂಡಳ.

ತೌಲನಿಕ ದ್ರಾವಿಡ ವ್ಯಾಕರಣ, ಯಕ್ಷಗಾನ ತಾಳಮದ್ದಳೆ: ನವ್ಯೋತ್ತರ ಸಂಕಥನ, ಡಾ ಸಿದ್ದಲಿಂಗಯ್ಯ, ಡೆರಿಡಾ, ಪರಿಭಾಷೆ, ನಾಡೋಜ (ನಾಟಕ), ಪರಿಪಂಥ (ಯಕ್ಷಗಾನ ಪ್ರಸಂಗ), ಪಂಡಿತ ಪರಂಪರೆಯ ಕೊಳಂಬೆ ಪುಟ್ಟಣ್ಣ ಗೌಡ, ಶ್ರೀ ಭಾಗವತೋ, ಎ ಬ್ರೀಫ್ ಹಿಸ್ಟರಿ ಆಫ್ ಟೈಮ್, ಪಂಪಪೂರ್ವದ ಕನ್ನಡ ಕವಿಗಳು ಮೊದಲಾದ ಕೃತಿಗಳ ರಚಿಸಿಯೊಳ, ಇವು ಎರ್ಡ್ ಸರ್ತಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದಿ. ಗುಂಡ್ಮಿ ಚಂದ್ರಶೇಖರ ಐತಾಳ ಜಾನಪದ ಇನಾಮು, ಸಾಹಿತ್ಯಶ್ರೀ ಇನಾಮುಗಳ ಪಡ್ಕೊಂಡಳ. ವೀರಮಣಿ ಕಾಳಗ ಇವರ ಎರಡ್ನೆ ಯಕ್ಷಗಾನ ಪ್ರಸಂಗ ಕೃತಿಯಾಗುಟು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮಡಿಕೇರಿ

ರೂ. 100